

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 5 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 19 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ; ಅಕ್ರಮ ಬಂಧನ ಆರೋಪದಲ್ಲಿ ಎಸ್‌ಐಟಿಯಿಂದ ಮಾಜಿ ಸಚಿವ, ಹೊಳೆನರಸೀಪುರ ಶಾಸಕ

ರೇವಣ್ಣ ಬಂಧನ

- ನಿರೀಕ್ಷಣಾ ಜಾಮೀನು ನಿರಾಕರಣೆ ಬೆನ್ನಲ್ಲೇ ಎಸ್‌ಐಟಿ ಕ್ಷಿಪ್ರ ಕಾರ್ಯಾಚರಣೆ
- ಮಾಜಿ ಪ್ರಧಾನಿ ದೇವೇಗೌಡರ ನಿವಾಸದಲ್ಲಿ ರೇವಣ್ಣರ ಬಂಧಿಸಿದ ತನಿಖಾ ತಂಡ

ಬೆಂಗಳೂರು, ಮೇ 4– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ, ಅಕ್ರಮ ಬಂಧನ ಆರೋಪದಲ್ಲಿ ಶಾಸಕ ಹೆಚ್.ಡಿ. ರೇವಣ್ಣ ವಿರುದ್ಧ ಕೆ.ಆರ್. ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಧ್ಯಂತರ ನಿರೀಕ್ಷಣಾ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪದ್ಮನಾಭನಗರ ನಿವಾಸದಲ್ಲಿ ಎಸ್‌ಐಟಿ ಅಧಿಕಾರಿಗಳು ಶನಿವಾರ ಸಂಜೆ ಹೆಚ್.ಡಿ. ರೇವಣ್ಣ ಅವರನ್ನು ಬಂಧಿಸಿದರು.

ಶುಕ್ರವಾರ ಸಲ್ಲಿಕೆಯಾಗಿದ್ದ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಇಂದು ಮಧ್ಯಾಹ್ನ ನಡೆಯಿತು. ರೇವಣ್ಣ ಪರ ವಕೀಲ ಮೂರ್ತಿ ಡಿ. ನಾಯ್ಕ್ ಮತ್ತು ಎಸ್‌ಐಟಿ ಎಸ್‌ಪಿಪಿ ಬಿ.ಎನ್. ಜಗದೀಶ್ ಅವರು ಒಂದೂವರೆ ಗಂಟೆ ಕಾಲ ಮಂಡಿಸಿದ ವಾದ–ಪ್ರತಿವಾದವನ್ನು ಆಲಿಸಿದ ವಿಶೇಷ ಕೋರ್ಟ್ ನ್ಯಾಯಾಧೀಶರು, ಮಧ್ಯಂತರ ನಿರೀಕ್ಷಣಾ ಜಾಮೀನು ನಿರಾಕರಿಸಿ, ಪ್ರಕರಣದ ವಿಚಾರಣೆಯನ್ನು ಮೇ 6ಕ್ಕೆ ಮುಂದೂಡಿದರು.

ಇಂದು ಬೆಳಗ್ಗೆಯಿಂದಲೇ ಈ ಪ್ರಕರಣದ ತನಿಖೆಗೆ ಸಂಪೂರ್ಣವಾಗಿ ಸಜ್ಜಾಗಿದ್ದ ಎಸ್‌ಐಟಿ ತಂಡ ರೇವಣ್ಣ ಅವರು ತಮ್ಮ ತಂದೆ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪದ್ಮನಾಭನಗರ ನಿವಾಸದಲ್ಲಿ ಇರುವುದನ್ನು ಖಚಿತಪಡಿಸಿಕೊಂಡಿತ್ತು. ಅತ್ತ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಡೆಯುತ್ತಿರುವಂತೆಯೇ

● 9ನೇ ಪುಟಕ್ಕೆ



ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿ ಕರೆದೊಯ್ಯುತ್ತಿರುವ ಎಸ್‌ಐಟಿ ಅಧಿಕಾರಿಗಳು.

ಅಪಹರಣಕ್ಕೀಡಾಗಿದ್ದ ಸಂತ್ರಸ್ತೆ ಎಸ್‌ಐಟಿಯಿಂದ ರಕ್ಷಣೆ


ಮೈಸೂರು: ಅತ್ತ ಅಪಹರಣಕ್ಕೀಡಾಗಿದ್ದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಎಸ್‌ಐಟಿ ತಂಡ ಹುಣಸೂರು ತಾಲೂಕು ಕಾಳೇನಹಳ್ಳಿ ಗ್ರಾಮದ ರಾಜಶೇಖರ್ ಎಂಬುವರ ತೋಟದ ಮನೆಯಲ್ಲಿ ಶನಿವಾರ ರಕ್ಷಿಸಿ, ಕರೆದೊಯ್ದಿದೆ. ಈಕೆಯನ್ನು ಏಪ್ರಿಲ್ 29ರಂದು ರಾತ್ರಿ ಸತೀಶ್ ಬಾಬಣ್ಣ ಎಂಬಾತ ರೇವಣ್ಣ ಅವರ ಸೂಚನೆ ಮೇರೆಗೆ ಕರೆದೊಯ್ದಿದ್ದು,

ರೇವಣ್ಣ ಮಾಜಿ ಆಪ್ತ ಸಹಾಯಕ ಎಸ್‌ಐಟಿ ವಶಕ್ಕೆ

ತನ್ನ ತಾಯಿಯನ್ನು ಅಪಹರಿಸಿ, ಅಕ್ರಮ ಬಂಧನದಲ್ಲಿಡಲಾಗಿದೆ. ಆಕೆಯ ಪ್ರಾಣಕ್ಕೆ ಅಪಾಯವಿದೆ ಎಂದು ಮಹಿಳೆಯ ಪುತ್ರ ಕೆ.ಆರ್.ನಗರ ಠಾಣೆಯಲ್ಲಿ ಮೇ 2ರಂದು ಪ್ರಕರಣ ದಾಖಲಿಸಿದ್ದ. ಈ ಪ್ರಕರಣದಲ್ಲಿ ಮೇ 3ರಂದು ಎಸ್‌ಐಟಿ ಪೊಲೀಸರು ಸತೀಶ್ ಬಾಬಣ್ಣ ಎಂಬಾತನನ್ನು ಬಂಧಿಸಿದ್ದು, ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ.

● 9ನೇ ಪುಟಕ್ಕೆ

ಅಮಿತ್ ಷಾ–ಕುಮಾರಸ್ವಾಮಿ ಮಾತುಕತೆ; 'ಮೈತ್ರಿ' ಪರಿಶೀಲನೆ?



ಬೆಂಗಳೂರು, ಮೇ 4– ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ಬಂಧಿಸಿದ ಬೆನ್ನಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಷಾ ಆಂಧ್ರಪ್ರದೇಶಕ್ಕೆ ತೆರಳುವ ಮಾರ್ಗ, ಇಂದು ರಾತ್ರಿ ಬೆಂಗಳೂರಿಗೆ ಆಗಮಿಸಿದ್ದು, ಇಲ್ಲಿನ ವೆಸ್ಟೆಂಡ್ ಹೋಟೆಲ್‌ನಲ್ಲಿ ತಂಗಿದ್ದಾರೆ.


ಇತ್ತ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಹಾಗೂ ಅಕ್ರಮ ಬಂಧನ ಪ್ರಕರಣದಲ್ಲಿ ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ಬಂಧಿಸಿದ್ದು, ಪ್ರಕರಣ ದಿನೇ ದಿನೆ ಹೊಸ ದಿಕ್ಕು ಪಡೆಯುತ್ತಿದೆ.

ಈ ಸಂದರ್ಭದಲ್ಲಿ ಬೆಂಗಳೂರಿಗೆ ಆಗಮಿಸಿರುವ ಕೇಂದ್ರ ಸಚಿವ ಅಮಿತ್ ಷಾ, ವೆಸ್ಟೆಂಡ್ ಹೋಟೆಲ್‌ನಲ್ಲಿ ತಮ್ಮನ್ನು ಭೇಟಿ ಮಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಈ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ತಮ್ಮ ಕುಟುಂಬವನ್ನು ರಾಜಕೀಯವಾಗಿ ಟಾರ್ಗೆಟ್ ಮಾಡುವ ಮೂಲಕ ನಮ್ಮನ್ನು ಮುಗಿಸುವ ಕುತಂತ್ರ ನಡೆಸಿದೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ ಎನ್ನಲಾಗಿದೆ.

ಈ ಪ್ರಕರಣ ದಿನೇ ದಿನೆ ಹೊಸ ತಿರುವು ಪಡೆಯುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಉಭಯ ಪಕ್ಷಗಳ ಭವಿಷ್ಯದ ಹಿತದೃಷ್ಟಿಯಿಂದ ಮೈತ್ರಿ ಮುರಿದುಕೊಳ್ಳುವ ಪ್ರಸ್ತಾಪವನ್ನು ಅಮಿತ್ ಷಾ, ಕುಮಾರಸ್ವಾಮಿಯವರ ಮುಂದಿಟ್ಟಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಪರಿಸ್ಥಿತಿ ಅರಿತು ಕುಮಾರಸ್ವಾಮಿ ಅವರೂ ಅಮಿತ್ ಷಾ ನಿಲುವಿಗೆ ಸಹಮತಿಸಲು ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.









ಆದಿಶಕ್ತಿ ಪಟ್ಟಲಮ್ಮನ ಜಾತ್ರೆ; ಜಾನಪದ ಉತ್ಸವ



ಮೈಸೂರು,ಮೇ 4–ನಗರದ ಡಿ.ದೇವ ರಾಜ ಅರಸು ಕಾಲೋನಿಯಲ್ಲಿ ಆದಿಶಕ್ತಿ ಪಟ್ಟಲಮ್ಮ ಹಾಗೂ ಕತ್ತಿಮುನೇಶ್ವರ ಸ್ವಾಮಿ ಹಬ್ಬದ ಅಂಗವಾಗಿ ಜಾನಪದ ಉತ್ಸವ ಗುರುವಾರ ನಡೆಯಿತು.

ಉತ್ಸವದ ಅಂಗವಾಗಿ ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ವೃಂದದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡೊಳ್ಳು ಕುಣಿತ, ಪಟ ಕುಣಿತ, ಗಾರುಡಿ ಗೊಂಬೆ, ಸೋಮನ ಕುಣಿತ, ಕೀಲು ಕುದುರೆ, ನಗಾರಿ, ಮಹಿಳಾ ವೀರಗಾಸೆ ಹಾಗೂ ತಮಟೆ ವಾದ್ಯ ತಂಡಗಳು ಭಾಗವಹಿಸಿದ್ದವು. ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ವೃಂದದ ಅಧ್ಯಕ್ಷರಾದ ಸಿ.ಮಂಜುನಾಥ್, ಕಾರ್ಯದರ್ಶಿ ರಾಜಣ್ಣ, ಡಿ.ದೇವರಾಜ್ ಅರಸು ಕಾಲೋನಿಯ ಛೇರ್ಮನ್ನರು, ಯಜಮಾನರು, ಸಂಘದ ಪದಾಧಿಕಾರಿಗಳು, ಕಾಲೋನಿಯ ಮುಖ್ಯಸ್ಥರು, ಮಹಿಳಾ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಪ್ರಜ್ವಲ್, ಹೆಚ್.ಡಿ.ರೇವಣ್ಣ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಸಂತ್ರಸ್ತ ಮಹಿಳೆಯರನ್ನು ರಕ್ಷಿಸಿ, ದೃಶ್ಯ ಲೀಕ್ ಮಾಡಿದವರನ್ನು ಶಿಕ್ಷಿಸಿ



ಲೈಂಗಿಕ ದೌರ್ಜನ್ಯ ಆರೋಪಕ್ಕೆ ಗುರಿಯಾಗಿರುವ ಸಂಸದ ಪ್ರಜ್ವಲ್ ರೇವಣ್ಣ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿ, ಶಿಕ್ಷೆಗೊಳಪಡಿಸಿ, ಸಂತ್ರಸ್ತ ಮಹಿಳೆಯರನ್ನು ರಕ್ಷಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ ನಡೆಸಿತು.

ಮೈಸೂರು, ಮೇ 4(ಜಿಎ)–ಲೈಂಗಿಕ ದೌರ್ಜನ್ಯವೆಸಗಿದ ಆರೋಪಕ್ಕೆ ಸಿಲುಕಿರುವ ಸಂಸದ ಪ್ರಜ್ವಲ್ ರೇವಣ್ಣ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿ. ಶಿಕ್ಷೆಗೆ ಒಳಪಡಿಸಿ, ಸಂತ್ರಸ್ತ ಮಹಿಳೆಯರನ್ನು ರಕ್ಷಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಶನಿವಾರ ಪ್ರತಿಭಟನೆ ನಡೆಸಿತು.

ನಗರದ ಚಿಕ್ಕಗಡಿಯಾರದ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು ಅತ್ಯಾಚಾರಿಗಳನ್ನು ಶಿಕ್ಷಿಸಿ, ಘನತೆಯ ಬದುಕು ಮಹಿಳೆಯ ಹಕ್ಕು ಎಂಬ ವಿವಿಧ ಪ್ಲೇಕಾರ್ಡ್‌ಗಳನ್ನು ಹಿಡಿದು ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ಹೆಚ್.ಡಿ. ರೇವಣ್ಣ ವಿರುದ್ಧ ಘೋಷಣೆ ಕೂಗಿದರು.

ಹಾಸನದಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯಗಳ ಚಿತ್ರ, ದೃಶ್ಯವನ್ನು ಪೆನ್‌ಡ್ರೈವ್ ಮುಖಾಂತರ ಹಂಚಲಾಗಿದೆ. ಇವುಗಳೆಲ್ಲ ಸಾಮಾಜಿಕ ಜಾಲತಾಣದಲ್ಲೂ ಹರಿದಾಡುತ್ತಿವೆ. ಎಲ್ಲೆಡೆ ಈ ಕೃತ್ಯದ ಕುರಿತು ಸಾರ್ವಜನಿಕರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಈ ಚಿತ್ರದಲ್ಲಿರುವ ಮಹಿಳೆಯರ ಖಾಸಗಿ, ಕೌಟುಂಬಿಕ ಬದುಕು ಛಿದ್ರವಾಗಿದೆ. ಕೆಲವರೂ ಆತಹತ್ಯೆಗೆ ಪ್ರಯತ್ನಿಸಿರುವುದೂ ವರದಿಯಾಗಿದೆ ಎಂದು ಪ್ರತಿಭಟನಾಕಾರರು ಕಳವಳ ವ್ಯಕ್ತಪಡಿಸಿದರು.

ಘಟನೆ ಬೆಳಕಿಗೆ ಬಂದ ತಕ್ಷಣವೇ ಸರ್ಕಾರ ಸೂಕ್ತ ಕ್ರಮ ಕೈಗೊಂಡಿದ್ದರೆ ಲೈಂಗಿಕ ಹಗರಣದ ದೃಶ್ಯಗಳು ವ್ಯಾಪಕವಾಗಿ ಹಂಚಿಕೆಯಾಗದಂತೆ ತಡೆಯಬಹುದಿತ್ತು. ಸರ್ಕಾರಕ್ಕೆ ಮಹಿಳೆಯರ ಘನತೆಯ ಪ್ರಶ್ನೆಗಿಂತಲೂ ಚುನಾವಣಾ ರಾಜಕೀಯ ಪ್ರಮುಖವಾಗಬಾರದಿತ್ತು. ರಾಜಕೀಯ ಅಧಿಕಾರ, ಆಸ್ತಿ, ಜಾತಿಯ ಮದದಿಂದ ಮರೆಯುತ್ತಿರುವ ಪ್ರಜ್ವಲ್ ರೇವಣ್ಣ ನೂರಾರು ಮಹಿಳೆಯರನ್ನು ತನ್ನ ಕಾಮದಾಹಕ್ಕೆ ನಿರಂತರವಾಗಿ ಬಳಸಿಕೊಂಡು ತನ್ನ ಮೊಬೈಲ್ ಚಿತ್ರಿಸಿಕೊಂಡಿದ್ದಾನೆ ಎಂದು ಕಿಡಿಕಾರಿದರು.


ಇಡೀ ಪ್ರಕರಣದ ತನಿಖೆಗೆ ರಚನೆ ಮಾಡಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಯಾವುದೇ ಒತ್ತಡಗಳಿಗೆ ಮಣಿಯದೆ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ರಕ್ಷಣೆ, ನ್ಯಾಯ ಒದಗಿಸಬೇಕು. ಸಾಕ್ಷಿಗಳಿಗೂ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು.

ಲೈಂಗಿಕ ಚಿತ್ರ, ದೃಶ್ಯವನ್ನು ಹಂಚಿಕೆ ಮಾಡಿದ ವ್ಯಕ್ತಿಗಳನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಿ ಬಂಧಿಸಬೇಕು. ಅಕ್ರಮ ನಡೆದಿರುವುದು ಗೊತ್ತಿದ್ದರೂ ಅದನಿಟ್ಟುಕೊಂಡು ಅದು ಬಹಿರಂಗವಾಗಿ ಹರಿದಾಡಲು ಸಮಯ ಕಾದ ಬಿಜೆಪಿ ಮುಖಂಡ ಡಿ.ದೇವರಾಜೇಗೌಡ ಅವರನ್ನು ವಿಚಾರಣೆಗೆ ಒಳಪಡಿಸಬೇಕು. ಸಂತ್ರಸ್ತ ಮಹಿಳೆಯರ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡಬೇಕು. ಅವರಿಗೆ ಸೂಕ್ತ ರಕ್ಷಣೆ ನೀಡಬೇಕು. ಅವರಿಗೆ ಪ್ರತ್ಯೇಕ ಕೌನ್ಸೆಲಿಂಗ್ ಕೇಂದ್ರ ತೆರೆಯಬೇಕು. ಪ್ರತ್ಯೇಕ ದೂರು ಕೇಂದ್ರ ಕೇಂದ್ರ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ನಾರಾಯಣ್, ಮುಖಂಡರಾದ ರತಿರಾವ್, ಉಮಾ ದೇವಿ, ಕೆ.ಆರ್.ಸುಮತಿ, ಸವಿತಾ ಪ.ಮಲ್ಲೇಶ್, ಕೆ.ಎಸ್.ಶಿವರಾಮ್, ಗೋಪಾಲ್, ಸ್ಟ್ಯಾನ್ಲಿ, ಪ್ರೊ.ಕಾಳಚನ್ನೇಗೌಡ, ಹೊಸಕೋಟೆ ಬಸವರಾಜ್, ಚಂದ್ರಶೇಖರ್ ಮೇಟಿ, ಬಸವಲಿಂಗಯ್ಯ, ನಾ ದಿವಾಕರ್, ಸೀಮಾ, ನಾಗರಾಜು, ಪರಶು, ಕೆ.ಎಸ್.ಶಿವರಾಮು, ರವಿನಂದನ್, ಲೋಕೇಶ್ ಮಾದಾಪುರ ಮತ್ತಿತರರು ಉಪಸ್ಥಿತರಿದ್ದರು.

ಮೇ 9, ಪತ್ರಕರ್ತ ರಮೇಶ್ ಉತ್ತಪ್ಪರ 4 ಕೃತಿ ಬಿಡುಗಡೆ





ಮೈಸೂರು, ಮೇ 4(ಆರ್‌ಕೆ)–ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿರುವ ವಿಜ್ಞಾನ ಭವನದಲ್ಲಿ ಮೇ 9ರಂದು ಬೆಳಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪತ್ರ ಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರು ರಚಿಸಿರುವ ವನ್ಯಜೀವಿ ಕುರಿತ 4 ಕೃತಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಬೆಂಗಳೂರಿನ ಅಕ್ಷರ ಮಂಟಪ ಪ್ರಕಾಶನ ಹಾಗೂ ಮೈಸೂರು ಕಲ್ಪತರು ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಐತಿಚಂಡ ರಮೇಶ್ ಉತ್ತಪ್ಪ ಅವರ 'ಕಾಡು ಹೇಳಿದ ಕಥೆ, ಹಾವು, ನಂಬಿಕೆ ಹಾಗೂ ಮನೋವೈಜ್ಞಾನಿಕ ವಿಶ್ಲೇಷಣೆ' ಪುಸ್ತಕಗಳನ್ನು ಲೋಕಾರ್ಪಣೆ ಮಾಡುವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪ್ರಜಾವಾಣಿ ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, ವಿಜಯವಾಣಿಯ ಕೆ.ಎನ್.ಚನ್ನೇಗೌಡ, ಕನ್ನಡ ಪ್ರಭದ ರವಿ ಹೆಗ್ಡೆ, ಮೈಸೂರು ವಿವಿ ಪತ್ರಿ ಕೋದ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಸಪ್ನ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಮೈಸೂರು ಕಲ್ಪತರು ಅಸೋಸಿಯೇಷನ್‌ನ ಎ.ಪಿ.ನಾಗೇಶ್, ಪ್ರಕಾಶಕ ಚೇತನ ಕಣನೂರು ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಹಾಡಹಗಲೇ ಮನೆ ಬಾಗಿಲು ಮೀಟಿ ಚಿನ್ನಾಭರಣ, ನಗದು ಕಳವು

ಮೈಸೂರು, ಮೇ 4(ಎಸ್‌ಬಿಡಿ)– ಹಾಡಹಗಲೇ ಬಾಗಿಲು ಮೀಟಿ ನಗ–ನಾಣ್ಯ ದೋಚಿರುವ ಘಟನೆ ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿ ಶುಕ್ರವಾರ ನಡೆದಿದೆ. ವಿಜಯನಗರ ಮೂರನೇ ಹಂತ, 2ನೇ ಘಟ್ಟದ ನಿವಾಸಿ ಸ್ವರೂಪ್ ಅವರ ಮನೆಗೆ ನುಗ್ಗಿರುವ ಖದೀಮರು 1.20 ಲಕ್ಷ ರೂ.ಗೂ ಹೆಚ್ಚು ಮೌಲ್ಯದ ಚಿನ್ನ–ಬೆಳ್ಳಿ ಆಭರಣಗಳು ಹಾಗೂ 20 ಸಾವಿರ ರೂ. ನಗದು ದೋಚಿದ್ದಾರೆ.

ವಿಜಯನಗರ 4ನೇ ಹಂತ ಬಸವನಹಳ್ಳಿ ಮುಖ್ಯರಸ್ತೆಯಲ್ಲಿ ಬುಕ್ಸ್ ಮತ್ತು ಸ್ಟೇಷನರಿ ಅಂಗಡಿ ಇಟ್ಟುಕೊಂಡಿರುವ ಸ್ವರೂಪ್, ಶುಕ್ರವಾರ ಬೆಳಗ್ಗೆ 9 ಗಂಟೆಗೆ ಕುಟುಂಬ ಸಮೇತ ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕು ಚೆಕ್ಕೇರೆ ಗ್ರಾಮದ ದೇವಸ್ಥಾನಕ್ಕೆ ತೆರಳಿದ್ದರು. ಮಧ್ಯಾಹ್ನ 2.30ಕ್ಕೆ ವಾಪಸ್ ಬಂದಾಗ ಮನೆ ಮುಂಬಾಗಿಲು ಮೀಟಿರುವುದು ಗೊತ್ತಾಯಿತು. ಗಾಬರಿಯಿಂದ ಒಳಹೋದಾಗ ಬೀರುವಿನ ಬಾಗಿಲನ್ನೂ ಮೀಟಿದ್ದರು. ಅಲ್ಲಿದ್ದ ವಸ್ತುಗಳೆಲ್ಲಾ ಮಂಚದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪರಿಶೀಲಿಸಿದಾಗ ಚಿನ್ನಾಭರಣ ಹಾಗೂ ನಗದು ಕಳುವಾಗಿರುವುದು ಗೊತ್ತಾಯಿತು. ಈ ಸಂಬಂಧ ಸ್ವರೂಪ್ ನೀಡಿರುವ ದೂರಿನನ್ವಯ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಾಳೆ ತೋಟದಲ್ಲಿ ಅಡಗಿದ್ದ ಹುಲಿ ಸುರಕ್ಷಿತ ಸೆರೆ; ಅರಣ್ಯದಲ್ಲಿ ಬಿಡುಗಡೆ



ಮೈಸೂರು, ಮೇ 4(ಎಸ್‌ಬಿಡಿ)– ಬಾಳೆ ತೋಟದಲ್ಲಿ ಸೇರಿಕೊಂಡಿದ್ದ ಸುಮಾರು 8 ವರ್ಷದ ಗಂಡು ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ.

ಹೆಚ್.ಡಿ.ಕೋಟೆ ತಾಲೂಕು ಮೇಟಿಕುಪ್ಪೆ–ಅಂತರಸಂತೆ ಅರಣ್ಯ ವಲಯ ವ್ಯಾಪ್ತಿಯ ಮಳಲಿ ಗ್ರಾಮದ ಬಾಳೆ ತೋಟದಲ್ಲಿದ್ದ ಹುಲಿಯನ್ನು ದಸರಾ ಅಂಬಾರಿ ಆನೆ ಅಭಿಮನ್ಯು, ಭೀಮ ಹಾಗೂ ಕುಮ್ಕಿ ಆನೆಗಳ ಸಹಕಾರದೊಂದಿಗೆ ಸೆರೆ ಹಿಡಿದು, ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

ಶನಿವಾರ ಬೆಳಗ್ಗೆ ಸುಲೋಚನಾ ಎಂಬುವರ ಬಾಳೆ ತೋಟದಲ್ಲಿ ಹುಲಿ ಕಾಣಿಸಿಕೊಂಡಿತ್ತು. ಮಾಹಿತಿ ತಿಳಿದ ಅಂತರಸಂತೆ ವಲಯದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಪರಿಶೀಲನೆ ನಡೆಸಿದ್ದರು. ಈ ವೇಳೆ ಹುಲಿ ತೋಟದಲ್ಲಿರುವುದು ಖಚಿತವಾಗಿದ್ದರಿಂದ ಕೂಡಲೇ ಸಿಬ್ಬಂದಿಯ ತಂಡಗಳನ್ನು ತೋಟದ ಸುತ್ತಲೂ ನಿಯೋಜಿಸಿ, ಮೇಲಧಿಕಾರಿಗಳಿಗೆ ವರದಿ ನೀಡಲಾಗಿತ್ತು. ಬಳಿಕ ಮುಖ್ಯ ವನ್ಯಜೀವಿ ಪರಿಪಾಲಕರ ನಿರ್ದೇಶನದಂತೆ ಅಭಿಮನ್ಯು, ಭೀಮ ಹಾಗೂ ಕುಮ್ಕಿ ಆನೆಗಳ ಸಹಾಯದೊಂದಿಗೆ ಹುಲಿಗೆ ಅರವಳಿಕೆ ನೀಡುವ ಮೂಲಕ ಅದನ್ನು ಸೆರೆ ಹಿಡಿಯಲಾಯಿತು. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ನಿರ್ದೇಶನದಲ್ಲಿ ಕಾರ್ಯಾಚರಣೆಯಲ್ಲಿ ಮೇಟಿಕುಪ್ಪೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್.ರಂಗಸ್ವಾಮಿ, ನಾಗರಹೊಳೆ ಆನೆ ಪ್ರಭಾರಕ ಹಾಗೂ ಪಶುವೈದ್ಯ ಡಾ.ಹೆಚ್.ರಮೇಶ್, ವಲಯ ಅರಣ್ಯಾಧಿಕಾರಿಗಳಾದ ಭರತ್ ತಳವಾರ್, ಎಸ್.ಡಿ.ಮಧು, ಕೆ.ಎನ್.ಹರ್ಷಿತ್, ಅಂತರಸಂತೆ ಠಾಣೆ ಪಿಎಸ್‌ಐ ಮತ್ತು ಸಿಬ್ಬಂದಿ ಭಾಗವಹಿಸಿದ್ದರು. ಮಳಲಿ ಗ್ರಾಮಸ್ಥರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸಹಕಾರ ನೀಡಿದರು. ಪಶುವೈದ್ಯರು ಹುಲಿಯ ಆರೋಗ್ಯ ತಪಾಸಣೆ ನಡೆಸಿ, ಅಗತ್ಯ ಚಿಕಿತ್ಸೆ ನೀಡಿ ದರು. ಹುಲಿ ಆರೋಗ್ಯವಾಗಿದ್ದು ಅದನ್ನು ಮುಖ್ಯ ವನ್ಯಜೀವಿ ಪರಿಪಾಲಕರ ನಿರ್ದೇಶನದಂತೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಮೈಸೂರು ವಿವಿ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟದ ಬಹುಮಾನ ವಿತರಣೆ



ಮೈಸೂರು, ಮೇ 4–ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟದ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ–ಪೋಷಣೆ ವಿಭಾಗದ ಅಧ್ಯಕ್ಷ ಡಾ.ಅಸ್ನಾ ಉರೂಜ್ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಿದ್ದರು. ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ.ಪಿ.ಕೃಷ್ಣಯ್ಯ ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ಟೆರೇಷಿಯನ್ ಕಾಲೇಜು, ಮೈಸೂರು 27 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆಯಿತು. ಪಿ.ಜಿ.ಎಸ್.ಸಿ ಮಾನಸಗಂಗೋತ್ರಿ, ಮೈಸೂರು 18 ಅಂಕಗಳ ಪಡೆದು ದ್ವಿತೀಯ ಸ್ಥಾನ ಹಾಗೂ ಸೆಫಿಯಂಟ್ ಕಾಲೇಜು 11 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆಯಿತು. ಮೈಸೂರಿನ ಟೆರಿಷಿಯನ್ ಕಾಲೇಜು ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ಕ್ರೀಡಾಕೂಟದಲ್ಲಿ 32 ಕಾಲೇಜುಗಳಿಂದ 14 ವಿವಿಧ ಕ್ರೀಡೆಗಳ ಸಮಾರು 400 ಮಹಿಳಾ ಕ್ರೀಡಾಪಟುಗಳು ಭಾಗವಹಿಸಿದ್ದರು.

ಮೇ 12 ರೋಟರಿ ಜಿ20 ಯೋಗ ಶೃಂಗ ಸಭೆ ದೇಶ–ವಿದೇಶದ ಪ್ರಮುಖರು ಭಾಗಿ


ಮೈಸೂರು, ಮೇ 4(ಜಿಎ)–ರೋಟರಿ ಜಿಲ್ಲೆ 3181 ಸಂಸ್ಥೆಯಿಂದ ಮೇ 18ರಂದು 9:30ಕ್ಕೆ ನಗರದ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ರೋಟರಿ ಜಿ20 ಯೋಗ ಶೃಂಗ ಸಭೆ ಆಯೋಜಿಸಲಾಗಿದೆ ಎಂದು ಯೋಗ ಸಮಿತಿ ಚೇರ್ಮನ್ ರಂಗರಾವ್ ಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಘಾಟನೆಯಲ್ಲಿ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ವಿಶ್ವವಿದ್ಯಾಲಯ ಕುಲಪತಿ ನಾಗೇಂದ್ರ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಮುಖರಾದ ಅಲೆಕ್ಸಾಂಡ್ರಾ, ಕೆ.ಪಿ.ನಾಗೇಶ್, ಅರಳುಮಲ್ಲಿಗೆ ಪಾರ್ಥಸಾರಥಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ದೇಶ ವಿದೇಶದ ಪ್ರಮುಖರು ಭಾಗವಹಿಸುವರು. ಮೈಸೂರನ್ನು ಯೋಗ ಮತ್ತು ಪ್ರವಾಸದ ಕೇಂದ್ರವಾಗಿ ಪ್ರಾಯೋಜಿಸುವುದು ನಮ್ಮ ಉದ್ದೇಶ. ಸಭೆಯು ಜಿ–20 ದೇಶಗಳ ಜನರಿಗೆ ಆರೋಗ್ಯ ಪ್ರವಾಸಕ್ಕಾಗಿ ನಗರವನ್ನು ಪರಿಚಯಿಸುವ ಕೆಲಸ ಮಾಡಲಿದೆ ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಸ್ಟೇರಿಂಗ್ ಕಮಿಟಿ ಅಧ್ಯಕ್ಷ ಎಂ.ಸಿ.ಎಸ್.ಮನೋಹರ್, ಪ್ರಚಾರ ಸಮಿತಿ ಅಧ್ಯಕ್ಷ ರಾಜಶೇಖರ ಕದಂಬ, ಪ್ರಮುಖರಾದ ಎಚ್.ಆರ್.ಕೇಶವ, ಜಗದೀಶ್ ಉಪಸ್ಥಿತರಿದ್ದರು.

ಇಂದು ಶ್ರೀ ಶ್ಯಾಮ ಕೃಷ್ಣಾಮೃತ



ಮೈಸೂರು, ಮೇ 4–ಮೈಸೂರಿನ ಶ್ರೀ ಕೃಷ್ಣಗಾನ ಸಭಾ ಮತ್ತು ಸುರಭಿ ಗಾನ ಕಲಾಮಂದಿರ ಸಂಯುಕ್ತಾಶ್ರಯದಲ್ಲಿ ಮೇ 5ರಂದು ಸಂಜೆ 6 ಗಂಟೆಗೆ ಆಳ್ವಾರ್ ಕಲಾಭವನದಲ್ಲಿ ಶ್ರೀ ಶ್ಯಾಮ ಕೃಷ್ಣಾಮೃತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ವೇಳೆ ಶ್ರೀ ಶ್ಯಾಮ ಶಾಸ್ತ್ರಿಗಳ ಭಾವಚಿತ್ರವನ್ನು ಪ್ರಸಿದ್ಧ ಕೊಳಲು ವಾದಕ ವಿದ್ವಾನ್ ಡಾ.ಸಿ.ಎ. ಶ್ರೀಧರ್ ಅನಾವರಣ ಮಾಡುವರು. ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದು, ವಿದ್ವಾನ್ ಡಾ.ಸುಕನ್ಯಾ ಪ್ರಭಾಕರ್ ಗೌರವಾನ್ವಿತ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.05.2024 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಉಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಮತ್ತು ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಶ್ರೀ ಪ್ರಸನ್ನ ಸುಂದರ ರಾಮಮಂದಿರ ಸೇವಾ ಸಮಿತಿ ಟ್ರಸ್ಟ್ :** ಶ್ರೀ ಕ್ರೋಧಿ ನಾಮ ಸಂವತ್ಸರ 88ನೇ ವರ್ಷದ ಶ್ರೀ ರಾಮೋತ್ಸವ, ಹನುಮಂತೋತ್ಸವ, ಮಧ್ಯಾಹ್ನ 12.30 ಗಂಟೆಗೆ ಮಹಾಮಂಗಳಾರತಿ, ಅಷ್ಟಾವಧಾನ, ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ, ಶಯನೋತ್ಸವ, ಸಂಜೆ ದೇವರಿಗೆ ವಿವಿಧ ಖಾದ್ಯ ಪದಾರ್ಥಗಳ ಅಲಂಕಾರ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :**ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಹಿರಿಯ ಸಾಹಿತಿಗಳಿಗೆ ಸನ್ಮಾನ, ಕವಿಗೋಷ್ಠಿ, ಗೀತ ಗಾಯನ ಕಾರ್ಯಕ್ರಮ, ಉದ್ಘಾಟನೆ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಸಿ.ಪಿ.ಸಿದ್ಧಾಶ್ರಮ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಪ್ರಾಧ್ಯಾಪಕ ಪ್ರೊ. ವಿಜಯಕುಮಾರಿ ಎಸ್. ಕರೀಕಲ್ ಅವರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಹೆಜ್ಜೆ ಗುರುತುಗಳು ಕುರಿತು ಉಪನ್ಯಾಸ, ಸನ್ಮಾನಿತರು: ಹಿರಿಯ ಸಾಹಿತಿಗಳಾದ ಪ್ರೊ.ಎಸ್.ರಾಮಪ್ರಸಾದ್, ಶ್ರೀಮತಿ ಟಿ.ಎನ್.ನಾಗರತ್ನ, ಸಿ.ಚಾಮಶೆಟ್ಟಿ, ಶ್ರೀಮತಿ ಇಂದಿರಾ ಪಾಟೀಲ್, ಸ್ಥಳ: ಜಿಲ್ಲಾ ಕಸಾಪ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ, ಕನ್ನಡ ಸಾಹಿತ್ಯ ಕಲಾಕೂಟ :** ಇಷ್ಟಲಿಂಗ ಜನಕ ಬಸವಣ್ಣ ಕಲಾಕೃತಿ ಲೋಕಾರ್ಪಣೆ ಹಾಗೂ ಬಸವ ಜಯಂತಿ ಕಾರ್ಯಕ್ರಮ, ಕಲಾಕೃತಿ ಲೋಕಾರ್ಪಣೆ : ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉಪಸ್ಥಿತರು : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸಂಸ್ಕೃತಿ ಪೋಷಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಹಿರಿಯ ಕಲಾವಿದ ಎಲ್. ಶಿವಲಿಂಗಪ್ಪ, ಜೆಎಲ್‌ಎಂ ಅಧ್ಯಕ್ಷ ಶರಣ ಮಹಾದೇವಪ್ಪ, ಪ್ರಾಸ್ತಾವಿಕ ಭಾಷಣ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ನಟನ ರಂಗಶಾಲೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** ರಜಾ ಮಜಾ ಸಮಾರೋಪ ಸಮಾರಂಭ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಮತ್ತು ಲೇಖಕಿ ಡಾ. ಧರಣಿದೇವಿ ಮಾಲಗತ್ತಿ, ಹಿರಿಯ ರಂಗಕರ್ಮಿ ಪ್ರೊ.ಲಕ್ಷ್ಮಿ ಚಂದ್ರಶೇಖರ್, ರಂಗಭೂಮಿ ಕಲಾವಿದರಾದ ಅಶ್ವಥ್ ಯಾಚೇನಹಳ್ಳಿ, ಕುರಿ ಪ್ರತಾಪ್, ಸುದರ್ಶನ್ ರಂಗಪ್ರಸಾದ್, ಜೀ ಕನ್ನಡ ಮುಖ್ಯಸ್ಥ ಶರಣಯ್ಯ, ಸಿನಿಮಾ ತಾರೆ ಶ್ರೀಮತಿ ಸಂಗೀತಾ ಭಟ್, ನಟನ ಅಧ್ಯಕ್ಷ ಕೆ.ಎಸ್.ಆನಂದ್‌ಬಾಬು, ಸುಪ್ರೀಮ್ ಪಬ್ಲಿಕ್ ಸ್ಕೂಲ್ ಮುಖ್ಯಸ್ಥ ರವೀಂದ್ರಸ್ವಾಮಿ, ನಟನ ಪುರಸ್ಕಾರ: ವೃತ್ತಿ ರಂಗಭೂಮಿ ಹಿರಿಯ ನಟಿ ಶ್ರೀಮತಿ ಎಚ್.ಟಿ. ಇಂದಿರಮ್ಮ, ರಂಗ ಗಿತೆಗಳು, ಕಂಸಾಳೆ, ಯಕ್ಷಗಾನ, ಕಂಗೀಲು, ಡೊಳ್ಳು, ಮಲ್ಲಗಂಬ, ಹಗ್ಗದ ಮಲ್ಲಕಂಬ, 6 ಮಕ್ಕಳ ನಾಟಕಗಳು, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 4ಕ್ಕೆ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಘಟಕ :** ಸುಗಮ ಸಂಗೀತ ಕಾರ್ಯಾಗಾರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಖ್ಯಾತ ಗಾಯಕ ಪುತ್ತೂರು ನರಸಿಂಹನಾಯಕ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ.ಟಿ. ಹನುಮಂತು, ಎ.ಡಿ. ಶ್ರೀನಿವಾಸ್, ಸ್ಥಳ: ಶ್ರೀ ಅನಂತೇಶ್ವರ ಭವನ, ಹೂಟಗಳ್ಳಿ, ಸಂಜೆ 5ಕ್ಕೆ.

■ **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಪ್ರೆಸ್ ಕ್ಲಬ್, ಬೆಂಗಳೂರು :** ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರಬಾಬು ಅವರು ರಚಿಸಿರುವ ವ್ಯಂಗ್ಯ ಚಿತ್ರ ಹಾಗೂ ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಮುಖ್ಯ ಅತಿಥಿಗಳು : ಹಿರಿಯ ಕಲಾವಿದ ಎಲ್. ಶಿವಲಿಂಗಪ್ಪ, ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘದ ಅಧ್ಯಕ್ಷ ವಿ.ಆರ್.ಸಿ. ಶೇಖರ್, ಸಂಸ್ಕೃತಿ ಪೋಷಕ ಡಾ. ಕೆ. ರಘುರಾಂ ವಾಜಪೇಯಿ, ಯೋಗ ವಿತ್ ಶ್ರೀನಾಥ್ ಸಂಸ್ಥಾಪಕ ಶ್ರೀನಾಥ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಸಂಜೆ 5ಕ್ಕೆ

■ **ಮೈಸೂರಿನ ಚಿನ್ಮಯ ಮಿಷನ್:** ಪೂಜ್ಯ ಸ್ವಾಮಿ ಚಿನ್ಮಯಾನಂದರ ಜಯಂತ್ಯುತ್ಸವ, ಸಾನ್ನಿಧ್ಯ : ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದಜೀ ಮಹಾರಾಜ್, ಮುಖ್ಯ ಅತಿಥಿಗಳು: 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ'ದ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಚಿನ್ಮಯ ಮಿಷನ್ನಿನ ಆಚಾರ್ಯರಾದ ಸ್ವಾಮಿನಿ ಕಾಶಿಕಾನಂದಾಜಿ ಅವರಿಂದ ಚಿನ್ಮಯಾನಂದರ ಜೀವನದ ಧ್ಯೇಯ, ಕಾರ್ಯ ಹಾಗೂ ಚಿನ್ಮಯ ಮಿಷನ್ನಿನ ಕಾರ್ಯಚಟುವಟಿಕೆಗಳ ಚಿತ್ರಣ ಅನಾವರಣ, ಸ್ಥಳ: ಮಿಷನ್ನಿನ ಶಾಖೆ, ಶ್ರೀ ಗುರುದೇವದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, 3ನೇ ಹಂತ, ಗೋಕುಲಂ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ, ಸುರಭಿ ಗಾನ ಕಲಾಮಂದಿರ :** ಶ್ರೀ ಶ್ಯಾಮ ಕೃಷ್ಣಾಮೃತ, ಶ್ರೀ ಶ್ಯಾಮಾಶಾಸ್ತ್ರಿಗಳ ಭಾವಚಿತ್ರ ಅನಾವರಣ : ಪ್ರಸಿದ್ಧ ಕೊಳಲು ವಾದಕ ವಿದ್ವಾನ್ ಡಾ. ಸಿ.ಎ. ಶ್ರೀಧರ, ಅತಿಥಿಗಳು : ವಿದ್ವಾನ್ ಡಾ. ಸುಕನ್ಯಾ ಪ್ರಭಾಕರ್, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸ್, ಸ್ಥಳ: ಆಳ್ವಾರ್ ಕಲಾ ಭವನ, ಗೋಕುಲಂ, ಸಂಜೆ 6ಕ್ಕೆ.

■ **ರಂಗಾಯಣ :** ಚಿಣ್ಣರ ನಾಟಕೋತ್ಸವ, ತಂಡ–3, ಹಲಸು, ನನ್ನ ಗೋಪಾಲ ನಾಟಕ ಪ್ರದರ್ಶನ, ರಚನೆ : ಕುವೆಂಪು, ಸಹ ನಿರ್ದೇಶನ : ಎ.ಎಂ. ಕವಿತಾ, ನಿರ್ದೇಶನ : ಭಾಗ್ಯಲಕ್ಷ್ಮಿ ಕಾಳೆ; ತಂಡ–6, ಅಂಜೂರ, ನಿದ್ರಾನಗರಿ ನಾಟಕ ಪ್ರದರ್ಶನ, ರಚನೆ : ಡಾ. ಕಾತ್ಯಾಯಿನಿ ಕುಂಜಿಬೆಟ್ಟು, ನೃತ್ಯ ಸಂಯೋಜನೆ : ತೀರ್ಥೇಶ್, ಸಹ ನಿರ್ದೇಶನ : ದರ್ಶನ್ ಎಸ್., ಯಶಸ್, ನಿರ್ದೇಶನ : ಕೌಶಿಕ್ ಬಿ.ಜಿ., ಕೆ.ಆರ್. ಪೇಟೆ, ಸ್ಥಳ: ವನರಂಗ, ಸಂಜೆ 6.30ಕ್ಕೆ.

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ಕೆ. ಸುದರ್ಶನ ಅವರಿಂದ ಆತ್ಮಗುಣಗಳು ಕುರಿತು ಉಪನ್ಯಾಸ, ಸ್ಥಳ: ಅಷ್ಟಾಂಗಯೋಗ ವಿಜ್ಞಾನ ಮಂದಿರಂ, ಶೇಷಾದ್ರಿ ಅಯ್ಯರ್ ರಸ್ತೆ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ವೈ.ಎಂ.ಯಾಕೊಳ್ಳಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ.ತೀತೀರ ರೇಖಾವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀಧರ ಹೆಗಡೆ ಭದ್ರನ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ–ವಿಶ್ವ ಥಲಸೇಮಿಯಾ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಕಾರ್ಯದರ್ಶಿ ಡಾ. ಶಶಿಕಿರಣ್ ಕೆ.ಬಿ. ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮಕ್ಕಳ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾದ ಡಾ.ಎಸ್.ಎನ್.ಪ್ರಶಾಂತ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ, ಕಥೆ ಹೇಳ್ತೀಯೊ –ಹಾಡು ಹೇಳ್ತೀಯೊ–ನೇರ ಸಂವಾದ ಕಾರ್ಯಕ್ರಮ, 10.30 ಮಕ್ಕಳ ಮಂಟಪ –ಟಿ. ನರಸೀಪುರ ತಾಲೂಕು ಕೇತುಪುರದ ಸರ್ಕಾರಿ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ – ಪುಟ್ಟಮ್ಮ ಮತ್ತು ಸಂಗಡಿಗರಿಂದ ಉತ್ತರದೇವಿ ಹಾಡು, 1.00 ಚಿತ್ರಗೀತೆಗಳು, 1.20 ಭಾವಗೀತೆ–ವೈಷ್ಣವಿ ಎನ್, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಅಮೃತ ಘಳಿಗೆ", 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ವಾಲ್ಮೀಕಿ ದರ್ಶನ, ಪ್ರಸ್ತುತಿ–ಧರ್ಮಸ್ಥಳದ ಬಿ.ಭುಜಬಲಿ ಮತ್ತು ಬಳಗದವರು, 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ–ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್–ಪರಾಗ–ಬೇಸಾಯದ ಬದುಕು ಸರಾಗ–ನಿರ್ಮಾಣ–ಎನ್. ಕೇಶವಮೂರ್ತಿ, ಕೃಷಿ ದರ್ಪಣ, ಪ್ರಸ್ತುತಿ –ಆರ್.ಲೋಕೇಶ್ವರಿ, 8.00 "ಹಾದಿಯಲ್ಲಿ ಕಂಡ ಮುಖ"–ಬಾನುಲಿ ಸರಣಿ, ಚಾಮರಾಜನಗರ ಜಿಲ್ಲೆ ತಿಗಣಾರೆ ಗ್ರಾಮದ ಡ್ರಾಮಾ ಮೇಷ್ಟ್ರು ಜೆ.ಜಾಯ್ ಫುಲ್ ಜಯಶೇಖರ್ ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಆದಿತ್ಯ ಕಲ್ಯಾಣ್‌ಪುರ್ – ತಬಲ

ಮೈಸೂರು ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಆರಂಭ

ಅನ್ನದಾತರಲ್ಲಿ ಮಳೆರಾಯನ ಕೃಪೆ ವಿಶ್ವಾಸ



ಮೈಸೂರು, ಮೇ 4(ಎಂಕೆ)– ಬರಗಾಲ, ಬಿಸಿಲಿನ ತಾಪಕ್ಕೆ ಕಂಗಾಲಾಗಿದ್ದ ರೈತರ ಮೊಗದಲ್ಲಿ ಸಂತಸ ಮೂಡಿದ್ದು, ಮೈಸೂರು ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆ ಆರಂಭವಾಗಿದೆ.

ಜಿಲ್ಲೆಯಾದ್ಯಂತ ಶುಕ್ರವಾರ ಸುರಿದ ಮಳೆಯಿಂದ ಭೂಮಿ ತಂಪಾಗಿದ್ದು, ಕೃಷಿ ಚಟುವಟಿಕೆಗಳು ಗರಿಗೆದರಿವೆ. ಈಗಾಗಲೇ ಜಿಲ್ಲೆಯಲ್ಲಿ 1,627 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ನಿರಂತರವಾಗಿ ಮಳೆಯಾದರೆ ಕೃಷಿ ಕಾರ್ಯ ಇನ್ನಷ್ಟು ಚುರುಕಾಗಲಿದೆ.

ಮುಂಗಾರು ಹಂಗಾಮಿನಲ್ಲಿ ತಂಬಾಕು (ಹೊಗೆ ಸೊಪ್ಪು) ಬಿತ್ತನೆ ಹೆಚ್ಚಾಗಿ ನಡೆಯುತ್ತಿದ್ದು, ಉಳಿದಂತೆ ಇತರೆ ಬೆಳೆಗಳ ಬಿತ್ತನೇ ಕಾರ್ಯವೂ ಆರಂಭವಾಗಿದೆ. 1055 ಹೆಕ್ಟೇರ್ ಪ್ರದೇಶದಲ್ಲಿ 'ತಂಬಾಕು', 14 ಹೆಕ್ಟೇರ್ ಪ್ರದೇಶದಲ್ಲಿ 'ಹತ್ತಿ', 5 ಹೆಕ್ಟೇರ್‌ನಲ್ಲಿ 'ಎಳ್ಳು', 12 ಹೆಕ್ಟೇರ್‌ನಲ್ಲಿ 'ಅವರೆ', 95 ಹೆಕ್ಟೇರ್‌ನಲ್ಲಿ 'ಅಲಸಂದೆ', 73 ಹೆಕ್ಟೇರ್ ಪ್ರದೇಶದಲ್ಲಿ 'ಹೆಸರು', 321 ಹೆಕ್ಟೇರ್ ಪ್ರದೇಶದಲ್ಲಿ 'ಉದ್ದು ಹಾಗೂ 52 ಹೆಕ್ಟೇರ್ ಪ್ರದೇಶದಲ್ಲಿ 'ಮುಸುಕಿನ ಜೋಳ' ಬಿತ್ತನೆಯಾಗಿದೆ. ಪಿರಿಯಾಪಟ್ಟಣ ತಾಲೂಕಿನಲ್ಲಿ 350, ಸಾಲಿಗ್ರಾಮ 400, ಕೆ.ಆರ್.ನಗರ 300 ಹಾಗೂ ಹುಣಸೂರಿನಲ್ಲಿ 5 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬಿತ್ತಮಯಾಗಿದೆ.

ಸಮಾಧಾನ ತಂದಿದೆ: ತಂಬಾಕು ಪಟಗಳನ್ನು ಮಾಡಿ ಸಸಿಗಳನ್ನು ಜಮೀನಿಗೆ ನೆಡಲು ಸಾಧ್ಯವಾಗಿರಲಿಲ್ಲ. ಸಣ್ಣ ಸಸಿಗಳನ್ನು ನೆಟ್ಟ ಕೆಲ ಗಂಟೆಯಲ್ಲೇ ಬಿಸಿಲಿನ ತಾಪಕ್ಕೆ ಉರಿದುಹೋಗುತ್ತಿದ್ದವು. ಕೆಲ ದಿನಗಳು ಕಾದು ನಿನ್ನೆ(ಶುಕ್ರವಾರ) ಬಿದ್ದ ಮಳೆಯಿಂದಾಗಿ ಇಂದು ಸಸಿ ನೆಟ್ಟಿದ್ದೇವೆ. ಸದ್ಯಕ್ಕೆ ಮಳೆ ಬಂದಿದ್ದು ಸ್ವಲ್ಪ ಸಮಾಧಾನ ತಂದಿದೆ. ಆದರೆ ಮಳೆ ನಿರಂತರವಾಗಿ ಆಗಬೇಕು. ಇಲ್ಲವಾದರೆ ನೆಟ್ಟ ಸಸಿಗಳ ಬೆಳವಣಿಗೆ ಕಷ್ಟವಾಗುತ್ತದೆ ಎಂದು ಪಿರಿಯಾಪಟ್ಟಣ ತಾಲೂಕಿನ ಬಸಲಾಪುರ ಗ್ರಾಮದ ರೈತ ಬಿ.ಎನ್.ಸತೀಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯಾವುದೇ ಕೊರತೆ ಇಲ್ಲ: ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆ ಆರಂಭವಾಗಿದೆ. ಹೆಸರು, ಮುಸುಕಿನ ಜೋಳ, ಅವರೆ, ಅಲಸಂದೆ ಸೇರಿದಂತೆ ಇನ್ನಿತರೆ ಬಿತ್ತನೆ ಬೀಜಗಳು ಹಾಗೂ ರಾಸಾಯನಿಕ ಗೊಬ್ಬರಗಳನ್ನು ವಿತರಣೆ ಮಾಡಲಾಗುತ್ತಿದ್ದು, ಯಾವುದೇ ಕೊರತೆ ಇಲ್ಲ. ಮುಖ್ಯವಾಗಿ ಮಳೆಯಾಗುವುದು ಮುಖ್ಯವೆಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಸ್. ಚಂದ್ರಶೇಖರ್ ಮಾಹಿತಿ ನೀಡಿದರು.

ಪಂಪ್‌ಸೆಟ್ ಹೊಂದಿರುವ ರೈತರು ಕೃಷಿ ಕಾರ್ಯ ಆರಂಭಿಸಿದ್ದಾರೆ. ಬಿಸಿಲಿನ ತಾಪಮಾನ ಹೆಚ್ಚಾಗಿದ್ದರಿಂದ ಕೃಷಿ ಚಟುವಟಿಕೆ ಚುರುಕಾಗಿರಲಿಲ್ಲ ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆ ಇದೆ.



❝ ಜಿಲ್ಲೆಯ 33 ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ. ಕೃಷಿ ಚಟುವಟಿಕೆಗೆ ಯಾವುದೇ ತೊಂದರೆಯಾಗದಂತೆ ಎಲ್ಲಾರೀತಿಯ ಮುಂಜಾಗ್ರತಾ ಕ್ರಮಗಳನ್ನು ವಹಿಸಲಾಗಿದೆ.

– ಬಿ.ಎಸ್.ಚಂದ್ರಶೇಖರ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ ಮೈಸೂರು

ಮೈಸೂರು ಜಿಲ್ಲೆಯಲ್ಲಿ ಶೇ.67ರಷ್ಟು ಮಳೆ ಕೊರತೆ

ಮೈಸೂರು, ಮೇ 4(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಶೇ.67ರಷ್ಟು ಮಳೆ ಕೊರತೆಯಾಗಿದ್ದು, ಕೃಷಿ ಕ್ಷೇತ್ರದ ಮೇಲೆ ಭಾರಿ ಪರಿಣಾಮ ಬೀರುವ ಭೀತಿ ಸೃಷ್ಟಿಯಾಗಿದೆ. ಕಳೆದ ಜನವರಿಯಿಂದ ಈವರೆಗೆ(ಮೇ 4) ಜಿಲ್ಲೆಯಲ್ಲಿ ವಾಡಿಕೆಯಂತೆ 102 ಮಿ.ಮೀ. ಮಳೆಯಾಗಬೇಕಿತ್ತು. ಆದರೆ ಕೇವಲ 34 ಮಿ.ಮೀ. ಮಳೆಯಾಗಿದ್ದು ಶೇ.67ರಷ್ಟು ಕೊರತೆ ಉಂಟಾಗಿದೆ. ನಿನ್ನೆ ಮಳೆಯಾದ ಪರಿಣಾಮ ಕೊರತೆ ಪ್ರಮಾಣ ಸ್ವಲ್ಪ ಪ್ರಮಾಣದಲ್ಲಿ ತಗ್ಗಿದೆ. ಮಳೆ ಕೊರತೆಯಿಂದ ಕೃಷಿಗೆ ಭಾರಿ ಹೊಡೆತ ಬಿದ್ದಿದೆ. ಅಂತರ್ಜಲ ಕ್ಷೀಣಿಸಿರುವುದರಿಂದ ಬೋರ್‌ವೆಲ್ ಆಧಾರಿತ ವ್ಯವಸಾಯವೂ ನಿರೀಕ್ಷಿತ ಫಲ ನೀಡುತ್ತಿಲ್ಲ. ಪರಿಣಾಮ ತರಕಾರಿ, ಹೂವಿನ ಬೆಲೆ ದಿನೇ ದಿನೆ ಹೆಚ್ಚಾಗುತ್ತಿದೆ. ನಿನ್ನೆ ಬಿರುಗಾಳಿಗೆ ಜಿಲ್ಲೆಯ ಪ್ರಮುಖ ಬೆಳೆಯಾದ ಬಾಳೆ ಅಪಾರ ಪ್ರಮಾಣದಲ್ಲಿ ನಾಶವಾಗಿದ್ದು, ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ತಾಲೂಕುವಾರು ಕೊರತೆ: ಕಳೆದ ನಾಲ್ಕು ತಿಂಗಳಲ್ಲಿ ಜಿಲ್ಲೆಯ ಯಾವ ತಾಲೂಕಿನಲ್ಲೂ ವಾಡಿಕೆಯಷ್ಟು ಮಳೆಯಾಗಿಲ್ಲ. ಹೆಚ್.ಡಿ.ಕೋಟೆಯಲ್ಲಿ 45 ಮಿ.ಮೀ., ಹುಣಸೂರು 47, ಕೆ.ಆರ್.ನಗರ 26, ಮೈಸೂರು 32, ನಂಜನಗೂಡು 17, ಪಿರಿಯಾಪಟ್ಟಣ 37, ತಿ.ನರಸೀಪುರ 16, ಸರಗೂರು 43 ಹಾಗೂ ಸಾಲಿಗ್ರಾಮ ತಾಲೂಕಿನಲ್ಲಿ 40 ಮಿ.ಮೀ. ಮಳೆಯಾಗಿದೆ. ಕಳೆದ ನಾಲ್ಕು ದಿನಗಳಲ್ಲಿ 13 ಮಿ.ಮೀ. ಮಳೆಯಾಗಿದೆ. ಕಳೆದ ಏಪ್ರಿಲ್‌ನಲ್ಲಿ ಕೇವಲ 8 ಮಿ.ಮೀ. ಮಳೆಯಾಗಿದ್ದು, ಶೇ.87ರಷ್ಟು ಕೊರತೆಯಾಗಿದೆ.

ಹೆಚ್.ಡಿ.ರೇವಣ್ಣ ಬಂಧನ ಬೆನ್ನಲ್ಲೇ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಹತ್ವದ ಸಭೆ; ಅಮಾನತು ಸಾಧ್ಯತೆ



ಬೆಂಗಳೂರು, ಮೇ 4– ಸಂತ್ರಸ್ತ ಮಹಿಳೆ ಅಪಹರಣ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ವಜಾ ಆದ ಕೆಲವೇ ನಿಮಿಷದಲ್ಲಿ ಎಸ್‌ಐಟಿ ಅಧಿಕಾರಿಗಳು ಜೆಡಿಎಸ್ ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿದ ಬೆನ್ನಲ್ಲೇ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಪಕ್ಷದ ನಾಯಕರೊಂದಿಗೆ ಮಹತ್ವದ ಸಭೆ ನಡೆಸಿದ್ದಾರೆ.

ಹಾಸನ ಸಂಸದ ಪ್ರಜ್ವಲ್ ರೇವಣ್ಣರ ಅಶ್ಲೀಲ ವಿಡಿಯೋ ಬಹಿರಂಗ ಬೆನ್ನಲ್ಲೇ ಹೆಚ್.ಡಿ.ರೇವಣ್ಣ ವಿರುದ್ಧವೂ ಲೈಂಗಿಕ ದೌರ್ಜನ್ಯ ಮತ್ತು ಅಪಹರಣ ಪ್ರಕರಣ ದಾಖಲಾಗಿದೆ. ಇದೀಗ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದಾರೆ.

ಪ್ರಜ್ವಲ್ ರೇವಣ್ಣ ಮತ್ತು ಹೆಚ್.ಡಿ. ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅಪಹರಣ ಪ್ರಕರಣಗಳು ಜೆಡಿಎಸ್‌ಗೆ ತೀವ್ರ ಮುಜುಗರ ತಂದಿದೆ. ಹೀಗಾಗಿ ಪ್ರಜ್ವಲ್ ರೇವಣ್ಣರನ್ನು ಪಕ್ಷದಿಂದ ಅಮಾನತು ಮಾಡಲಾಗಿತ್ತು ಇಂದು ರೇವಣ್ಣ ಬಂಧನಕ್ಕೊಳಗಾಗಿದ್ದರಿಂದ ಮುಜುಗರದಿಂದ ತಪ್ಪಿಸಿಕೊಳ್ಳಲು ಹೆಚ್.ಡಿ.ರೇವಣ್ಣ ಅವರನ್ನೂ ಪಕ್ಷದಿಂದ ಅಮಾನತುಗೊಳಿಸಲು ಕುಮಾರಸ್ವಾಮಿ ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.

ಸುಮಯ ಪ್ರಾಪರ್ಟೀಸ್ 8ನೇ ವಾರ್ಷಿಕೋತ್ಸವದ ಸಂದರ್ಭ 'ಸುಮಯ ಕಲ್ಪತರು' ಗಾರ್ಡನ್ಸ್ ಪ್ರೀಮಿಯಂ ವಿಲ್ಲಾ ಪ್ಲಾಟ್ಸ್ ಪ್ರಾರಂಭೋತ್ಸವ





ಮೈಸೂರಿನ ಸುಮಯ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್‌ನ ಎಂಟನೇ ವಾರ್ಷಿಕೋತ್ಸವದ ಸುಸಂದರ್ಭದಲ್ಲಿ ವಾಜಮಂಗಲ ಮುಖ್ಯರಸ್ತೆ ಬಳಿ ಇರುವ 'ಸುಮಯ ಕಲ್ಪತರು' ಗಾರ್ಡನ್ಸ್ ಪ್ರೀಮಿಯಂ ವಿಲ್ಲಾ ಪ್ಲಾಟ್ಸ್‌ನ ಪ್ರಾರಂಭೋತ್ಸವ ಭಾನುವಾರ ಅದ್ದೂರಿಯಾಗಿ ನೆರವೇರಿತು. ಉದ್ಯಮಿಗಳಾದ ಎಸ್.ಗೋಪಾಲ್ ರಾಜು, ಸುಧೀ ಎಸ್.ಶೆಟ್ಟಿ, ವಿಶಾಖಾ ಸಿ.ಹೆಗ್ಡೆ ಹಾಗೂ ಎಸ್.ಜಿ.ಪ್ರದೀಪ್ ಈ ಯೋಜನೆ ಉದ್ಘಾಟಿಸಿದರು. ಗುಮ್ಮಗೋಡು ಶ್ರೀಕ್ಷೇತ್ರ ಮಹಾನಂದಿಯ ಗುರೂಜಿ ಆಶೀರ್ವಚನ ನೀಡಿದರು. ಮಾಜಿ ಸಚಿವರು ಹಾಗೂ ಜೆ.ಡಿ.ಎಸ್‌ನ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಕೆ.ವಿವೇಕಾನಂದ, ಮಾಜಿ ಬಿಬಿಎಂಪಿ ಮೇಯರ್ ಮಲ್ಲೇಶ್ವರಂನ ಜಿ.ಮಂಜುನಾಥ್ ರಾಜು ಹಾಗೂ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಶುಭ ಕೋರಿದರು.

ಹುಬ್ಬಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಗರ್ಭಿಣಿ; ಯುವಕನ ಬಂಧನ

ಹುಬ್ಬಳ್ಳಿ, ಮೇ 4– ಅಪ್ರಾಪ್ತ ಬಾಲಕಿಯನ್ನು ಗರ್ಭಿಣಿ ಮಾಡಿ, ಆಕೆಯ ತಾಯಿಗೆ ಬೆದರಿಕೆ ಹಾಕಿದ ಆರೋಪದ ಮೇಲೆ ಯುವಕನನ್ನು ಬಂಧಿಸಿರುವ ಘಟನೆ ಶನಿವಾರ ನಡೆದಿದೆ. ಶುಕ್ರವಾರ ಈ ವಿಷಯ ಬೆಳಕಿಗೆ ಬರುತ್ತಿದ್ದಂತೆ ಆಸ್ಪತ್ರೆಯ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದು, ಸಂತ್ರಸ್ತೆಯ ತಾಯಿ ದೂರು ನೀಡಿದ್ದಾರೆ.

ಆರೋಪಿ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು. ಪ್ರಕರಣದ ಸಂತ್ರಸ್ತೆ ದಲಿತ ಸಮುದಾಯಕ್ಕೆ ಸೇರಿದವರು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಸದ್ದಾಂ ತನ್ನ ಮಗಳಿಗೆ ಪರಿಚಿತನಾಗಿದ್ದು, ಆತನನ್ನು ಪ್ರೀತಿಸುತ್ತಿದ್ದಳು ಎಂದು ಸಂತ್ರಸ್ತೆಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಸದ್ದಾಂ ತನ್ನ ಮಗಳಿಗೆ ದೈಹಿಕ ಸಂಬಂಧ ಹೊಂದುವಂತೆ ಒತ್ತಾಯಿಸಿ, ಗರ್ಭಿಣಿಯಾಗಿಸಿದ್ದಾನೆ ಎಂದು ಸಂತ್ರಸ್ತೆಯ ತಾಯಿ ಹೇಳಿದ್ದಾರೆ. ಅಪ್ರಾಪ್ತ ಬಾಲಕಿ ಗರ್ಭಿಣಿಯಾಗಿರುವ ಬಗ್ಗೆ ಆಸ್ಪತ್ರೆಯಿಂದ ಎಂಎಲ್‌ಸಿ (ಮೆಡಿಕೊ ಲೀಗಲ್ ಕೇಸ್) ಸ್ವೀಕರಿಸಿದ್ದೇವೆ ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ರೇಣುಕಾ ಸುಕುಮಾರ್ ತಿಳಿಸಿದ್ದಾರೆ.

ಪ್ರಚಾರಕ್ಕೆ ಹಣವಿಲ್ಲ; ಟಿಕೆಟ್ ವಾಪಸ್ ನೀಡಿದ ಪುರಿ ಕಾಂಗ್ರೆಸ್ ಅಭ್ಯರ್ಥಿ!



ಭುವನೇಶ್ವರ, ಮೇ 4– ಲೋಕಸಭಾ ಚುನಾವಣೆಯ 3ನೇ ಹಂತದ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿರುವಂತೆಯೇ ಇತ್ತ ಕಾಂಗ್ರೆಸ್ ಪಕ್ಷಕ್ಕೆ ಭಾರಿ ಆಘಾತವೊಂದು ಎದುರಾಗಿದ್ದು, ಪ್ರಚಾರಕ್ಕೆ ಹಣವಿಲ್ಲ ಎಂಬ ಒಂದೇ ಕಾರಣಕ್ಕೆ ಪುರಿಯ ಕಾಂಗ್ರೆಸ್ ಅಭ್ಯರ್ಥಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಹಾಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಿರಂತರ ಹಿನ್ನಡೆ ಅನುಭವಿಸುತ್ತಿದ್ದು, ಸೂರತ್ ಮತ್ತು ಇಂದೋರ್ ನಂತರ, ಇದೀಗ ಒಡಿಶಾದ ಹಾಟ್ ಸೀಟ್ ಎಂದು ಪರಿಗಣಿಸಲಾಗಿದ್ದ ಪುರಿಯ ಕಾಂಗ್ರೆಸ್ ಅಭ್ಯರ್ಥಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದಾರೆ. ಪುರಿ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಸುಚರಿತ ಮೊಹಾಂತಿ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿತ್ತು. ಆದರೆ ಸುಚರಿತಾ ಅವರು ತಮ್ಮ ಟಿಕೆಟ್ ವಾಪಸ್ ನೀಡಿ ತಮ್ಮ ಉಮೇದುವಾರಿಕೆಯನ್ನು ಹಿಂಪಡೆದಿದ್ದಾರೆ. ಇದು ಕಾಂಗ್ರೆಸ್‌ಗೆ ದೊಡ್ಡ ಹೊಡೆತವಾಗಿದ್ದು, ಇಲ್ಲಿ ಬಿಜೆಪಿಯ ಹಿರಿಯ ನಾಯಕ ಸಂಬಿತ್ ಪಾತ್ರಾ ಬಿಜೆಪಿಯಿಂದ ಸ್ಪರ್ಧಿಸಿದ್ದು, ಇದೀಗ ಸುಚರಿತಾ ಅವರು ತಮ್ಮ ನಾಮಪತ್ರವನ್ನು ಹಿಂಪಡೆದಿರುವುದರಿಂದ ಸಂಬಿತ್ ಪಾತ್ರ ಗೆಲುವಿನ ಹಾದಿ ಸುಲಭವಾಗಿದೆ.

ಪ್ರಚಾರಕ್ಕೆ ಹಣವಿಲ್ಲ ಎಂದ ಕೈ ಅಭ್ಯರ್ಥಿ: ಇನ್ನು ಒಡಿಶಾದ ಪುರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುಚರಿತ ಮೊಹಾಂತಿ ಅವರು ಹಣದ ಕೊರತೆಯ ಕಾರಣದಿಂದ ಮತದಾನಕ್ಕೂ ಮುನ್ನವೇ ಕ್ಷೇತ್ರ ತೊರೆದಿದ್ದಾರೆ. ಕಾಂಗ್ರೆಸ್‌ಗೆ ತನ್ನ ಟಿಕೆಟ್ ವಾಪಸ್ ಮಾಡಿದ್ದಾರೆ. ಈ ಸಂಬಂಧ ಸುಚರಿತ ಮೊಹಾಂತಿ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಪತ್ರ ಬರೆದು ತಮ್ಮ ನಿರ್ಧಾರವನ್ನು ತಿಳಿಸಿದ್ದಾರೆ. ಚುನಾವಣೆಗೆ ಸ್ಪರ್ಧಿಸಲು ಪಕ್ಷ ನೀಡಿರುವ ಮೊತ್ತವನ್ನು ತಮಗೆ ನೀಡಿಲ್ಲ ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಹಣದ ಕೊರತೆಯಿಂದ ಪ್ರಚಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮಂಗಗಳ ಉಪವಾಸ', 'ಪಂಜರಶಾಲೆ' ನಾಟಕಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ ಚಿಣ್ಣರು





ಮೈಸೂರು, ಮೇ 4(ಎಂಕೆ)– ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ಚಿಣ್ಣರಮೇಳ–2024ರ ಅಂಗವಾಗಿ ಹಮ್ಮಿಕೊಂಡಿರುವ ಚಿಣ್ಣರ ನಾಟಕೋತ್ಸವದ ಮೂರನೇ ದಿನ 'ಮಂಗಗಳ ಉಪವಾಸ' ಮತ್ತು 'ಪಂಜರಶಾಲೆ' ನಾಟಕ ಪ್ರದರ್ಶನ ನೀಡಿದ ಪುಟಾಣಿಗಳು ಪೋಷಕರ ಮನಗೆದ್ದರು. ರಂಗಾಯಣದ ವನರಂಗದ ಹಚ್ಚ ಹಸಿರಿನ ನಡುವೆ ಅಭಿನಯದ ಚಾಕಚಕ್ಯತೆ ತೋರಿದ ಚಿಣ್ಣರು, ಚಟ್‌ಪಟ್ ಡೈಲಾಗ್‌ಗಳ ಮೂಲಕ ಎಲ್ಲರ ಗಮನ ಸೆಳೆದರು. ಕಾಡಿನಲ್ಲಿ ನಡೆದ ಘಟನೆಯಿಂದ ಭಯಭೀತಗೊಳ್ಳುವ ಮಂಗಗಳು, ಪರಿಹಾರಕ್ಕಾಗಿ ಪಂಡಿತರೊಬ್ಬರ ಮಾತಿನಂತೆ ಒಂದು ದಿನ ಉಪವಾಸ ವ್ರತ ಆಚರಣೆಗೆ ನಿರ್ಧರಿಸಿ, ದಿನ ಕಳೆಯುವ ಒಳಗೆ ವ್ರತ ಹೇಗೆ ನಿಂತು ಹೋಗುತ್ತದೆ ಎಂಬುದನ್ನ ಸ್ವಾರಸ್ಯಕರ ಹಾಸ್ಯ ಪ್ರಧಾನವಾದ ನಾಟಕದ ಮೂಲಕ ಸಾಮರಸ್ಯವೇ ಜೀವನ ಎಂಬುದನ್ನು ಚಿಣ್ಣರಮೇಳದ 2ನೇ ತಂಡದ ಪುಟಾಣಿಗಳು ತಮ್ಮ ಆಕರ್ಷಕ ಅಭಿನಯದ ಮೂಲಕ ತಿಳಿಸಿದರು.

ಬಿ.ವಿ.ಕಾರಂತರ ರಚನೆ, ಚಂದನ್ ಎಂ.ಕೆಬ್ಬೇಹುಂಡಿ ನಿರ್ದೇಶನದಲ್ಲಿ ಚಿಣ್ಣರ ಮೇಳದ 7ನೇ ತಂಡ ಪುಟಾಣಿಗಳು 'ಪಂಜರ ಶಾಲೆ' ನಾಟಕ ಪ್ರದರ್ಶನ ನೀಡಿದರು. ಗಿಳಿಗಳು ತೋಟದಲ್ಲಿ ಹಣ್ಣುಗಳನ್ನು ತಿನ್ನುವಾಗ ಕಾವಲುಗಾರರು ಬಾಣಗಳನ್ನು ಬಿಡುವುದು, ಬಾಣ ತಾಕಿ ಕೆಳಗೆ ಬೀಳುವ ಆ ಕಾಡು ಗಿಳಿಗಳಿಗೆ ಕಾಡುತನ ಮರೆಸಲು ಶಿಕ್ಷಣ ಕಲಿಸುವ ನಿಟ್ಟಿನಲ್ಲಿ ಅಕ್ಷರಭ್ಯಾಸ, ವ್ಯಾಕರಣ, ವೇದಪಾಠಗಳನ್ನು ಕಲಿಸಲು ಸಿದ್ದಪಡಿಸುವ ಪಂಜರ ಶಾಲೆಯಲ್ಲಿ ಶಿಕ್ಷಣ ಪಡೆದು ಮರುಜನ್ಮ ಪಡೆದಂತೆ ಕಾಡಿನಲ್ಲಿ ತಮ್ಮ ಗುಂಪುಗಳೊಂದಿಗೆ ಸೇರಿ ವಿಹರಿಸುವ ಮನಮೋಹಕ ಕಥಾಹಂದರವನ್ನು ಅರ್ಥಪೂರ್ಣವಾಗಿ ಪ್ರದರ್ಶಿಸಿದ ಪ್ರಚಂಡ ಪುಟಾಣಿಗಳು ನೋಡುಗರನ್ನು ನಿಬ್ಬೆರಗಾಗಿಸಿದರು. ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಚಿಣ್ಣರ ಮೇಳ ಶಿಬಿರದ ಸಂಚಾಲಕಿ ಗೀತಾ ಮೋಂಟಡ್ಕ ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ನಾಟಕದ ಸ್ಟೇಜ್ ಮೇಲೆ ಅಭಿನಯಿಸುತ್ತಲೇ ಕುಸಿದು ಕಲಾವಿದ ಸಾವು



ಬೆಂಗಳೂರು, ಮೇ 4– ನಾಟಕದಲ್ಲಿ ಅಭಿನಯಿಸುತ್ತಲೇ ವೇದಿಕೆ ಮೇಲೆ ಕುಸಿದು ಬಿದ್ದು ಕಲಾವಿದರೊಬ್ಬರು ಸಾವನ್ನಪ್ಪಿರುವ ಘಟನೆ ನಗರದಲ್ಲಿ ಶುಕ್ರವಾರ ನಡೆದಿದೆ.

ದೇವನಹಳ್ಳಿ ತಾಲೂಕು ಅರದೇಶಹಳ್ಳಿಯ ನಿವಾಸಿಯಾದ ಎನ್.ಮುನಿಕೆಂಪಣ್ಣ ಮೃತ ಕಲಾವಿದ. ಶುಕ್ರವಾರ ರಾತ್ರಿ ಯಲಹಂಕ ತಾಲೂಕಿನ ಸಾತನೂರು ಬಳಿ ಕುರುಕ್ಷೇತ್ರ ನಾಟಕ ಪ್ರದರ್ಶನ ನಡೆಯುತ್ತಿತ್ತು. ಈ ವೇಳೆ, ನಾಟಕದಲ್ಲಿ ಶಕುನಿಯ ಪಾತ್ರ ನಿರ್ವಹಿಸುತ್ತಿದ್ದ ಮುನಿಕೆಂಪಣ್ಣ ರಾತ್ರಿ 1.30ರ ಸುಮಾರಿಗೆ ಅಭಿನಯಿಸುತ್ತಿರುವಾಗಲೇ ಕುಸಿದುಬಿದ್ದು ಸಾವನ್ನಪ್ಪಿದ್ದಾರೆ. ಹೃದಯಾಘಾತದಿಂದ ಸಾವನ್ನಪ್ಪಿರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಸಾವಿಗೂ ಮುನ್ನ ಮುನಿಕೆಂಪಣ್ಣ ಅವರು ವೇದಿಕೆಯಲ್ಲಿ ಡೈಲಾಗ್ ಹೇಳಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಮೃತ ಮುನಿಕೆಂಪಣ್ಣ ಅವರು ನಿವೃತ್ತ ಉಪನ್ಯಾಸಕರು, ಸಾಹಿತಿ, ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ದೇವನಹಳ್ಳಿಯ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇಂದು ಮಧ್ಯಾಹ್ನ ಮೂರು ಗಂಟೆಗೆ ಮುನಿಕೆಂಪಣ್ಣ ಅವರ ಹುಟ್ಟೂರಾದ ಅರದೇಶಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಆಸ್ಪತ್ರೆ ತುರ್ತು ಚಿಕಿತ್ಸಾ ವಾರ್ಡ್‌ಗಳಿಗೆ ನುಗ್ಗಿದ ನೀರು

● ಔಷಧಿಗಳಿಗೆ ಸಾಕಷ್ಟು ಹಾನಿ ● ಕಳಪೆ ಕಾಮಗಾರಿಯ ಫಲವಿದು

ಮೈಸೂರು, ಮೇ 4(ಎಂಕೆ)– ಮೈಸೂರಿನ ದೊಡ್ಡಾಸ್ಪತ್ರೆಗೆ ನುಗ್ಗಿದ ಮಳೆ ನೀರು... ರೋಗಿಗಳ ಪರದಾಟ, ಔಷಧಿಗಳು ಹಾನಿ...!

ಶುಕ್ರವಾರ ಸಂಜೆ ವೇಳೆ ನಗರದೆಲ್ಲೆಡೆ ಧಾರಾಕಾರವಾಗಿ ಸುರಿದ ಭಾರಿ ಮಳೆಗೆ ಮೈಸೂರಿನ ದೊಡ್ಡಾಸ್ಪತ್ರೆ ಎಂದೇ ಕರೆಯುವ ಕೆ.ಆರ್.ಆಸ್ಪತ್ರೆಯಲ್ಲಿ ನೀರಿನ ಅವಾಂತರ ಸೃಷ್ಟಿಯಾಗಿದೆ. ತುರ್ತು ಚಿಕಿತ್ಸಾ ವಾರ್ಡ್‌ಗೆ (ರೂಂ.ನಂ.33) ಮಳೆ ನೀರು ನುಗ್ಗಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳು ಪರದಾಡುವಂತಾಗಿದೆ. ಅಲ್ಲದೆ ಔಷಧಿಗಳಿಗೆ ಹಾನಿಯಾಗಿದೆ. ಮೆಡಿಕಲ್ ಎಮರ್ಜೆನ್ಸಿ ವಾರ್ಡ್ ಮೇಲಿರುವ(ಮೊದಲ ಮಹಡಿ) ಎನ್.ರಾಜ (ನರಸಿಂಹರಾಜ ವಾರ್ಡ್) ಕಡೆಯಿಂದ ಮಳೆ ನೀರು ನುಗ್ಗಿದ್ದು, ಶುಶ್ರೂಷಕರ ಕೊಠಡಿ ನೀರಿನಿಂದ ಆವೃತವಾಗಿದೆ. ಈ ವೇಳೆ ಅಲ್ಲಿಯೇ ಇಟ್ಟಿದ್ದ ಔಷಧಿಗಳಿಗೆ ಹಾನಿಯಾಗಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕೂ ತೊಂದರೆಯುಂಟಾಗಿದೆ ಎಂದು ಆಸ್ಪತ್ರೆಯ ಸಿಬ್ಬಂದಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಕಳೆದ ವರ್ಷವಷ್ಟೇ ಮೆಡಿಕಲ್ ಎಮರ್ಜೆನ್ಸಿ ವಾರ್ಡ್‌ಗೆ ಸುಣ್ಣ–ಬಣ್ಣ ಬಳಿದು ಕಿಟಕಿ ಗಾಜುಗಳನ್ನು ದುರಸ್ತಿ ಮಾಡಲಾಗಿತ್ತು. ಮೊದಲ ಮಹಡಿಯಲ್ಲಿ ನೀರು ತುಂಬಿದರೆ ಮೆಟ್ಟಿಲುಗಳ ಮೂಲಕ ಕೆಳ ಭಾಗದಲ್ಲಿರುವ ಎಮರ್ಜೆನ್ಸಿ ವಾರ್ಡ್‌ಗೆ ನೀರು ಸೋರುತ್ತದೆ. ಈ ವರ್ಷದ ಮೊದಲ ಮಳೆಗೇ ಈ ರೀತಿಯಾದರೆ ಮಳೆಗಾಲ ಮುಗಿಯುವವರೆಗೆ ಕೆಲಸ ಮಾಡುವುದ್ಹೇಗೆ ಎಂದು ಆತಂಕ ವ್ಯಕ್ತಪಡಿಸಿದರು.

ಕಳಪೆ ಕಾಮಗಾರಿ: ಕೆ.ಆರ್.ಆಸ್ಪತ್ರೆ ಕಟ್ಟಡ ನವೀಕರಣ ಕಾಮಗಾರಿ ಕಳಪೆಯಿಂದ ಕೂಡಿದೆ. ಎಲ್ಲಿಯೂ ಸರಿಯಾಗಿ ಕಾಮಗಾರಿ ನಡೆಯುತ್ತಿಲ್ಲ. ಮಳೆ ಬಂದರೆ ಅಲ್ಲಲ್ಲಿ ಸೋರುತ್ತಿದೆ. ಮೇಲಾಧಿಕಾರಿಗಳು ಬಡವರಿಗೆ ನೀಡಬೇಕಾದ ಆರೋಗ್ಯ ಸೇವೆಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಈ ಹಿಂದೆಯೂ ಸ್ಥಳೀಯ ಶಾಸಕರು ಬಂದು ಗಮನಿಸಿದಾಗ ಕಳಪೆ ಕಾಮಗಾರಿ ದರ್ಶನವಾಗಿತ್ತು. ಆದರೂ ಎಚ್ಚೆತ್ತುಕೊಂಡಿಲ್ಲ ಎಂದು ದೂರಿದರು.



ನಕ್ಕರೆ ಅದೇ ಸ್ವರ್ಗ

ವೈದ್ಯರು : "ನಿಮಗಿಷ್ಟವಾದ ಯಾವುದಾದರೂ ಹಣ್ಣನ್ನು ಸಿಪ್ಪೆ ಸಮೇತ ತಿಂದ್ರೆ ಒಳ್ಳೆಯದು. ಯಾಕಂದ್ರೆ ಸಿಪ್ಪೆಯಲ್ಲಿ ತುಂಬಾ ವಿಟಮಿನ್ಸ್ ಇರುತ್ತದೆ"

ರೋಗಿ : (ಸಪ್ಪೆಯಾಗಿ) "ಆದ್ರೆ ಏನು ಮಾಡಲಿ ಡಾಕ್ಟ್ರೆ, ನನಗಿಷ್ಟವಾದ ಹಣ್ಣು ಹಲಸಿನ ಹಣ್ಣು!"

ಮೈಸೂರು ಮಿತ್ರ

ಭಾನುವಾರ, 5 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವಿಪತ್ಕಾಲದಲ್ಲಾಗಲೀ, ಕಷ್ಟ ಕಾಲದಲ್ಲಾಗಲೀ ವಿವೇಕಿಯಾದವನು ಉತ್ಸಾಹವನ್ನೆಂದೂ ಕಳೆದುಕೊಳ್ಳುವುದಿಲ್ಲ –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಣ ಮಾತು ಒಣಗಿದ ಹುಲ್ಲು,
ಒಳ್ಳೆಯ ಮಾತು ಬೆಳ್ಳಗಿನ ಹಾಲು

ನಿಮ್ಮ ಪತ್ರಗಳು

■ ಸರಕಾರಿ ಶಾಲೆಗಳ ರಕ್ಷಣೆ ಎಲ್ಲರ ಹೊಣೆ

ಮಾನ್ಯರೆ,

ಪರೀಕ್ಷೆಗಳೆಲ್ಲಾ ಮುಗಿದು ಫಲಿತಾಂಶ ಪ್ರಕಟಣೆ ಮಾಡಿ ಶಾಲೆಗಳು ಮಕ್ಕಳಿಗೆ ಬೇಸಿಗೆ ರಜೆ ನೀಡಿ ಮುಂದಿನ ಜೂನ್‌ವರೆಗೆ ಮುಚ್ಚಲ್ಪಟ್ಟಿರುತ್ತವೆ. ಬಹುತೇಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇರುವ ಹಲವಾರು ಸರಕಾರಿ ಶಾಲೆಗಳು ಇಂತಹ ರಜಾ ದಿನಗಳಲ್ಲಿ ಕೆಲವು ಕಿಡಿಗೇಡಿಗಳ ಅವಕೃಪೆಗೆ ಒಳಗಾಗುತ್ತವೆ. ಶಾಲೆಗಳು ಆರಂಭವಾಗುವ ಹೊತ್ತಿಗೆ ಶಾಲಾ ಆವರಣದಲ್ಲಿ ಮಕ್ಕಳು ಪ್ರೀತಿಯಿಂದ ಬೆಳೆಸಿದ್ದ ಕೈತೋಟಗಳು ದನ–ಕರುಗಳ ಬಾಯಿಗೆ ಆಹಾರವಾಗಿರುತ್ತೇವೆ. ಕೈತೊಳೆಯುವ ಸಲುವಾಗಿ ಹಾಕಿಸಿರುವ ನಲ್ಲಿಗಳನ್ನು ಮುರಿದು ಅಥವಾ ಬಿಚ್ಚಿಕೊಂಡು ಕಣ್ಮರೆ ಮಾಡಿರುತ್ತಾರೆ. ಶೌಚಾಲಯಗಳನ್ನೂ ಹಾಳು ಮಾಡಿರುತ್ತಾರೆ. ಕೆಲವು ಕಡೆ ಪತ್ರಿಕೆಗಳಲ್ಲಿ ಬಂದಂತೆ ಶಾಲಾ ಕಂಪ್ಯೂಟರ್‌ಗಳು, ಬಿಸಿಯೂಟ ತಯಾರಿಸುವ ಪಾತ್ರೆಗಳು, ಗ್ಯಾಸ್ ಸಿಲಿಂಡರ್ ಸಹ ಕಳ್ಳತನವಾಗಿರುತ್ತವೆ. ಹೆಂಚುಗಳನ್ನು ಒಡೆದು ಹಾಕುವುದು, ಗೇಟುಗಳನ್ನು ಮುರಿದು ಹಾಕುವುದು ಕಂಡು ಬರುತ್ತದೆ. ಕೆಲವು ಕಡೆ ಹಸು, ಎಮ್ಮೆ, ಮೇಕೆಗಳನ್ನೂ ಶಾಲೆ ಆವರಣ ಅಥವಾ ಪಕ್ಕದಲ್ಲಿ ಕಟ್ಟಿ ಹಾಕುವ, ಸಂಜೆ ಆದರೆ ಕುಡಿತದ ತಾಣವಾಗುವ ಉದಾಹರಣೆಗಳು ಸಹ ಸಿಗುತ್ತವೆ. ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ಅಂಶವೆಂದರೆ ನಮ್ಮ ನಮ್ಮ ಊರುಗಳ ಶಾಲೆ ನಮ್ಮೆಲ್ಲರ ಆಸ್ತಿ. ಜ್ಞಾನ ದೇವಾಲಯಗಳು. ನಮ್ಮ ಊರಿನ ಮಕ್ಕಳಿಗೆ ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ಮಕ್ಕಳಿಗೆ ಈ ಶಾಲೆಗಳು ಊಟದೊಂದಿಗೆ ಅವರಿಗೆ ಪಾಠವನ್ನು ಕಲಿಸುವ ಪವಿತ್ರ ಸ್ಥಳ. ಅವುಗಳನ್ನು ಎಲ್ಲಾ ದಿನಗಳಲ್ಲೂ ಅದರಲ್ಲೂ ರಜಾ ದಿನಗಳಲ್ಲಿ ವಿಶೇಷವಾಗಿ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ.

ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಊರಿನ ಮುಖಂಡರು, ಯುವಜನರು, ಮಹಿಳಾ ಸಂಘದ ಸದಸ್ಯರು ತಮ್ಮ ಬಿಡುವಿನ ಸಮಯದಲ್ಲಿ ಶಾಲೆಗಳ ಕಡೆ ಅದರಲ್ಲೂ ಮುಖ್ಯವಾಗಿ ರಜೆ ದಿನಗಳಲ್ಲಿ ಭೇಟಿ ನೀಡಿ ಶಾಲೆಗಳ ರಕ್ಷಣೆಯ ಜವಾಬ್ದಾರಿ ತೆಗೆದುಕೊಂಡರೆ ಉತ್ತಮ ಬೆಳವಣಿಗೆಯಾಗುತ್ತದೆ. ಆಯಾ ಊರಿನ ಮಕ್ಕಳಿಗೆ ಕಲಿಯಲು ಸುಸಜ್ಜಿತ ಶಾಲೆ ರಜೆ ಮುಗಿದ ನಂತರವೂ ಲಭ್ಯವಿರುತ್ತವೆ.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ

■ ಚಾಮರಾಜಪುರಂ ರೈಲ್ವೆ ನಿಲ್ದಾಣದ ಅವ್ಯವಸ್ಥೆ



ಮಾನ್ಯರೆ,

ಮೈಸೂರಿನ ಚಾಮರಾಜಪುರಂ ರೈಲ್ವೆ ನಿಲ್ದಾಣದಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿವೆ. ಮಹಿಳಾ ಅಂಗವಿಕಲ ಮತ್ತು ಪುರುಷ ಶೌಚಾಲಯಗಳು ಮತ್ತು ಪ್ರಯಾಣಿಕರ ರೈಲಿಗಾಗಿ ಕಾಯುವ ಕೊಠಡಿಗಳು ಇದ್ದು ಇಲ್ಲದಂತಾಗಿದೆ. ಎಲ್ಲಾದಕ್ಕೂ ಬೀಗ ಹಾಕಿದ್ದಾರೆ. ಜೊತೆಗೆ ಇವೆಲ್ಲಾ ಕೊಠಡಿಗಳ ಹತ್ತಿರ ಅಧಿಕ ವೋಲ್ಟೇಜ್ ವಿದ್ಯುದ್ದೀಕರಣ ತಂತಿಗಳು ಇವೆ ಎಂದು ಕೆಂಪು ಬೋರ್ಡ್ ಸಹ ಹಾಕಿದ್ದಾರೆ. ಶೌಚಾಲಯ ಸೌಕರ್ಯವಿಲ್ಲದೆ ಪ್ರಯಾಣಿಕರು ಪರದಾಡುವಂತಾಗಿದೆ. ಪ್ರತಿದಿನ ಸಾವಿರಾರು ಜನರು ಬಂದು ಹೋಗಿ ಮಾಡುವ ಸಾರ್ವಜನಿಕ ಸಂಸ್ಥೆಗಳ ಸಮಸ್ಯೆಗೆ ಪರಿಹಾರ ನೀಡಬೇಕೆಂದು ಮನವಿ.

–ಡಾ.ಜಿ. ರವಿಶಂಕರ್, ಅಗ್ರಹಾರ, ಮೈಸೂರು

■ ಸ್ವಚ್ಛತೆ ಇಲ್ಲದೆ ಕಸದ ಗೂಡಾಗಿರುವ ಬೈಲಾಪುರದಮ್ಮನ ಗುಡಿ



ಮಾನ್ಯರೆ,

ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಪುರಾಣ ಪ್ರಸಿದ್ಧ ಸ್ಥಳ ಚುಂಚನಕಟ್ಟೆಗೆ ಕೇವಲ ಮೂರು ಕಿಮೀ ಸಮೀಪ ಚಾಮರಾಜ ಎಡದಂಡೆ ಕಾಲುವೆಯ ಪಕ್ಕದಲ್ಲಿ ಶಕ್ತಿ ದೇವತೆ ಬೈಲಾಪುರದಮ್ಮ ಗುಡಿ ಇದೆ. ಸುತ್ತಲಿನ ನಾಲ್ಕಾರು ತಾಲೂಕಿನ ನಾಗರಿಕರಿಗೆ ಹಾಗೂ ದೂರದ ಊರಿನವರಿಗೂ ಪ್ರಸಿದ್ಧಿಯಾದ ದೇವತೆ, ಇಲ್ಲಿ ಹರಕೆ ಕಟ್ಟಿಕೊಂಡರೆ ಅಂದುಕೊಂಡಿದ್ದು ಆಗುವುದೆಂಬ ನಂಬಿಕೆ ಮಾತ್ರವಲ್ಲ ಹಾಗೆಯೇ ನಡೆಯುವುದುಂಟು, ಇತ್ತೀಚಿನ ದಿನಗಳಲ್ಲಿ ನಾಮಕರಣ, ಬೀಗರ ಔತಣ ಮುಂತಾದ ಸಮಾರಂಭಗಳನ್ನು ಏರ್ಪಡಿಸುವ ಪರಿಪಾಠವು ಪ್ರಾರಂಭವಾಗಿದೆ. ಗುಡಿಯ ಸಮೀಪ ಮೂರು ಫಂಕ್ಷನ್ ಹಾಲ್‌ಗಳನ್ನು ಖಾಸಗಿಯವರು ಇದಕ್ಕೆಂದೇ ಕಟ್ಟಿಸಿದ್ದಾರೆ. ಮುಖ್ಯವಾಗಿ ಹರಕೆ ಕಟ್ಟಿಕೊಂಡವರು ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಟ್ಟು ಅಲ್ಲೇ ಅಡುಗೆ ಮಾಡಿ ಪ್ರಸಾದ ಸೇವಿಸುವುದು ವಾಡಿಕೆ.

ಸಮೀಪದ ಊರಿನವನಾದ ನಾನೂ ಸಹ ಕಳೆದ ವಾರ ದೇವತೆಯ ದರ್ಶನಕ್ಕೆ ಹೋಗಿದ್ದೆ. ಅಂದು ಅಂದಾಜು ಮೂರು ಸಾವಿರಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಶಕ್ತಿದೇವತೆಯ ಗುಡಿ ಸುತ್ತ ಸ್ವಚ್ಛತೆ ಇಲ್ಲದಿರುವುದು ಎದ್ದು ಕಾಣುತ್ತಿತ್ತು. ಗರ್ಭಗುಡಿಯ ಒಳಗೂ ಸ್ವಚ್ಛತೆ ಇಲ್ಲದೆ ಕಾಲಿಡುವುದಕ್ಕೂ ಸಾಧ್ಯವಾಗದ ಹಾಗೆ ಇತ್ತು. ಅರ್ಚಕರಿಲ್ಲದ ಇಲ್ಲಿ ಭಕ್ತರೇ ಎಡೆ ಇಟ್ಟು ಪೂಜೆ ಮಾಡಿಕೊಂಡು ಬರಬೇಕು. ಎಡೆಗಾಗಿ ಇಟ್ಟ ಮಾಂಸದ ಅಡುಗೆ ಚೆಲ್ಲಾಡಿತ್ತು. ಹೊರಗೆ ಕೋಳಿ ಪುಕ್ಕ, ಪ್ಲಾಸ್ಟಿಕ್ ತ್ಯಾಜ್ಯ, ಬಲಿಯ ರಕ್ತ ಆವರಣದ ಪೂರ ಚೆಲ್ಲಾಡಿ, ಬಹಳ ದಿನಗಳಿಂದ ತೆರವುಗೊಳಿಸದೇ ಇರುವುದರಿಂದ ಕೆಟ್ಟ ವಾಸನೆ ಮೂಗಿಗೆ ಬಡಿಯುತ್ತಿತ್ತು. ಇನ್ನು ಕಸದ ಗುಡ್ಡೆಯೇ ನೀರಿಲ್ಲದೆ ಒಣಗಿದ್ದ ನಾಲೆಯೊಳಗೆ ಬಿದ್ದಿತ್ತು. ಒಟ್ಟಾರೆ ನೈರ್ಮಲ್ಯತೆ ಇಲ್ಲದೆ ಸಂಪೂರ್ಣ ಭಾಗವು ಕಸದಿಂದ ಕೂಡಿದ ಬಯಲಾಗಿತ್ತು ಬೈಲಾಪುರದಮ್ಮನ ಗುಡಿ.

ದಯಮಾಡಿ ತಾಲೂಕು ಆಡಳಿತ ಇತ್ತ ಗಮನಹರಿಸಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಶಾಶ್ವತ ಯೋಜನೆ ರೂಪಿಸಿ. ಇದಕ್ಕಾಗಿ ಸರ್ಕಾರದ ಅನುದಾನದ ಅವಶ್ಯಕತೆ ಇಲ್ಲ. ಭಕ್ತರು ನೀಡುವ ಕಾಣಿಕೆಯ ಹಣವೇ ಸಾಕು. ಜನಪ್ರತಿನಿಧಿಗಳು ಮನಸ್ಸು ಮಾಡಿದರೆ ಇದು ತೀರಾ ಸಣ್ಣ ಕೆಲಸ. ಮಾನ್ಯರೆ ಇಲ್ಲಿ ನಿಮ್ಮ ಬದ್ಧತೆ ತೋರಿ, ತ್ವರಿತವಾಗಿ ಕ್ರಮ ಕೈಗೊಂಡು ಅಮ್ಮನ ಕೃಪೆಗೆ ಪಾತ್ರರಾಗಿ.


–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಆಧ್ಯಾತ್ಮದ ಜ್ಞಾನಯೋಗಿ ಚಿನ್ಮಯಾನಂದರು



> "ಭಗವದ್ಗೀತೆಯ ಕುರಿತಾದ ಸ್ವಾಮಿ ಚಿನ್ಮಯಾನಂದರ ಪ್ರವಚನಗಳ ವಿಡಿಯೋ ಪ್ರತಿಗಳು ವಿಶ್ವದೆಲ್ಲೆಡೆ ಪ್ರಖ್ಯಾತಿಯನ್ನು ಗಳಿಸಿವೆ. ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಆದಿಶಂಕರರ ಕೃತಿ ಚಿಂತನೆ ಮತ್ತು ಕಾರ್ಯಗಳ ಪರಿಚಯವನ್ನು ವಿಶ್ವದೆಲ್ಲೆಡೆ ಕೊಂಡೊಯ್ಯುವುದರ ಮೂಲಕ ಸ್ವಾಮಿ ಚಿನ್ಮಯಾನಂದರು ಮಾಡಿದ ಕ್ರಾಂತಿ ಅಪೂರ್ವವಾದದ್ದು. ತಮ್ಮ ಬರವಣಿಗೆಗಳಲ್ಲಿ ಮತ್ತು ಉಪನ್ಯಾಸಗಳಲ್ಲಿ ಸ್ವಾಮಿ ಚಿನ್ಮಯಾನಂದರು ನೀಡುತ್ತಿದ್ದ ಆಳ, ಸ್ಪಷ್ಟತೆ, ನಿಖರತೆ, ಆಕರ್ಷಣೆ, ಹಾಸ್ಯ ಮನೋಭಾವ ಮತ್ತು ಅನುಭೂತಿಗಳು ಸರಿಸಾಟಿಯಿಲ್ಲದ್ದು. ತಮ್ಮ ಕೊನೆಯ ಉಸಿರಿರುವವರೆಗೂ ಬಿಡುವಿಲ್ಲದಂತೆ ಅದ್ವೈತ ವೇದಾಂತದ ಸೌಗಂಧವನ್ನು ತಾವು ಹೋದಲ್ಲೆಲ್ಲಾ ಪಸರಿಸಿದರು.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ನಮ್ಮ ಪೂರ್ವಿಕರು ಭಗವದ್ಗೀತೆಯನ್ನು ಸ್ವತಂತ್ರ ಶಾಸ್ತ್ರ ಗ್ರಂಥವೆಂದು ಪರಿಗಣಿಸಿದ್ದಾರೆ. ಸ್ವತಃ ಆದಿ ಶಂಕರಾಚಾರ್ಯರೇ ಹೇಳಿರುವಂತೆ ಇದು ಸಮಸ್ತ ವೇದಾರ್ಥಸಾರ ಸಂಗ್ರಹ. ಉಪನಿಷತ್ತುಗಳು ಹೇಳುವ ವಿಚಾರಗಳನ್ನೇ ಭಗವದ್ಗೀತೆಯು ಸರಳವಾಗಿ ಪ್ರತಿಯೊಬ್ಬರಿಗೂ ಅರ್ಥವಾಗುವಂತೆ ತಿಳಿಸುತ್ತದೆ. ವಿದ್ವಾಂಸರೊಬ್ಬರು ಹೇಳುವಂತೆ ಉಪನಿಷತ್ತುಗಳು ಹಸುಗಳ ರೂಪವಾದರೆ, ಭಗವದ್ಗೀತೆಯು ಅವುಗಳಿಂದ ಕರೆದುಕೊಂಡ ಹಾಲಿನಂತೆ. ಗೀತೆಯು ಶೋಕ ನಿವಾರಿಸುತ್ತದೆ. ಇದೇ ಗೀತೆಯ ಬಹು ಮುಖ್ಯ ದಿವ್ಯೋದ್ದೇಶ. ಗೀತೆಯ ಅರ್ಥವನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿಕೊಂಡು ಅದನ್ನೇ ಮನಸ್ಸಿನಲ್ಲಿ ನಾವು ಮೆಲುಕು ಹಾಕುತ್ತಾ ಹೋದರೆ, ನಮ್ಮ ನಮ್ಮ ಅನುಭವ ಮತ್ತು ಅನುಭಾವದಲ್ಲಿ ಅದನ್ನು ಒಳಹೊಕ್ಕು ನೋಡಿದಾಗ ಅದರಲ್ಲಿರುವ ಮಾರ್ಗೋಪಾಯಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಲು ಪ್ರಯತ್ನಿಸಿದರೆ ಭಗವದ್ಗೀತೆಯ ಭವ್ಯತೆ ಯಾರಿಗಾದರೂ ಅರಿವಾದೀತು. ಇವತ್ತು ಏನನ್ನು, ಯಾವುದನ್ನು ನಾವು ವ್ಯಕ್ತಿತ್ವ ವಿಕಸನವೆಂದು, ವ್ಯಕ್ತಿತ್ವವಿಕಸನ ತರಬೇತಿ ಏನೆಲ್ಲಾ ವಿವಿಧ ರೀತಿಯ ಹೆಸರುಗಳಿಂದ ನಾವು ಕರೆಯುತ್ತೇವೆಯೋ ಅದು ಭಗವದ್ಗೀತೆಯಿಂದಲೇ ಸಿಗುತ್ತದೆ. ಆಧ್ಯಾತ್ಮದಲ್ಲಿ ನಿಷ್ಠರಾದ ದಾರ್ಶನಿಕ ಚೇತನರಾದ ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಲೋಕಮಾನ್ಯ ತಿಲಕ್, ಮಹಾತ್ಮಾ ಗಾಂಧಿ, ಅರವಿಂದ, ಅನಿಬೆಸೆಂಟ್, ಡಿವಿಜಿ ಮುಂತಾದ ಮಹನೀಯರೆಲ್ಲಾ ಗೀತೆಯಿಂದಲೇ ಬೆಳಕು ಕಂಡವರು. ಅವರಿಗೆಲ್ಲ ಒಂದು ರೀತಿ ಗೀತೆಯೇ ಊರುಗೋಲಾಗಿತ್ತು ಕಾರ್ಗತ್ತಲಲ್ಲಿ ಇಣುಕುವ ಬೆಳಕಿನ ಕಿರಣವಾಗಿತ್ತು.

ಇಂತಹ ಮಹತ್ವದ, ಪ್ರಭಾವ ಶಾಲಿಯಾದ ಭಗವದ್ಗೀತೆಯನ್ನು ಮನೆಮನೆಗೆ, ಮನಮನಕೆ ತಲುಪಿಸುವ ಕೈಂಕರ್ಯವನ್ನು ಮಾಡಿದವರು ಆಧ್ಯಾತ್ಮದ ಮೇರು ಶಿಖರ, ಜ್ಞಾನ ಚಿನ್ಮಯಿ, ಸ್ವಾಮಿ ಚಿನ್ಮಯಾನಂದ ಸರಸ್ವತಿಯವರು.

ಭಗವದ್ಗೀತೆಯನ್ನು ಇವತ್ತಿನ ನಮ್ಮ ಕಾಲಘಟ್ಟದ ಜನರ ಹತ್ತಿರಕ್ಕೆ ತಂದುಕೊಟ್ಟ ಭಗವದ್ಗೀತೆಯ ಭವ್ಯನಿಧಿ ಅವರು. ಇಂಥ ಜ್ಞಾನದೀವಿಗೆ ಸ್ವಾಮಿ ಚಿನ್ಮಯಾನಂದ ಸರಸ್ವತಿಯವರು. ನಮ್ಮ ಭರತ ಭೂಮಿಯಲ್ಲಿ ಅವತರಿಸಿದ್ದು ಅರ್ಥಾತ್ ಜನಿಸಿದ್ದು 1916ರ ಮೇ 8ರಂದು. ಜನ್ಮಸ್ಥಳ ದೇಗುಲಗಳ ನಾಡು ಎಂದೇ ಹೆಸರಾಗಿರುವ ಕೇರಳದ ಎರ್ನಾಕುಲಂ. ತಂದೆ ವಡಕ್ಕೆ ಕುರುಪತ್ತು ಕುಟ್ಟಿ ಮೆನನ್, ತಾಯಿ ಪಾರು ಕುಟ್ಟಿ ಅಮ್ಮ. ಭಾರತೀಯ ಸಂಸ್ಕೃತಿಯಲ್ಲಿ 'ಭಗವದ್ಗೀತೆ'ಯನ್ನು ನಮ್ಮ ದಿನನಿತ್ಯದ ಬದುಕಿನಲ್ಲಿ ಬಳಸಿ ಕೊಳ್ಳುವುದು ಹೇಗೆಂದು ಅರಿವು ಮೂಡಿಸಿದ ದೇವಜ್ಞಾನದ ಪ್ರೇರಕ ಶಕ್ತಿ ಮಹಾತ್ಮ ಸ್ವಾಮಿ ಚಿನ್ಮಯಾನಂದರು. 'ಭಗವದ್ಗೀತೆ'ಯ ಬಗೆಗಿನ ಅವರ ಗೀತಾಜ್ಞಾನ ಯಜ್ಞಗಳೆಂಬ ಪ್ರಚಾರೋಪನ್ಯಾಸಗಳು, ಬೋಧನೆಗಳು, ಪುಸ್ತಕಗಳು, ಪ್ರಕಟಣೆಗಳು ಭಾಷಣಗಳು..... ಹೀಗೆ ಭಗವದ್ಗೀತೆಯಲ್ಲಿ ಮತ್ತು ಭಾರತೀಯ ಅಧ್ಯಾತ್ಮಿಕ ತತ್ವದಲ್ಲಿ ಜನಾಸಕ್ತಿಯನ್ನು ಮೂಡಿಸಿದ ಸೇವೆಗಳು ಅನವರತವೂ ಹಾಗೂ ಅದ್ವಿತೀಯವೂ ಆದದ್ದು.

ಜ್ಞಾನ ಮಾರ್ಗದಲ್ಲಿ ಜೀವನಯಾನ: ಸ್ವಾಮಿ ಚಿನ್ಮಯಾನಂದರ ಪೂರ್ವಾಶ್ರಮದ ಹೆಸರು ಬಾಲಕೃಷ್ಣ ಮೆನನ್ನರು. ಸ್ವಾಮಿ ಚಿನ್ಮಯಾನಂದ ಸರಸ್ವತಿ ನಾಮಾಂಕಿತದಿಂದ ದೇಶದಲ್ಲಿ ಪೂಜ್ಯ ಸ್ಥಾನವನ್ನು ಅಲಂಕರಿಸಿದ್ದ ಇವರು ಕಾನೂನು ಮತ್ತು ಇಂಗ್ಲಿಷ್ ಸಾಹಿತ್ಯಗಳಲ್ಲಿ ಸ್ನಾತಕೋತ್ತರ ಪದವೀಧರರು. ಸಾಹಿತ್ಯಾಸಕ್ತರಾದ ಇವರು ಅನೇಕ ಪುಸ್ತಕಗಳ ರಚನೆಕಾರರು. ಅಪ್ರತಿಮ ದೇಶ ಭಕ್ತರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ, ಬ್ರಿಟಿಷ್ ಸರ್ಕಾರದಿಂದ ಬಂಧಿಸಲ್ಪಟ್ಟು ಕಾರಾಗೃಹಕ್ಕೂ ತಳ್ಳಲ್ಪಟ್ಟಿದ್ದರು. ಮೂಲತಃ ಪತ್ರಕರ್ತರಾದ ಅವರು ಸೆರೆಮನೆಯಿಂದ ಹೊರಬಂದು 'ದಿ ನ್ಯಾಷನಲ್ ಹೆರಾಲ್ಡ್' ಹೀಗೆ ಪತ್ರಿಕೆಯ ವರದಿಗಾರರಾಗಿ ಕಾರ್ಯನಿರ್ವಹಿಸತೊಡಗಿದರು. ಕಾರ್ಯನಿರ್ವಹಿಸುತ್ತಿದ್ದ ಬಾಲಕೃಷ್ಣ ಮೆನನ್ನರಿಗೆ, ಹಿಮಾಲಯದಲ್ಲಿ ಸಾಧುಗಳೆಂದು ಹೇಳಿಕೊಳ್ಳುತ್ತಾ ನೆಲೆಸಿದ್ದವರ ಕುರಿತಾಗಿ, ಡೋಂಗೀತನದವರು ಎಂಬ ಭಾವವಿತ್ತು. ಹಾಗಾಗಿ ಈ ಜನರ ಡೋಂಗಿತನವನ್ನು ಬಯಲು ಮಾಡುವ 'ವಿಶಿಷ್ಟ ಪತ್ರಿಕಾ ವರದಿ' ಬರೆಯುವಾಸೆ ಅವರಲ್ಲಿ ಗರಿಗೆದರಿತು. ಈ ಹುಮ್ಮಸ್ಸಿನಲ್ಲಿ ಅವರು ರಿಷಿಕೇಶದಲ್ಲಿರುವ 'ಆನಂದ ಕುಟೀರ'ದಲ್ಲಿನ ಸ್ವಾಮಿ ಶಿವಾನಂದರ ಆಶ್ರಮಕ್ಕೆ ಪ್ರಯಾಣ ಬೆಳೆಸಿದರು. ಸಾಧು–ಸಂತರ ಬದುಕಿನ ಬಗೆಗೆ ತಾವು ಭಾವಿಸಿಕೊಂಡಿದ್ದ ವ್ಯತಿರಿಕ್ತ ಬದುಕನ್ನು ಅನ್ವೇಷಿಸ ಹೊರಟಿದ್ದ ಬಾಲಕೃಷ್ಣ ಮೆನನ್ನರ ಯಾತ್ರೆ ಪಡೆದ ತಿರುವು ಅನಿರೀಕ್ಷಿತವಾಗಿತ್ತು. ಬಹಿರ್ಮುಖವಾಗಿ ಹೊರಟಿದ್ದ ಈ ಅನ್ವೇಷಣೆ ಇದ್ದಕ್ಕಿದ್ದಂತೆ ಅಂತರ್ಮುಖವಾಗಿ ಹರಿಯತೊಡಗಿತು. ಅರ್ಥಾತ್ ಅವರ ಮೈ–ಮನ ಆಧ್ಯಾತ್ಮಿಕದತ್ತ ಅವರಿಗೆ ಅರಿವಿಲ್ಲದಂತೆ ಹರಿಯಿತು.

ಬಂಧ ಮುಕ್ತ ಬದುಕಿನತ್ತ: ಸ್ವಾಮಿ ಶಿವಾನಂದರ ದೈವೀತೇಜಸ್ಸು, ಪ್ರೇಮ ಮತ್ತು ವೇದಾಂತದ ಬೋಧನೆಗಳು ಈ ಯುವ ಹೃದಯದ ಮೇಲೆ ಅಪಾರವಾದ ಪರಿಣಾಮವನ್ನು ಬೀರಿಬಿಟ್ಟವು. ಅವರಲ್ಲಿ ಅಂತರಂಗಿಕವಾಗಿ ಅಪೂರ್ವವಾದ ಬದಲಾವಣೆಗಳು ತೆರೆದುಕೊಳ್ಳತೊಡಗಿದವು. ಹೀಗಾಗಿ ಅವರು ತಮ್ಮ ಸ್ವಯಂ ಬದುಕಿನ ಮೂಲ ಉದ್ದೇಶವನ್ನೇ ಪ್ರಶ್ನಿಸಿಕೊಳ್ಳಲಾರಂಭಿಸಿ, ಶಾಶ್ವತವಾದ ಸಂತೋಷದ ಒಳಗುಟ್ಟೇನಿರಬಹುದು ಎಂಬ ಕುರಿತು ಶೋಧಕ್ಕೆ ಮೊದಲು ಮಾಡಿದರು.ಮಹಾನ್ ಸಂತರ ಸಾಂಗತ್ಯ ಮತ್ತು ಅವರ ಬೋಧನೆಗಳನ್ನು ಸವಿಯುವುದರ ಜೊತೆ ಜೊತೆಗೆ ಸ್ವಯಂ ತಾವೇ ಬಿಡುಗಡೆಯ ಹಾದಿಯನ್ನೂ ಆಯ್ದುಕೊಂಡರು. ಫೆಬ್ರವರಿ 25, 1949ರ ಶಿವರಾತ್ರಿಯ ದಿನದಂದು ಬಾಲಕೃಷ್ಣ ಮೆನನ್ ಅವರು ಸ್ವಾಮಿ ಶಿವಾನಂದರಿಂದ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು. ಸ್ವಾಮಿ ಶಿವಾನಂದರು ಇವರಿಗೆ **'ಸ್ವಾಮಿ ಚಿನ್ಮಯಾನಂದ ಸರಸ್ವತಿ'** ಎಂಬ ಹೆಸರನಿಟ್ಟರು. ಚಿನ್ಮಯವೆಂಬುದು ಪೂರ್ಣ ಜ್ಞಾನದ ಬೆಳಕು. ಪರಿಶುದ್ಧವಾದ ಅರಿವು ಎಂಬುದರ ಸೂಚಕವಾಗಿದೆ. ಸ್ವಾಮಿ ಶಿವಾನಂದರು ತಮ್ಮ ಪ್ರೀತಿಯ ಪಟ್ಟ ಶಿಷ್ಯ ಚಿನ್ಮಯಾನಂದರನ್ನು ಹಿಮಾಲಯ ತಪ್ಪಲಿನ ಉತ್ತರಕಾಶಿಯಲ್ಲಿದ್ದ ತಮ್ಮ ಕಾಲದ ಶ್ರೇಷ್ಠ ವೇದಾಂತಿಗಳಾದ ಸ್ವಾಮಿ ತಪೋವನಂ ಅವರ ಬಳಿ ಕಳುಹಿಸಿಕೊಟ್ಟರು. ಸ್ವಾಮಿ ತಪೋವನಂ ಅವರು ತಮ್ಮ ಶಿಷ್ಯರ ಆಯ್ಕೆಯಲ್ಲಿ ಅತ್ಯಂತ ಕಟ್ಟುನಿಟ್ಟಿನ ವಿಧಾನಗಳನ್ನು ಅನುಸರಿಸುತ್ತಿದ್ದರು. ಹಾಗೆ ಆಯ್ದುಕೊಂಡವರನ್ನು ಕೂಡಾ ಅವರು ಹಲವಾರು ಕಠಿಣ ಪರೀಕ್ಷೆಗಳಿಗೀಡು ಮಾಡಿ, ಅವರಿಗೆ ಅತ್ಯಂತ ಕಟ್ಟುನಿಟ್ಟಾದ ನಿಬಂಧನೆಗಳನ್ನು ವಿಧಿಸುತ್ತಿದ್ದರು. ಈ ಎಲ್ಲವನ್ನೂ ನಿಷ್ಠೆಯಿಂದ ಒಪ್ಪಿಕೊಂಡ ಸ್ವಾಮಿ ಚಿನ್ಮಯಾನಂದರು ಈ ಮಹಾನ್ ಸಂತರಾದ ಸ್ವಾಮಿ ತಪೋವನಂ ಅವರ ಶಿಷ್ಯರಾಗಿ ಸಕಲಸಂಗ ಪರಿತ್ಯಾಗಿಗಳಾಗಿ ವೇದಾಂತದ ಆಳವಾದ ಅಧ್ಯಯನವನ್ನು ಕೈಗೊಂಡರು.

ಸ್ವಾಮಿ ತಪೋವನಂ ಅವರ ಮಾರ್ಗದರ್ಶನ ಮತ್ತು ಕೃಪಾಶೀರ್ವಾದದ ಜೊತೆಗೆ ಗಂಗಾಮಾತೆಯ ಪರಿಶುದ್ಧ ಹರಿವು ಮತ್ತು ಮಾನವಕುಲಕ್ಕಾಗಿನ ಆಕೆಯ ನಿತ್ಯ ಸೇವಾಹರಿವಿನಲ್ಲಿ ಪುನೀತರಾಗಿ ಆಧ್ಯಾತ್ಮಿಕ ಅನುಭಾವವನ್ನು ಪಡೆದುಕೊಂಡ ಸ್ವಾಮಿ ಚಿನ್ಮಯಾನಂದರು, ತಮ್ಮ ಗುರುವಿನಿಂದ ಜನಸಾಮಾನ್ಯರಿಗೆ ವೇದಾಂತದ ಸುಜ್ಞಾನವನ್ನು ತಲುಪಿಸಬೇಕೆಂಬ ಆಜ್ಞೆ ಪಡೆದರು. ಭಾರತದ ಎಲ್ಲೆಡೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಅವನತಿಯನ್ನು ವ್ಯಾಪಕವಾಗಿ ಕಂಡಿದ್ದ ಸ್ವಾಮಿ ಚಿನ್ಮಯಾನಂದರಿಗೆ ತಾವು ಪಡೆದ ಜ್ಞಾನ ಮತ್ತು ಸಂತೃಪ್ತ ಭಾವವನ್ನು ಎಲ್ಲೆಡೆ ಕೊಂಡೊಯ್ಯಬೇಕೆಂಬ ಹಂಬಲವು ಈ ವೇಳೆ ಕೂಡಿಬಂತು.

ಜ್ಞಾನ ಯಜ್ಞ: ದಿವ್ಯಜ್ಞಾನಿ ಸ್ವಾಮಿ ಚಿನ್ಮಯಾನಂದರ ಉಪನ್ಯಾಸಗಳಿಗೆ 'ಜ್ಞಾನ ಯಜ್ಞ' ಎಂದು ಹೆಸರು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಉಪದೇಶಗಳಿಗೆ 'ಜ್ಞಾನ ಯಜ್ಞ'ವೆಂಬ ಉಲ್ಲೇಖವಿದೆ. ದಿವ್ಯ ಜ್ಞಾನದ ಸಂಪಾದನೆಗಾಗಿ ನಿಷ್ಠ ಅಭಿಲಾಷಿಯು ನಡೆಸುವ ಶ್ರದ್ಧಾವಂತ ಶಾಸ್ತ್ರಾಧ್ಯಯನಕ್ಕೆ ಯಜ್ಞವೆಂದು ಹೆಸರು. ಸ್ವಾಮಿ ಚಿನ್ಮಯಾನಂದರು ತಮ್ಮ ಮೊದಲ ಜ್ಞಾನಯಜ್ಞವೆಂಬ ಸರಣಿ ಉಪನ್ಯಾಸಗಳನ್ನು 1951ರ ಡಿಸೆಂಬರ್ ಮಾಸದಲ್ಲಿ ಪುಣೆಯಲ್ಲಿನ ಪುಟ್ಟ ದೇಗುಲವೊಂದರಲ್ಲಿ ನಡೆಸಿಕೊಟ್ಟರು.

ಸ್ವಾಮಿ ಚಿನ್ಮಯಾನಂದರ ಉಪನ್ಯಾಸಗಳು, ವೇದಗಳ ಅಧ್ಯಯನ ಮತ್ತು ಸ್ವಯಂ ನೇರ ಅನುಭಾವಗಳಿಂದ ಶ್ರೀಮಂತವಾಗಿದ್ದವು. ದಿನೇ ದಿನೆ ಸ್ವಾಮಿ ಚಿನ್ಮಯಾನಂದರ ಸೃಜನಶೀಲ, ವಿವೇಕಯುಕ್ತ, ಸಂವೇದನಾಶೀಲ ಮತ್ತು ಹಾಸ್ಯದ ಲೇಪನವನ್ನುಳ್ಳ ಆಕರ್ಷಕ ಶೈಲಿಯ ಉಪನ್ಯಾಸಗಳು ವಿಶ್ವದೆಲ್ಲೆಡೆ ಸಹಸ್ರಾರು ಜನರನ್ನಾಕರ್ಷಿಸತೊಡಗಿದವು. ಹೀಗೆ ಬೆಳೆದ ಅವರ ಅಭಿಮಾನಿ ಬಳಗವು 1953ರಲ್ಲಿ 'ಚಿನ್ಮಯ ಮಿಷನ್' ಸಂಘಟನೆಗೆ ಚಾಲನೆಯನ್ನು ನೀಡಿತು.

ವಿಶ್ವದಾದ್ಯಂತ ತಮ್ಮ ಬಳಿ ಬಂದ ಆಸಕ್ತರಿಗೆಲ್ಲಾ ಸ್ವಾಮಿ ಚಿನ್ಮಯಾನಂದರು ಅತ್ಯಂತ ಪ್ರೀತಿಯಿಂದ ಬೋಧಿಸಿದರು. ಆಗಸ್ಟ್ 3, 1993ರಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಇಹಲೋಕದ ಯಾತ್ರೆಯನ್ನು ಮುಗಿಸಿದ ಈ ಜ್ಞಾನ ತಪಸ್ವಿಗಳು, ಅಲ್ಲಿಯವರೆಗೆ ವಿಶ್ವದಾದ್ಯಂತ ಸಂಚರಿಸಿ 576ಜ್ಞಾನ ಯಜ್ಞಗಳನ್ನೂ, ಅಸಂಖ್ಯಾತ ಆಧ್ಯಾತ್ಮಿಕ ಶಿಬಿರಗಳನ್ನೂ ನಡೆಸಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೋಟ್ಯಾಂತರ ಹೃದಯಗಳನ್ನು ಸಂವೇದಿಸಿದರು.

ಅನುಭವಾಮೃತದ ಗ್ರಂಥ ರಚನೆ : ವಿಶ್ವದೆಲ್ಲೆಡೆ ಸಂಚಾರ, ಬಿಡುವಿಲ್ಲದ ಕಾರ್ಯಕ್ರಮಗಳು ಮತ್ತು ಕ್ರಮೇಣವಾಗಿ ಶಿಥಿಲಗೊಳ್ಳುತ್ತಿದ್ದ ದೇಹ ವ್ಯವಸ್ಥೆ, ಇವ್ಯಾವುದನ್ನೂ ಲೆಕ್ಕಿಸದ ಸ್ವಾಮಿ ಚಿನ್ಮಯಾನಂದರು 35ಕ್ಕೂ ಹೆಚ್ಚು ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಉಪನಿಷತ್ತು ಮತ್ತು ಭಗವದ್ಗೀತೆಯ ಕುರಿತಾದ ವಿಶ್ಲೇಷಣೆಗಳು ಪ್ರಮುಖವಾಗಿವೆ. ಭಗವದ್ಗೀತೆಯ ಕುರಿತಾದ ಅವರ ರಚನೆಯಂತೂ ಅತ್ಯದ್ಭುತವಾದ ವಿಶ್ಲೇಷಣೆ, ದಿವ್ಯ ಅನುಭಾವ, ಅತ್ಯಂತ ರಚನಾತ್ಮಕ, ಜೀವನದಲಿ ಅಳವಡಿಕೆಗೆ ಯೋಗ್ಯ, ಸುಂದರ ನಿದರ್ಶನಗಳು ಮತ್ತು ಅನುಭೂತಿಗಳನ್ನು ಹೊತ್ತುಕೊಂಡ ಶ್ರೇಷ್ಠ ಕೃತಿ ಎನಿಸಿವೆ

ಭಗವದ್ಗೀತೆಯ ಕುರಿತಾದ ಸ್ವಾಮಿ ಚಿನ್ಮಯಾನಂದರ ಪ್ರವಚನಗಳ ವಿಡಿಯೋ ಪ್ರತಿಗಳು ವಿಶ್ವದೆಲ್ಲೆಡೆ ಪ್ರಖ್ಯಾತಿಯನ್ನು ಗಳಿಸಿವೆ. ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಆದಿ ಶಂಕರರ ಕೃತಿ ಚಿಂತನೆ ಮತ್ತು ಕಾರ್ಯಗಳ ಪರಿಚಯವನ್ನು ವಿಶ್ವದೆಲ್ಲೆಡೆ ಕೊಂಡೊಯ್ಯುವುದರ ಮೂಲಕ ಸ್ವಾಮಿ ಚಿನ್ಮಯಾನಂದರು ಮಾಡಿದ ಕ್ರಾಂತಿ ಅಪೂರ್ವವಾದದ್ದು. ತಮ್ಮ ಬರವಣಿಗೆಗಳಲ್ಲಿ ಮತ್ತು ಉಪನ್ಯಾಸಗಳಲ್ಲಿ ಸ್ವಾಮಿ ಚಿನ್ಮಯಾನಂದರು ನೀಡುತ್ತಿದ್ದ ಆಳ, ಸ್ಪಷ್ಟತೆ, ನಿಖರತೆ, ಆಕರ್ಷಣೆ, ಹಾಸ್ಯ ಮನೋಭಾವ ಮತ್ತು ಅನುಭೂತಿಗಳು ಸರಿಸಾಟಿಯಿಲ್ಲದ್ದು. ತಮ್ಮ ಕೊನೆಯ ಉಸಿರಿರುವವರೆಗೂ ಬಿಡುವಿಲ್ಲದಂತೆ ಅದ್ವೈತ ವೇದಾಂತದ ಸೌಗಂಧವನ್ನು ತಾವು ಹೋದಲ್ಲೆಲ್ಲಾ ಪಸರಿಸಿದರು.

ತಿಳಿವಿನ ಚಿನ್ಮಯ ಮಿಷನ್: ನಲವತ್ತೆರಡು ವರ್ಷಗಳ ಕಾಲ ನಿರಂತರವಾದ ಸ್ವಾಮಿ ಚಿನ್ಮಯಾನಂದರ ಶ್ರಮದ ಫಲವಾಗಿ ಇಂದು ಚಿನ್ಮಯ ಮಿಷನ್ ಸಂಘಟನೆಯು ಮಹತ್ವದ ಸಂಘಟನೆಯಾಗಿ ಬೃಹತ್ತಾಗಿ ಬೆಳೆದು ನಿಂತಿದ್ದು ಆಧ್ಯಾತ್ಮಿಕ ಔನ್ನತ್ಯಗಳ ಜೊತೆ ಜೊತೆಗೆ ವಿದ್ಯಾಭ್ಯಾಸ, ಬಡತನ ನಿವಾರಣೆ, ವೈದ್ಯಕೀಯ ಮತ್ತು ನೂರಾರು ಸಮಾಜಸೇವಾ ಕಾರ್ಯಗಳಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಮುಂದೆ ಸಾಗಿದೆ. ಸ್ವಾಮಿ ಚಿನ್ಮಯಾನಂದರ ಬದುಕು ಸೀಮಾತೀತ ಶಕ್ತಿ, ಪ್ರೇಮ, ಸೇವೆ ಮತ್ತು ಆಧ್ಯಾತ್ಮ ಶಕ್ತಿಗಳ ಮಹಾ ಜ್ಞಾನ ಸಂಗಮವಾಗಿದೆ. ಅವರೊಂದು ಯುಗದ ಬೆಳಕು. ಜಗದ ಜ್ಞಾನದ ಹೊಳಪು. ವಿಶೇಷವಾಗಿ ಭವ್ಯ ಭಾರತದ ದಿವ್ಯಬೆಳಕವರು!

"ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ಏವಂ ಸತತ ಯುಕ್ತಾಯೇ ಭಕ್ತಾಸ್ತ್ವಾಮ್ ಪರ್ಯುಪಾಸತೇ....." ಈ ರೀತಿ ಭಗವದ್ಗೀತೆಯ ದಿವ್ಯ ಅನುಪಮ ಅಧ್ಯಾಯಗಳ ಶ್ಲೋಕಗಳ ಪಠಣವು ಜಗತ್ತಿನಾದ್ಯಂತ ಭಾರತೀಯರ ಮನೆ ಮನೆಗಳಲ್ಲಿ ಮುಂಜಾನೆಯಿಂದ ರಾತ್ರಿಯವರೆಗೆ ವಿವಿಧ ವೇಳೆಗಳಲ್ಲಿ ಅನುರಣಿಸುವುದೇ ಒಂದು ದಿವ್ಯಾನುಭೂತಿಯ ದಿವ್ಯಾನಂದ. ಇಂಥ ಆನಂದದ ಹಿಂದೆ ಸ್ವಾಮಿ ಚಿನ್ಮಯಾನಂದ ಸರಸ್ವತಿ ಅವರ ಗೀತಾ ಜ್ಞಾನ ಯಜ್ಞದ ಶ್ರಮದ ಫಲವಿದೆ.


ರಾಜ್ಯದಲ್ಲಿ ಎರಡನೇ ಹಂತದ ಲೋಕಸಭಾ ಚುನಾವಣೆಗೆ ಇಂದು ಬಹಿರಂಗ ಪ್ರಚಾರಕ್ಕೆ ತೆರೆ

● ಬಾಕಿ 14 ಕ್ಷೇತ್ರಗಳಲ್ಲಿ ಮಂಗಳವಾರ ಮತದಾನ ● ಮಾಜಿ ಸಿಎಂಗಳು ಸೇರಿದಂತೆ ಸಚಿವರ ಮಕ್ಕಳು ಕಣದಲ್ಲಿ

ಬೆಂಗಳೂರು, ಮೇ 4(ಕೆಎಂಶಿ)– ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ ಘಟಾನುಘಟಿಗಳು ಕಣದಲ್ಲಿರುವ ಉತ್ತರ ಕರ್ನಾಟಕ ಭಾಗದ 14 ಲೋಕಸಭಾ ಕ್ಷೇತ್ರಗಳ ಬಹಿರಂಗ ಪ್ರಚಾರಕ್ಕೆ ಭಾನುವಾರ ಸಂಜೆ ತೆರೆ ಬೀಳಲಿದೆ.


ದಾವಣಗೆರೆ, ಶಿವಮೊಗ್ಗ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ, ಚಿಕ್ಕೋಡಿ, ವಿಜಯಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಧಾರವಾಡ ಲೋಕಸಭಾ ಕ್ಷೇತ್ರಗಳಿಗೆ ಮೇ 7ರಂದು ಮತದಾನ ನಡೆಯಲಿದೆ. ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಕಳೆದ ಏ. 26ರಂದು ಮೊದಲ ಹಂತದಲ್ಲಿ ಮತದಾನ ನಡೆದಿದ್ದು, ಉತ್ತರ ಕರ್ನಾಟಕ ಭಾಗದ ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ಮತದಾನ ಜರುಗಲಿದೆ. ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಸಮಯ ಸಮೀಪಿಸುತ್ತಿದ್ದಂತೆ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಬಿರುಸಿನ ಪ್ರಚಾರ ನಡೆಸಿದ್ದಾರೆ.

ದಾವಣಗೆರೆ, ಶಿವಮೊಗ್ಗ ಹೊರತುಪಡಿಸಿ ಉಳಿದ 12 ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ



ನೇರ ಹಣಾಹಣಿ ಇದ್ದು, ಉಳಿದ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಬಂಡಾಯ ಎದ್ದಿರುವ ಅಭ್ಯರ್ಥಿಗಳು ಪ್ರಬಲ ಪೈಪೋಟಿ ಕೊಡುತ್ತಿದ್ದಾರೆ. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ (ಧಾರವಾಡ), ಭಗವಂತ ಖೂಬಾ (ಬೀದರ್) ಮರು ಆಯ್ಕೆ ಬಯಸಿ ಕಣದಲ್ಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ (ಬೆಳಗಾವಿ), ಬಸವರಾಜ ಬೊಮ್ಮಾಯಿ (ಹಾವೇರಿ), ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ್ (ದಾವಣಗೆರೆ), ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿಹೊಳಿ (ಚಿಕ್ಕೋಡಿ),



ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತ ಪಾಟೀಲ್ (ಬಾಗಲಕೋಟೆ), ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ (ಬೀದರ್), ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ (ಬೆಳಗಾವಿ) ಚುನಾವಣಾ ಕಣದಲ್ಲಿದ್ದಾರೆ.

ಅಲ್ಲದೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ (ಗುಲ್ಬರ್ಗ), ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ, ಇದೇ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಾಜಿ ಸಿಎಂ ಎಸ್.ಬಂಗಾರಪ್ಪ ಪುತ್ರಿ ಗೀತಾ ಶಿವರಾಜ್‌ಕುಮಾರ್. ಕಾಂಗ್ರೆಸ್ ಶಾಸಕ ತುಕಾರಾಂ (ಬಳ್ಳಾರಿ), ಇದೇ ಕ್ಷೇತ್ರದಲ್ಲಿ ಬಿಜೆಪಿಯಿಂದ ಮಾಜಿ ಡಿಸಿಎಂ ಬಿ.ಶ್ರೀರಾಮುಲು, ಮಾಜಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ (ಉತ್ತರ ಕನ್ನಡ) ಕಣದಲ್ಲಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಮೂರು ದಿನಗಳ ಕಾಲ ಚುನಾವಣಾ ಪ್ರಚಾರ ಕೈಗೊಂಡರೆ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ 2 ದಿನಗಳ ಕಾಲ ಬಹಿರಂಗ ಸಭೆ ಮತ್ತು ರೋಡ್ ಶೋಗಳನ್ನು ನಡೆಸಿದ್ದಾರೆ.

ಇವರ ಜೊತೆ ಮಾಜಿ ಸಿಎಂಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಎಚ್.ಡಿ.ಕುಮಾರಸ್ವಾಮಿ ಪ್ರಚಾರ ಕೈಗೊಂಡಿದ್ದರೆ, ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಎರಡು–ಮೂರು ಬಾರಿ ಬಿರುಸಿನ ಪ್ರಚಾರ ಕೈಗೊಂಡಿದ್ದರು. ಮೊದಲ ಹಂತದ ಚುನಾವಣೆ ಮುಗಿಯುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಅಭ್ಯರ್ಥಿಗಳನ್ನು ದೊಡ್ಡ ಪ್ರಮಾಣದಲ್ಲಿ ಗೆಲ್ಲಿಸಿಕೊಂಡು ತಮ್ಮ ಶಕ್ತಿ ಹೆಚ್ಚಿಸಿಕೊಳ್ಳಲು ಬಿಡುವಿಲ್ಲದಂತೆ ಈ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದ್ದಾರೆ. ಮೇ 7ರಂದು ನಡೆಯುವ ಮತದಾನಕ್ಕೆ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಚಾಮುಂಡೇಶ್ವರಿ ಕ್ಷೇತ್ರ, ಹುಣಸೂರು ನಗರ, ತಾಲೂಕಿನ ಹಲವು ಗ್ರಾಮಗಳು ಸೇರಿದಂತೆ ಮೈಸೂರು ನಗರಕ್ಕೆ ಕುಡಿಯುವ ನೀರು ಪೂರೈಕೆಯ ಮಹತ್ವದ

ಹಳೇ ಉಂಡುವಾಡಿ ಯೋಜನೆ 2025ರ ಜುಲೈಗೆ ಪೂರ್ಣ

- 2081ರ ಜನಸಂಖ್ಯೆ ಪ್ರಮಾಣ ಗಮನದಲ್ಲಿರಿಸಿ 123.7 ಎಕರೆ ಪ್ರದೇಶದಲ್ಲಿ ಯೋಜನೆ ಅನುಷ್ಠಾನ
- ಭೂ ಸ್ವಾಧೀನಕ್ಕೆ 100 ಕೋಟಿ, ಕಾಮಗಾರಿಗೆ 365 ಕೋಟಿ ಸೇರಿ ಒಟ್ಟು 465 ಕೋಟಿ ವೆಚ್ಚ
- 12 ಕಿಮೀ ವರೆಗೆ 66 ಕೆವಿ ಸಾಮರ್ಥ್ಯದ ಎಕ್ಸ್‌ಪ್ರೆಸ್ ಫೀಡರ್‌ಲೈನ್ ಅಳವಡಿಕೆ
- ಯೋಜನೆಯಿಂದ ಮೈಸೂರಿಗೆ ನಿತ್ಯ 150 ಎಂಎಲ್‌ಡಿ ನೀರು ಸರಬರಾಜು
- ಶಾಸಕ ಜಿ.ಟಿ.ದೇವೇಗೌಡರು, ಸಂಸದ ಪ್ರತಾಪ ಸಿಂಹ ಅವರ ಸತತ ಪ್ರಯತ್ನದ ಫಲ





● ಎಸ್.ಟಿ.ರವಿಕುಮಾರ್

ಮೈಸೂರು, ಮೇ 4– ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರ ಹಾಗೂ ಹುಣಸೂರು ನಗರ, ತಾಲೂಕಿನ ಹಲವು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಹಳೇ ಉಂಡುವಾಡಿ ಬೃಹತ್ ಯೋಜನೆಯ ಕಾಮಗಾರಿ 2025ರ ಜುಲೈನಲ್ಲಿ ಪೂರ್ಣಗೊಳ್ಳಲಿದೆ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು, ಸಂಸದ ಪ್ರತಾಪ ಸಿಂಹ ಅವರ ಸತತ ಪ್ರಯತ್ನ ಹಾಗೂ ದೂರ ದೃಷ್ಟಿಯಿಂದ ಬಹು ನಿರೀಕ್ಷಿತ ಹಳೇ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಎಸ್‌ಬಿ)ಯು ಅನುಷ್ಠಾನಗೊಳಿಸುತ್ತಿದೆ. ಮಂಡ್ಯ ಜಿಲ್ಲೆ, ಹಳೇ ಉಂಡುವಾಡಿ ಗ್ರಾಮದ ಬಳಿ ಕೆಆರ್‌ಎಸ್ ಹಿನ್ನೀರಿನಿಂದ ಬೃಹತ್ ನೀರು ಸರಬರಾಜು ಕಾರ್ಯಾಗಾರದ ಸಿವಿಲ್ ಕಾಮಗಾರಿ ನಡೆಯುತ್ತಿದ್ದು, ಅಲ್ಲಿಂದ ಮೈಸೂರು ನಗರದವರೆಗೆ 21.25 ಕಿಮೀ ಉದ್ದಕ್ಕೂ ನೀರಿನ ಕೊಳವೆ ಮಾರ್ಗ ಅಳವಡಿಸಿದ್ದು, ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು 12 ಕಿಮೀ ಉದ್ದ 66 ಕೆವಿ ಸಾಮರ್ಥ್ಯದ ಎಕ್ಸ್‌ಪ್ರೆಸ್ ಫೀಡರ್ ಲೈನ್ ಅಳವಡಿಸುವ ಕಾಮಗಾರಿ ಬಾಕಿ ಇದೆ.

ದೂರದೃಷ್ಟಿ: 2081ರವರೆಗೆ ಮೈಸೂರಿನ ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಮಳೆ ಇಲ್ಲದ, ಬರ ಪರಿಸ್ಥಿತಿಯಲ್ಲೂ ಕೆಆರ್‌ಎಸ್ ಜಲಾಶಯದಲ್ಲಿ ಲಭ್ಯವಿರುವ ನೀರನ್ನೇ ನಿತ್ಯ 150 ಎಂಎಲ್‌ಡಿ ಪೂರೈಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೊಳ್ಳಲಾಗಿದೆ.

123.7 ಎಕರೆ ಭೂಮಿ: ಈ ಯೋಜನೆಗಾಗಿ ಮಂಡ್ಯ ಜಿಲ್ಲೆಯ 55.06 ಎಕರೆ ಮತ್ತು ಮೈಸೂರು ಜಿಲ್ಲೆಯ 67.11 ಎಕರೆ ಸೇರಿ, ಒಟ್ಟು 123.7 ಎಕರೆ ಪ್ರದೇಶದಲ್ಲಿ ವಾಟರ್ ಪಂಪಿಂಗ್ ಸ್ಟೇಷನ್, ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್, ಜಾಕ್‌ವೆಲ್, ಪೈಪ್‌ಲೈನ್, ಎಕ್ಸ್‌ಪ್ರೆಸ್ ಫೀಡರ್ ಲೈನ್ ಅಳವಡಿಸಲು ಬಳಸಿಕೊಳ್ಳಲಾಗಿದೆ.

465 ಕೋಟಿ ರೂ ವೆಚ್ಚ: ಹಳೇ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆಗೆ ಒಟ್ಟು 465 ಕೋಟಿ ರೂ ಖರ್ಚು ಮಾಡುತ್ತಿದ್ದು, ಭೂಸ್ವಾಧೀನ ಪರಿಹಾರಕ್ಕಾಗಿ 100 ಕೋಟಿ ರೂ, ಸಿವಿಲ್ ಹಾಗೂ ಇತರ ಕಾಮಗಾರಿಗಳಿಗೆ 365 ಕೋಟಿ ರೂ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಪಾಲುದಾರಿಕೆ: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಯೋಜನೆ ಅನುಷ್ಠಾನ ಮಾಡುವ ನೋಡಲ್ ಸಂಸ್ಥೆಯಾಗಿದೆ. ಆದರೆ ಮೈಸೂರು ಮಹಾನಗರ ಪಾಲಿಕೆ, ಗ್ರಾಮೀಣ ನೀರು ಸರಬರಾಜು ವಿಭಾಗ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಾಗೂ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ಕೆಹೆಚ್‌ಬಿ)ಗಳು ಕಾಮಗಾರಿಯ ವೆಚ್ಚ ಭರಿಸುವ ಪಾಲುದಾರಿಕೆ ಸಂಸ್ಥೆಗಳಾಗಿವೆ.

ಯೋಜನೆಯ ಫಲಾನುಭವಿಗಳು: ಹಳೇ ಉಂಡುವಾಡಿ ಯೋಜನೆ ಪೂರ್ಣಗೊಂಡರೆ, ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಹುತೇಕ ವಸತಿ ಬಡಾವಣೆಗಳು, ಮುಡಾ ಸರಹದ್ದಿನ ಪ್ರದೇಶ, ಗ್ರಾಮೀಣ ಕುಡಿಯುವ ನೀರು ವಿಭಾಗಕ್ಕೆ ಬರುವ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹಲವು ಗ್ರಾಮಗಳು, ಹುಣಸೂರು ನಗರ, ತಾಲೂಕಿನ ಹಲವು ಗ್ರಾಮಗಳಲ್ಲಿ, ಕೆಹೆಚ್‌ಬಿಯಿಂದ ನಿರ್ಮಿಸಿರುವ ಬಡಾವಣೆಗಳಿಗೆ ನಿರಂತರ ಕುಡಿಯುವ ನೀರು ಸರಬರಾಜು ಮಾಡಬಹುದು.

2025ರ ಜುಲೈನಲ್ಲಿ ಯೋಜನೆ ಪೂರ್ಣ: 2021ರ ಮಾರ್ಚ್ ತಿಂಗಳು ಆರಂಭವಾದ ಈ ಮಹತ್ವದ ಯೋಜನೆಯನ್ನು 30 ತಿಂಗಳೊಳಗೆ ಪೂರೈಸಬೇಕೆಂದು ಕಾರ್ಯಾದೇಶದಲ್ಲಿ ಷರತ್ತು ವಿಧಿಸಲಾಗಿತ್ತಾದರೂ, ಕೆಲವೆಡೆ ಭೂಸ್ವಾಧೀನಕ್ಕೆ ರೈತರಿಂದ ಆಕ್ಷೇಪ ವ್ಯಕ್ತವಾಗಿ ಕೆಲವರು ನ್ಯಾಯಾಲಯದ ಮೊರೆಹೋಗಿದ್ದರಿಂದಾಗಿ ಕಾಮಗಾರಿ ವಿಳಂಬವಾದ ಕಾರಣ ಅವಧಿ ವಿಸ್ತರಣೆಯಾಗಿದ್ದು, ಅದರನ್ವಯ ಯೋಜನೆಯನ್ನು 2025ರ ಜುಲೈ ತಿಂಗಳಲ್ಲಿ ಪೂರ್ಣಗೊಳಿಸಲು ತ್ವರಿತಗತಿಯಲ್ಲಿ ಕೆಲಸ ಮಾಡಲಾಗುತ್ತಿದೆ.

ಎಲೆಕ್ಟ್ರಿಕ್ ಫೀಡರ್‌ಲೈನ್‌ಗೆ ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಅಂತ್ಯಗೊಂಡ ನಂತರ ಟೆಂಡರ್ ಪ್ರಕ್ರಿಯೆ ನಡೆಸಲು ಮಂಡಳಿ ತಯಾರಿ ಮಾಡಿಕೊಳ್ಳುತ್ತಿದೆ. ಉಳಿದಂತೆ ಸಿವಿಲ್, ಇತರ ಕಾಮಗಾರಿಯು ಶೇ.65ರಷ್ಟು ಪೂರ್ಣಗೊಂಡಿದೆ.

3.45 ಕಿಮೀ ಕಾಂಪೌಂಡ್: ಕೆ.ಆರ್.ಎಸ್ ಹಿನ್ನೀರಿನಿಂದ ನೀರೆತ್ತುವ ಹಳೇ ಉಂಡುವಾಡಿಯ ಕಾರ್ಯಾಗಾರದ ಸುತ್ತ 3.45 ಕಿಮೀ ಉದ್ದದ ಕಾಂಪೌಂಡ್ ಗೋಡೆ ನಿರ್ಮಿಸಬೇಕಾಗಿದೆ. ಆದರೆ ಪಂಪಿಂಗ್ ಸ್ಟೇಷನ್, ಪೈಪ್‌ಲೈನ್ ವಿದ್ಯುತ್ ಸಂಪರ್ಕ ಕಾಮಗಾರಿ ಮುಗಿಯುತ್ತಿದ್ದಂತೆಯೇ ನೀರು ಸರಬರಾಜು ಕಾರ್ಯ ಆರಂಭಿಸಲು ಮಂಡಳಿ ನಿರ್ಧರಿಸಿದೆ.

306 ಎಂಎಲ್‌ಡಿ ನೀರು: ಪ್ರಸ್ತುತ ಮೈಸೂರು ನಗರಕ್ಕೆ ವಿವಿಧ ಮೂಲಗಳಿಂದ 306 ಎಂಎಲ್‌ಡಿ ನೀರು ಸರಬರಾಜಾಗುತ್ತಿದೆ. ಬೆಳಗೊಳ 1,2,3ನೇ ಹಂತದಿಂದ 45 ಎಂಎಲ್‌ಡಿ, ಹೊಂಗಳ್ಳಿ 2ನೇ ಹಂತದಿಂದ 36 ಎಂಎಲ್‌ಡಿ, 3ನೇ ಹಂತದಿಂದ 65 ಎಂಎಲ್‌ಡಿ, ಮೇಳಾಪುರ ಬಳಿ ಕಾವೇರಿ ನದಿಯಿಂದ 100 ಎಂಎಲ್‌ಡಿ ಹಾಗೂ ಕಬಿನಿ ಯೋಜನೆಯಿಂದ 60 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ. ಅಮೃತ ಯೋಜನೆ ಜಾರಿಗೆ ಮುಂಚೆ ಈ ಎಲ್ಲಾ ಮೂಲಗಳಿಂದ ಮೈಸೂರು ನಗರಕ್ಕೆ ಕೇವಲ 255 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿತ್ತು.

150 ಎಂಎಲ್‌ಡಿ ಕೊರತೆ: ಮುಡಾದಿಂದ ಅಭಿವೃದ್ಧಿಗೊಂಡ ಬಡಾವಣೆಗಳಲ್ಲಿ 50,000, ಖಾಸಗಿ ಬಡಾವಣೆಗಳ 53,000 ನಿವೇಶನಗಳು ಸೇರಿ ಮೈಸೂರು ನಗರದಲ್ಲಿ 12,50,000 ಮತ್ತು ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ 4,50,000 ಜನಸಂಖ್ಯೆಗೆ ಅಗತ್ಯವಿರುವ ಪ್ರಮಾಣದಲ್ಲಿ ನೀರು ಪೂರೈಸಬೇಕಾಗಿದ್ದು, ಇನ್ನೂ 150 ಎಂಎಲ್‌ಡಿ ನೀರಿನ ಕೊರತೆಯನ್ನು ಹಳೇ ಉಂಡುವಾಡಿ ಯೋಜನೆಯಿಂದ ನೀಗಿಸಬಹುದಾಗಿದೆ.

2081ಕ್ಕೆ 1,310 ಎಂಎಲ್‌ಡಿ ಬೇಡಿಕೆ: ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದಲ್ಲಿ 2081ನೇ ಸಾಲಿಗೆ ಇಲ್ಲಿನ ಜನಸಂಖ್ಯೆ 43 ಲಕ್ಷಕ್ಕೇರುವ ಸಾಧ್ಯತೆ ಇದ್ದು, 1,310 ಎಂಎಲ್‌ಡಿ ನೀರಿನ ಅಗತ್ಯ ಬೀಳುತ್ತದೆ ಎಂಬುದನ್ನು ಅಂದಾಜಿಸಿ ಅದಕ್ಕನುಗುಣವಾಗಿ ಹೊಸ ಯೋಜನೆಯಲ್ಲಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.





ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಮೈಸೂರು ನಗರ, ಸುತ್ತ–ಮುತ್ತಲಿನ ಗ್ರಾಮ ಹಾಗೂ ಹುಣಸೂರು ನಗರ, ತಾಲೂಕಿನ ಹಲವು ಗ್ರಾಮಗಳಿಗೆ ನಿರಂತರ ಕುಡಿಯುವ ನೀರು ಸರಬರಾಜಿಗೆ ಹಳೆ ಉಂಡುವಾಡಿ ಬಳಿಯಿಂದ ನೀರು ತರಲು ನಾನು ಯೋಜನೆ ರೂಪಿಸಿದ್ದೆ. 2019ರಲ್ಲಿ ನಮ್ಮ ಸರ್ಕಾರವಿದ್ದಾಗ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕ್ಯಾಬಿನೆಟ್‌ನಲ್ಲಿ ಯೋಜನೆಗೆ ಅನುಮೋದನೆ ನೀಡಿ 350 ಕೋಟಿ ರೂ ಅನುದಾನ ಮಂಜೂರು ಮಾಡಿದ್ದರು. ಯೋಜನೆಗೆ ಭೂ ಸ್ವಾಧೀನ, ಸಿವಿಲ್ ಕಾಮಗಾರಿ ವೆಚ್ಚ ಜಾಸ್ತಿಯಾದ ಕಾರಣ, ಕೊರತೆಯಾಗಿದ್ದ ಹಣವನ್ನು ಬಿಜೆಪಿ ಸರ್ಕಾರದಿಂದ ಮಂಜೂರು ಮಾಡಿಸಿ ಕಾಮಗಾರಿ ಕೈಗೊಳ್ಳಲಾಗಿತ್ತು. ಮಂಡ್ಯ–ಮೈಸೂರು ಜಿಲ್ಲಾಡಳಿತ, ಜನಪ್ರತಿನಿಧಿಗಳು, ಮೈಸೂರು ಮಹಾನಗರ ಪಾಲಿಕೆ, ಮುಡಾ ಸಹಕಾರದಿಂದ ಹಳೇ ಉಂಡುವಾಡಿ ಯೋಜನೆ ಸಾಕಾರಗೊಳ್ಳುತ್ತಿದೆ. ಸಂಸದ ಪ್ರತಾಪ್ ಸಿಂಹ ಸಹ ಆಸಕ್ತಿ ತೋರಿ ಅನುದಾನ ತರುವಲ್ಲಿ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿ ಮೈಸೂರು ನಗರ, ಚಾಮುಂಡೇಶ್ವರಿ, ಹುಣಸೂರು ತಾಲೂಕಿನ ಹಲವು ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದಿಲ್ಲ. – **ಜಿ.ಟಿ.ದೇವೇಗೌಡರು, ಶಾಸಕರು**



ಎಂತಹ ಸಂದರ್ಭದಲ್ಲೂ ಮೈಸೂರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಾರದು ಕೆಆರ್‌ಎಸ್ ಜಲಾಶಯದಲ್ಲಿ ನೀರು ಕನಿಷ್ಠ ಮಟ್ಟಕ್ಕೆ ಕುಸಿದರೂ ನೀರು ಪೂರೈಸಬೇಕೆಂಬ ಶಾಸಕ ಜಿ.ಟಿ.ದೇವೇಗೌಡರ ಬಹು ನಿರೀಕ್ಷಿತ ಯೋಜನೆ ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆ. 2018ರಲ್ಲೇ ಡಿಪಿಆರ್ ಸಿದ್ಧವಾಯಿತು. ನಂತರ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಈ ಯೋಜನೆಗೆ 350 ಕೋಟಿ ರೂ. ಅನುದಾನ ನೀಡಿದರು. ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರದ 90 ಹಾಗೂ ಹುಣಸೂರು ತಾಲೂಕಿನ ವಿವಿಧ ಗ್ರಾಮಗಳಿಗೂ ಇಲ್ಲಿಂದಲೇ ನೀರು ಪೂರೈಸಲು ತೀರ್ಮಾನಿಸಿ, 545 ಕೋಟಿ ರೂ ಇದ್ದ ಯೋಜನಾ ವೆಚ್ಚವನ್ನು 593 ಕೋಟಿ ರೂ ಗಳಿಗೆ ಹೆಚ್ಚಳ ಮಾಡಲಾಗಿತ್ತು. ಬಿಜೆಪಿ ಸರ್ಕಾರದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ 250 ಕೋಟಿ ರೂ ಅನುದಾನ ನೀಡಿದ್ದರು. ಇದೀಗ ಜಾಕ್‌ವೆಲ್, ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್, ಚಾನೆಲ್ ಕಾಮಗಾರಿ ಮುಗಿದಿದ್ದು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWSSB) ಅಧ್ಯಕ್ಷರಾಗಿದ್ದ ರಾಜುಗೌಡ, ನಗರಾಭಿವೃದ್ಧಿ ಸಚಿವರಾಗಿದ್ದ ಬೈರತಿ ಬಸವರಾಜು ಅವರ ಸಹಕಾರದಿಂದ ಯೋಜನೆ ಅಂತಿಮ ಹಂತಕ್ಕೆ ತಲುಪಿದೆ. ಮುಂದೆ ಮೈಸೂರು ನಗರ, ಚಾಮುಂಡೇಶ್ವರಿ ಹಾಗೂ ಹುಣಸೂರು ತಾಲೂಕಿನ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಲಿದೆ. **–ಪ್ರತಾಪ್ ಸಿಂಹ, ಸಂಸದ**

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ

ಸಿದ್ದರಾಮಯ್ಯಗೆ ರಾಹುಲ್ ಗಾಂಧಿ ಪತ್ರ

ಆರೋಪಿಗಳಿಗೆ ಕಠಿಣ ಶಿಕ್ಷೆ; ಸಂತ್ರಸ್ತ ಮಹಿಳೆಯರಿಗೆ ಸೂಕ್ತ ರಕ್ಷಣೆ



ಬೆಂಗಳೂರು,ಮೇ4(ಕೆಎಂಶಿ)–ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಿ ಹಾಗೂ ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸುವಲ್ಲಿ ಕ್ರಮ ಕೈಗೊಳ್ಳಿ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವ ಅವರು, ಕಳೆದ ಡಿಸೆಂಬರ್ 2023ರಲ್ಲೇ ದೇವರಾಜೇಗೌಡ ಎಂಬುವವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಗಮನಕ್ಕೆ ಪ್ರಜ್ವಲ್ ರೇವಣ್ಣ ಕುರಿತ ಪ್ರಕರಣವನ್ನು ತಂದಿದ್ದರೂ, ಕೇಂದ್ರದ ಉನ್ನತ ನಾಯಕರು ಆರೋಪಿ ಪರ ಚುನಾವಣಾ ಪ್ರಚಾರ ಕೈಗೊಂಡಿರುವುದು ಸೋಜಿಗದ ಸಂಗತಿಯಾಗಿದೆ ಎಂದಿದ್ದಾರೆ. ಪ್ರಕರಣದ ತನಿಖೆಯ ದಿಕ್ಕು ತಪ್ಪಿಸಲು ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿ ಆರೋಪಿ ದೇಶ ಬಿಟ್ಟು ಓಡಿ ಹೋಗಲು ಅವಕಾಶ ಮಾಡಿಕೊಟ್ಟಿದೆ. ಮಹಿಳೆಯರ ಮೇಲಿನ ತೀವ್ರ ತೆರನಾದ ದೌರ್ಜನ್ಯ ಪ್ರಕರಣದ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ತೋರಿದ್ದನ್ನು ತಮ್ಮ ಎರಡು ದಶಕಗಳ ರಾಜಕೀಯ ಜೀವನದಲ್ಲಿ ಕಂಡಿಲ್ಲ.

ಇಂತಹ ಸನ್ನಿವೇಶದಲ್ಲಿ ಶೋಷಣೆಗೆ ಒಳಗಾದ ನಮ್ಮ ತಾಯಂದಿರು ಮತ್ತು ಸಹೋದರಿಯರ ಪರ ನ್ಯಾಯಕ್ಕಾಗಿ ಹೋರಾಟ ಮಾಡುವುದು ಕಾಂಗ್ರೆಸ್ ಪಕ್ಷದ ನೈತಿಕ ಹೊಣೆಗಾರಿಕೆಯಾಗಿದೆ. ಘಟನೆ ಸಂಬಂಧ ಸೂಕ್ತ ಕ್ರಮಗಳನ್ನು ಕೈಗೊಳ್ಳಿ ಎಂದು ರಾಹುಲ್ ಗಾಂಧಿ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಬಂಧನಕ್ಕೆ ಬ್ಲೂ ಕಾರ್ನರ್ ನೋಟಿಸ್ ಜಾರಿಗೊಳಿಸಲು

ಎಸ್‌ಐಟಿಗೆ ಸಿಎಂ ಆದೇಶ



ಬೆಂಗಳೂರು,ಮೇ4(ಕೆಎಂಶಿ)– ಸಂಸದ ಪ್ರಜ್ವಲ್ ರೇವಣ್ಣ ಬಂಧನಕ್ಕೆ ಬ್ಲೂ ಕಾರ್ನರ್ ನೋಟಿಸ್ ಹೊರಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್‌ಐಟಿ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ಹಾಸನ ಸಂಸದರ ಪ್ರಕರಣಕ್ಕೆ ಸಂಬಂಧಿಸಿದಂತೆ ಎಐಸಿಸಿ ಹಿರಿಯ ನಾಯಕ ರಾಹುಲ್ ಗಾಂಧಿ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ಇಂದು ಎಸ್‌ಐಟಿ ಅಧಿಕಾರಿಗಳ ಜೊತೆ ಮಹತ್ವದ ಸಭೆ ನಡೆಸಿ ಈ ಆದೇಶ ಹೊರಡಿಸಿದರು.

ಬ್ಲೂ ಕಾರ್ನರ್ ನೋಟಿಸ್ ಹೊರಡಿಸುವುದರಿಂದ ವಿಶ್ವದ ಯಾವುದೇ ವಿಮಾನ ನಿಲ್ದಾಣಗಳಿಂದ ಮಾಹಿತಿ ಸಿಕ್ಕ ಕೂಡಲೇ ಬಂಧಿಸಿ ಕರೆತರಬಹುದಾಗಿದೆ. ಸಭೆಯಲ್ಲಿ ಮುಖ್ಯಮಂತ್ರಿ ಅವರು, ಪ್ರಕರಣದ ಸಂಬಂಧ ಇದುವರೆಗಿನ ಬೆಳವಣಿಗೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.



ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ನಾಪತ್ತೆಯಾಗಿದ್ದು ಲುಕ್‌ಔಟ್ ನೋಟಿಸ್ ಜೊತೆಗೆ ತೀವ್ರ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ವಿವರಿಸಿದರು. ಪ್ರಜ್ವಲ್ ರೇವಣ್ಣ ಬಂಧನಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು, ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ನಿರ್ದಾಕ್ಷಿಣ್ಯ ಹಾಗೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು, ಈ ವಿಚಾರದಲ್ಲಿ ನಿರ್ಲಕ್ಷ್ಯ ಹಾಗೂ ವಿಳಂಬಧೋರಣೆ ಸಹಿಸಲಾಗದು ಎಂದು ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮೈಸೂರಿನಲ್ಲಿ ಸುಗಮ ಸಂಗೀತ ಕಾರ್ಯಾಗಾರ



ಮೈಸೂರು,ಮೇ4–ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಜಿಲ್ಲಾ ಘಟಕದ ವತಿಯಿಂದ ಹೂಟಗಳ್ಳಿಯಲ್ಲಿರುವ ಶ್ರೀ ಅನಂತೇಶ್ವರ ಭವನದಲ್ಲಿ ಎರಡು ದಿನಗಳ ಸುಗಮ ಸಂಗೀತ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಮೈಸೂರಿನಲ್ಲಿ ಇದೇ ಪ್ರಥಮ ಬಾರಿಗೆ ಸುಗಮ ಸಂಗೀತ ಪರಿಷತ್ ವತಿಯಿಂದ 2 ದಿನಗಳ ತರಬೇತಿ ಶಿಬಿರ ನಡೆಯುತ್ತಿರುವುದು ಸಂತಸದ ಸಂಗತಿ. ಶಿಬಿರಾರ್ಥಿಗಳು ಸುಗಮ ಸಂಗೀತ ಪ್ರಕಾರದ ಕಾರ್ಯವನ್ನು ಕವಿಗಳ ಕಾವ್ಯದ ಗೀತೆಗಳನ್ನು ಕಲಿಯುವುದರ ಮೂಲಕ ಸಂಗೀತಕ್ಕೆ ಎಷ್ಟು ದೊಡ್ಡ ಶಕ್ತಿ ಇದೆ ಎಂಬುದನ್ನು ತಿಳಿಸಬೇಕಾಗಿದೆ ಎಂದರು.

ಸುಗಮ ಸಂಗೀತವು ಈ ಮಟ್ಟಕ್ಕೆ ಬರಲು ಕಾರಣ ಮೈಸೂರಿನ ಅನಂತ ಸ್ವಾಮಿ, ಸಿ.ಅಶ್ವತ್ ಮಹಾನ್ ವ್ಯಕ್ತಿಗಳು ಕಾರಣ ಎಂದು ಅಭಿಪ್ರಾಯಪಟ್ಟರು.

ಮೈಸೂರು ಘಟಕದ ಜಿಲ್ಲಾಧ್ಯಕ್ಷ ಡಾ. ನಾಗರಾಜ್ ವಿ.ಭೈರಿ ಮಾತನಾಡಿ, ಮೈಸೂರಿನಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪ್ರತಿವರ್ಷ ಸಂಗೀತ ಶಿಬಿರವನ್ನು ಏರ್ಪಡಿಸುವುದಾಗಿ ಪ್ರಕಟಿಸಿದರು. ಸುಗಮ ಸಂಗೀತ ಪರಿಷತ್ ಮೂಲಕ ಹೊಸ ಹೊಸ ಗಾಯಕರು ಹಾಗೂ ಸಂಗೀತಗಾರರನ್ನು ಪರಿಚಯಿಸುವುದಕ್ಕೆ ಒಂದು ಸೂಕ್ತ ವೇದಿಕೆಯಾಗಲಿದೆ ಎಂದರು.

ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಮಾತನಾಡಿ, ನಮ್ಮ ಇಲಾಖೆಯಿಂದ ಸುಗಮ ಸಂಗೀತ ಪರಿಷತ್ತಿಗೆ ಎಲ್ಲಾ ರೀತಿಯ ಸಹಾಯ ಮಾಡಲು ಸಿದ್ಧ ಎಂದು ಹೇಳಿದರು.

ಮಂಡ್ಯ ಸುಗಮ ಸಂಗೀತ ಪರಿಚಿತ ಅಧ್ಯಕ್ಷ ಡೇವಿಡ್ ಮಾತನಾಡಿ, ಮೈಸೂರಿನಲ್ಲಿ ಮುಂದಿನ ದಿನಗಳಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ವತಿಯಿಂದ ಸಂಗೀತ ಸಮ್ಮೇಳವನ್ನು ಏರ್ಪಡಿಸಿ ಮೈಸೂರಿನ ಗಾಯನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಹಿರಿಯ ಗಾಯಕರಿಗೆ ಸನ್ಮಾನವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪರಿಷತ್ತಿನ ರಾಜ್ಯ ಕಾರ್ಯದರ್ಶಿ ಬಿ.ವಿ.ಪ್ರವೀಣ್ ಖಜಾಂಚಿ ಪ್ರಶಾಂತ್ ಉಡುಪ, ಗಾಯಕಿಯರಾದ ಇಂದ್ರಾಣಿ ಅನಂತರ ಮತ್ತು ರಶ್ಮಿ ಚಿಕ್ಕಮಗಳೂರು, ಹಿರಿಯ ಸಾಹಿತಿ ಜಯಪ ಹೊನ್ನಾಳಿ, ಪರಿಷತ್ತಿನ ಮೈಸೂರು ಜಿಲ್ಲಾ ಉಪಾಧ್ಯಕ್ಷ ನಾ.ಗಂಗಾಧರಪ್ಪ, ಕಾರ್ಯದರ್ಶಿ ಸಿರಿಬಾಲು, ಮಾಧ್ಯಮ ಸಲಹೆಗಾರ ಬೆಟ್ಟೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಮೇ 4(ಎಂಕೆ)– ಲೈಂಗಿಕ ದೌರ್ಜನ್ಯ ಪ್ರಕರಣ ಆರೋಪಿಯಾದ ಹಾಸನ ಸಂಸದ ಪ್ರಜ್ವಲ್ ರೇವಣ್ಣನನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಮೈಸೂರು ನಗರ ಹಾಗೂ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ನಗರದ ಗಾಂಧಿವೃತ್ತದಲ್ಲಿ ಶನಿವಾರ ಸಂಜೆ ಜಮಾಯಿಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು, ಸಂಸದ ಪ್ರಜ್ವಲ್ ರೇವಣ್ಣ, ಜೆಡಿಎಸ್–ಬಿಜೆಪಿ ಮೈತ್ರಿ ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಬಿಜೆಪಿ ಸರ್ಕಾರವೇ ಪ್ರಜ್ವಲ್ ರೇವಣ್ಣ ಕಾಣೆಯಾಗಲು ಕಾರಣ ಎಂದು ದೂರಿದರಲ್ಲದೆ ಕೂಡಲೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಮಾತನಾಡಿ, ಉತ್ತಮ ಕುಟುಂಬವೆಂದು ಹೇಳಲಾಗುತ್ತಿದ್ದ, ಮಾಜಿ ಪ್ರಧಾನಿ ಹಾಗೂ ಮಾಜಿ ಸಚಿವರ ಮಗನಾಗಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿರುವ ಪ್ರಜ್ವಲ್ ರೇವಣ್ಣ ಸಂಸದ ಸ್ಥಾನಕ್ಕೆ ಅನರ್ಹ. ಯಾವ ಸಂಸ್ಕಾರವಿರುವ ವ್ಯಕ್ತಿ ಮಾಡದ ಕೃತ್ಯವನ್ನು ಎಸಗಿರುವ ಪ್ರಜ್ವಲ್ ರೇವಣ್ಣನನ್ನು ಕೂಡಲೇ ಬಂಧಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸಂತ್ರಸ್ತ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಬೇಕು ಒತ್ತಾಯಿಸಿದರು.



ಚಂದನ್‌ಗೆ ಪಿಹೆಚ್.ಡಿ

ಮೈಸೂರು: ಡಾ.ಎಸ್.ಚಂದನ್ ಅವರ ಮಾರ್ಗದರ್ಶನದಲ್ಲಿ ಚಂದನ್ ಡಿ. ಅವರು ಸಂಶೋಧನೆ ನಡೆಸಿ ಸಾದರಪಡಿಸಿ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ –ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚಾಮುಂಡಿಬೆಟ್ಟ ಪಾದದಲ್ಲಿ ಪ್ರಾಣಿ–ಪಕ್ಷಿಗಳಿಗೆ ಸ್ಪಂದನೆ

ಪ್ರಾಣಿ-ಪಕ್ಷಿಗಳಿಗೆ ನೀರಿನ ತೊಟ್ಟಿ ಅಳವಡಿಸುತ್ತಿರುವುದು ಅತ್ಯಂತ ಶ್ಲಾಘನೀಯ: ಸಿ. ನಾರಾಯಣಗೌಡ



ಮೈಸೂರು,ಮೇ4–ಚಾಮುಂಡಿಬೆಟ್ಟದ ಪಾದದಲ್ಲಿ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಹಾಗೂ ಸೈನಿಕ ಅಕಾಡೆಮಿ ವತಿಯಿಂದ ಶನಿವಾರ ದನ, ಕರುಗಳು, ಇನ್ನಿತರೆ ಪ್ರಾಣಿ–ಪಕ್ಷಿಗಳಿಗೆ ನೀರು ಕುಡಿಯಲು ಅನುಕೂಲವಾಗುವ ದೃಷ್ಟಿಯಿಂದ ತೊಟ್ಟಿಗಳನ್ನು ಅಳವಡಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲಿನಿಂದ ಜನರೇ ನರಕಯಾತನೆ ಅನುಭವಿಸುತ್ತಿರುವಾಗ ಮೂಕ ಪ್ರಾಣಿಗಳ ಗತಿಯೇನು? ಇದನ್ನು ಅರಿತು ಕುಡಿಯುವ ನೀರಿನ ತೊಟ್ಟಿಗಳನ್ನು ಅಳವಡಿಸುತ್ತಿರುವುದು ಶ್ಲಾಘನೀಯ ಎಂದರು.

ಸೈನಿಕ ಅಕಾಡೆಮಿ ಮೈಸೂರಿನ ಸಂಸ್ಥಾಪಕರು ಹಾಗೂ ಮಾಜಿ ಕಮಾಂಡೋ ಸಿ.ಎಂ.ಶ್ರೀಧರ್ ಮಾತನಾಡಿ, ವನ್ಯಜೀವಿಗಳಿಗೂ ಬದುಕುವ ಹಕ್ಕಿದೆ. ಅವುಗಳು ಆಹಾರಕ್ಕಾಗಿ ನಾಡಿಗೆ ಬರುವ ಸ್ಥಿತಿ ನಿರ್ಮಾಣವಾಗಿದೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಅಭಿವೃದ್ಧಿಯ ನೆಪದಲ್ಲಿ ಪರಿಸರ ಸಂರಕ್ಷಣೆ ಕಡಿಮೆಯಾಗುತ್ತಿದೆ. ಹವಾಮಾನ ವೈಪರೀತ್ಯಕ್ಕೂ ಪರಿಸರ ಸಂರಕ್ಷಣೆಯ ವೈಫಲ್ಯವೂ ಕಾರಣವಾಗಿದೆ.

ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ನಗರ ಉಪಾಧ್ಯಕ್ಷ ಯದುನಂದನ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಭೈರತಿ ಲಿಂಗರಾಜು, ಸಮಾಜ ಸೇವಕರಾದ ಸವಿತಾ ಘಾಟ್ಕೆ, ನಾಗಶ್ರೀ ಸುಚೆಂದ್ರ, ಸೈನಿಕರು ಹಾಗೂ ಸೈನಿಕ ಅಕಾಡೆಮಿಯ ತರಬೇತಿ ಪಡೆಯುತ್ತಿರುವ ಮಕ್ಕಳು ಹಾಜರಿದ್ದರು.

ಬಿರುಗಾಳಿ ಮಳೆ: ಬೈಕ್ ಮೇಲೆ ಬಿದ್ದ ಮರ

ಪತಿ ಸಾವು, ಪತ್ನಿಗೆ ತೀವ್ರ ಗಾಯ



ಭಾರತೀನಗರ, ಮೇ 4– ಶುಕ್ರವಾರ ಸುರಿದ ಬಿರುಗಾಳಿ ಮಳೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಮರಬಿದ್ದು ಪತಿ ಸಾವನ್ನಪ್ಪಿದ್ದು, ಪತ್ನಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಕೆ.ಶೆಟ್ಟಹಳ್ಳಿ ಗ್ರಾಮದ ಎಬ್ರಿಡ್ಜ್ ಬಳಿ ಜರುಗಿತು.

ಶೆಟ್ಟಹಳ್ಳಿ ಗ್ರಾಮದ ಎಸ್.ಬಿ.ಪುಟ್ಟಸ್ವಾಮೀಗೌಡ (50) ಮೃತಪಟ್ಟ ದುರ್ದೈವಿ, ಪತ್ನಿ ಬಿ.ಸಿ.ಚಂದ್ರಕಲಾ (40) ಅವರಿಗೆ ಕೈ ಮತ್ತು ಕಣ್ಣಿಗೆ ಪೆಟ್ಟುಬಿದ್ದು ಗಾಯಗೊಂಡಿದ್ದಾರೆ.

ಶುಕ್ರವಾರ ರಾತ್ರಿ ಕೆ.ಎಂ.ದೊಡ್ಡಿಯಿಂದ ತಮ್ಮ ಗ್ರಾಮಕ್ಕೆ ತೆರಳುತ್ತಿದ್ದಾಗ ಶೆಟ್ಟಹಳ್ಳಿ–ಎಬ್ರಿಡ್ಜ್ ಬಳಿ ದಂಪತಿ ಮೇಲೆ ಮರ ಬಿದ್ದಿದೆ. ಪುಟ್ಟಸ್ವಾಮಿ ಗಂಭೀರವಾಗಿ ಗಾಯಗೊಂಡರೆ ಪತ್ನಿ ಚಂದ್ರಕಲಾ ಅವರಿಗೆ ಮುಖಕ್ಕೆ ಪೆಟ್ಟು ಬಿದ್ದು ಬಲಗೈ ಮುರಿದಿದೆ. ತಕ್ಷಣ ಇವರನ್ನು ಸ್ಥಳೀಯ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಪಡಿಸಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಪತಿ ಪುಟ್ಟಸ್ವಾಮಿ ಮೃತಪಟ್ಟಿದ್ದಾರೆ. ಪತ್ನಿ ಚಂದ್ರಕಲಾ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಹಶೀಲ್ದಾರ್ ಸೋಮಶೇಖರ್ ಮತ್ತು ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮೃತರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಕೆ.ಶೆಟ್ಟಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಜರುಗಿತು.

ಮಂಡ್ಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚಳ

ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಡಿಸಿ ಕರೆ

ಮಂಡ್ಯ, ಮೇ 4– ಜಿಲ್ಲೆಯಲ್ಲಿ ಬಿಸಿಲಿನ ತೀವ್ರತೆ ಹೆಚ್ಚಿದ್ದು, ತಾಪಮಾನದಲ್ಲಿ ಏರಿಕೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ವಹಿಸಬೇಕಿರುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾ ವಿಪತ್ತು ಪ್ರಾಧಿಕಾರ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ತೀವ್ರ ಶಾಖದ ಅಲೆ /ಅತಿಯಾದ ಉಷ್ಣಾಂಶದಿಂದಾಗಿ ನಾನಾ ರೀತಿಯ ಅನಾರೋಗ್ಯ ಪರಿಸ್ಥಿತಿಗಳು ಸಂಭವಿಸುವ ಸಾಧ್ಯತೆ ಇದ್ದು, ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಅತಿಯಾದ ಉಷ್ಣಾಂಶದಿಂದ ಸಂಭವಿಸಬಹುದಾದ ಅನಾರೋಗ್ಯ ಪರಿಸ್ಥಿತಿಗಳನ್ನು ತಡೆಗಟ್ಟುವಿಕೆಯ ನಿಟ್ಟಿನಲ್ಲಿ ಸಾರ್ವಜನಿಕರು ಆರೋಗ್ಯ ಸಂರಕ್ಷಣಾ ಸಲಹೆಗಳನ್ನು ಪಾಲಿಸಬೇಕು ಎಂದರು.



ಅಧಿಕಾರಿಗಳ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ

ಹೆಚ್ಚು ನೀರು ಕುಡಿಯುವುದು: ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ಪ್ರಮಾಣದಲ್ಲಿ ಆಗಾಗ್ಗೆ ನೀರನ್ನು ಕುಡಿಯಬೇಕು. ಬಾಯಾರಿಕೆಯು ನಿರ್ಜಲೀಕರಣದ ಪ್ರಮುಖ ಲಕ್ಷಣವಾಗಿದೆ ಪ್ರಯಾಣ ಮಾಡುವ ಸಂದರ್ಭದಲ್ಲೂ ಕುಡಿಯಲು ನೀರನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು. ಪುನರ್ಜಲೀಕರಣ ದ್ರಾವಣ ಹಾಗೂ ಮನೆಯಲ್ಲಿಯೇ ಸಿದ್ಧಪಡಿಸಿದ ಲಿಂಬು ಶರಬತ್ತು, ಮಜ್ಜಿಗೆ, ಲಸ್ಸಿ, ಹಣ್ಣಿನ ಜ್ಯೂಸ್‌ಗಳನ್ನು ಸೇವಿಸಬೇಕು. ಈ ಋತುವಿನಲ್ಲಿ ಸಿಗುವ ಹೆಚ್ಚಿನ ನೀರಿನ ಅಂಶವನ್ನು ಹೊಂದಿರುವ ಹಣ್ಣು ತರಕಾರಿಗಳಾದ ಕಲ್ಲಂಗಡಿ, ಕರಬೂಜ, ಮೂಸಂಬಿ, ದ್ರಾಕ್ಷಿ, ಅನಾನಸ್, ಸೌತೆಕಾಯಿ ಹಾಗೂ ಸ್ಥಳೀಯವಾಗಿ ಸಿಗುವ ಹಣ್ಣು ತರಕಾರಿಗಳನ್ನು ಸೇವಿಸಬೇಕು. ಎಳನೀರನ್ನು ಸೇವಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಲ್ಲಿ ಸಾರ್ವಜನಿಕವಾಗಿ ಕಲ್ಪಿಸಿರುವ ನೀರಿನ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬಿಸಿಲಿನ ಶಾಖದಿಂದ ಮಕ್ಕಳಲ್ಲೂ ಸಾಕಷ್ಟು ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿದ್ದು, ಮೂರ್ಛೆ ಹೋಗುವುದು, ಸ್ನಾಯು ಸೆಳೆತ, ರೋಗಗ್ರಸ್ತವಾಗುವಿಕೆ, ಸಿಡುಕುತನ, ತಲೆನೋವು, ಹೆಚ್ಚಾಗಿ ಬೆವರುವುದು, ಬಲಹೀನತೆ, ತಲೆ ತಿರುಗುವಿಕೆ, ಗೊಂದಲಮಯ ರೀತಿಯಲ್ಲಿ ವರ್ತಿಸುವುದು, ಇನ್ನಿತರ ಲಕ್ಷಣಗಳು ಕಂಡುಬರುವ ಸಾಧ್ಯತೆ ಇರುತ್ತದೆ. ಇಂತಹ ಲಕ್ಷಣಗಳು ಕಂಡು ಬಂದಲ್ಲಿ ವೈದ್ಯರ ಸಲಹೆ ಪಡೆದು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಎಂದರು.

ಅತೀ ಹೆಚ್ಚು ತಾಪಮಾನಕ್ಕೆ ತುತ್ತಾಗುವಂತಹ ಹಳ್ಳಿಗಳನ್ನು ಗುರುತಿಸಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ಲಭ್ಯತೆಯನ್ನು ಖಚಿತ ಪಡಿಸಿಕೊಳ್ಳಬೇಕು. ಅತೀ ಹೆಚ್ಚು ತಾಪಮಾನದ ಪ್ರತಿಕೂಲ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಮತ್ತು ಅತೀ ಹೆಚ್ಚು ತಾಪಮಾನದ ಸಮಯದಲ್ಲಿ ಮಾಡಬೇಕಾದ ಮತ್ತು ಮಾಡಬಾರದ ವಿಷಯಗಳ ಬಗ್ಗೆ ಅರಿವು ಮೂಡಿಸಲು ಆರೋಗ್ಯ ಇಲಾಖೆ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಿ ಎಂದು ತಿಳಿಸಿದರು.

ಕೆ.ಆರ್.ಪೇಟೆ ತಾಲೂಕಿನಲ್ಲಿ ನೀರಿಗೆ ಹಾಹಾಕಾರ



ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಲ್ಲದಹಳ್ಳಿಯಲ್ಲಿ ಟ್ಯಾಂಕರ್ ನೀರಿಗೆ ಗ್ರಾಮಸ್ಥರು ಮುಗಿಬಿದ್ದಿರುವುದು.

ಕೆ.ಆರ್.ಪೇಟೆ, ಮೇ 4– ತೀವ್ರ ಬರಗಾಲದಿಂದ ತತ್ತರಿಸಿರುವ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ಮಳೆಯಿಲ್ಲದೆ ತಾಲೂಕಿನ ಕೆರೆ–ಕಟ್ಟೆಗಳು ಬರಿದಾದ ಪರಿಣಾಮ ಅಂತರ್ಜಲ ಮಟ್ಟ ಕುಸಿದಿದ್ದು ಗ್ರಾಮೀಣ ಕುಡಿಯುವ ನೀರು ಪೂರೈಕೆ ಗ್ರಾಮ ಪಂಚಾಯತಿಗಳಿಗೆ ಬಹುದೊಡ್ಡ ಸವಾಲಾಗಿದೆ.

ತಾಲೂಕಿನ ಹೇಮಾವತಿ ನದಿ ಅಂಚಿನ ಅಕ್ಕಿಹೆಬ್ಬಾಳು, ಕಸಬಾ ಮತ್ತು ಕಿಕ್ಕೇರಿ ಹೋಬಳಿಯ ಕೆಲವು ಭಾಗಗಳು ಹೇಮಾವತಿ ನದಿಯ ನೀರನ್ನು ಅವಲಂಬಿಸಿದ್ದರೆ ಉಳಿದಂತೆ ಕೆಲವು ಪ್ರದೇಶಗಳು ಹೇಮಾವತಿ ಜಲಾಶಯದ ಎಡದಂಡೆ ನಾಲೆಯಿಂದಾಗಿ ಅರೆ ನೀರಾವರಿಗೆ ಒಳಪಟ್ಟಿವೆ. ಸಂತೇಬಾಚಹಳ್ಳಿ, ಶೀಳನೆರೆ ಹಾಗೂ ಬೂಕನಕೆರೆ ಹೋಬಳಿಗಳು ಸಂಪೂರ್ಣ ಮಳೆಯಾಶ್ರಿತವಾಗಿವೆ. ಹೇಮೆಯ ನೀರಿನಿಂದ ತಾಲೂಕಿನ ಕೆರೆಕಟ್ಟೆಗಳನ್ನು ತುಂಬಿಸುತ್ತಿದ್ದ ಪರಿಣಾಮ ಅಂತರ್ಜಲ ಮಟ್ಟ ಕುಸಿಯುತ್ತಿರಲಿಲ್ಲ. ಆದರೆ ಪ್ರಸಕ್ತ ಸಾಲಿನಲ್ಲಿ ಹೇಮೆಯ ನೀರು ತಾಲೂಕಿನ ಕೆರೆ–ಕಟ್ಟೆಗಳಿಗೆ ಹರಿಯಲಿಲ್ಲ. ಪರಿಣಾಮ ಅಂತರ್ಜಲ ಮಟ್ಟ ಕುಸಿದು ಗ್ರಾಮೀಣ ಪ್ರದೇಶದಲ್ಲಿ ಮನೆ ಮನೆಗೆ ಕುಡಿಯುವ ನೀರು ಪೂರೈಕೆ ಮಾಡುತ್ತಿದ್ದ ಗ್ರಾಮೀಣ ಕುಡಿಯುವ ನೀರು ಪೂರೈಕೆ ಜಾಲ ಸಂಕಷ್ಟಕ್ಕೆ ಸಿಲುಕಿದೆ.

ರಾಜ್ಯ ಸರ್ಕಾರ ಒಂದು ಟ್ಯಾಂಕರ್ ನೀರು ಪೂರೈಕೆಗೆ 800 ರಿಂದ 850 ರೂ ನಿಗದಿ ಪಡಿಸಿದೆ. ಗ್ರಾಮೀಣ ಪ್ರದೇಶದ ರೈತಾಪಿ ಸಮುದಾಯ ಜನ–ಜಾನುವಾರುಗಳೊಂದಿಗೆ ಬದುಕು ಸಾಗಿಸುತ್ತದೆ. ಗ್ರಾಮ ಪಂಚಾಯತಿ ಪೂರೈಕೆ ಮಾಡುತ್ತಿರುವ ನೀರು ಜನರಿಗೇ ಸಾಕಾಗುತ್ತಿಲ್ಲ. ಜೊತೆಗೆ ಟ್ಯಾಂಕರ್ ನೀರಿನ ಶುದ್ಧತೆಯನ್ನು ಪರಿಸೀಲಿಸುತ್ತಿಲ್ಲ. ರೈತರ ಜಾನುವಾರುಗಳು ಕುಡಿಯುವ ನೀರಿಲ್ಲದೆ ಪರಿತಪಿಸುತ್ತಿವೆ. ಜನರ ಜೊತೆಗೆ ಜಾನುವಾರುಗಳ ಕುಡಿಯುವ ನೀರಿಗೂ ರಾಜ್ಯ ಸರ್ಕಾರ ಕ್ರಮವಹಿಸಬೇಕು. ಗ್ರಾಮಗಳಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸಿ ಟ್ಯಾಂಕರ್ ಮೂಲಕ ನೀರು ತುಂಬಿಸಿ ಎಮ್ಮೆ ದನಗಳ ನೀರಿನ ದಾಹವನ್ನು ತಣಿಸುವಂತೆ ತಾಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ಆಗ್ರಹಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ ಮೇ 4– ಬಸರಾಳು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 6ರಂದು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ಬಸರಾಳು, ಶಿವಪುರ, ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬ್ಯಾಡರಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಅನುಕುಪ್ಪೆ, ಮನುಗನಹಳ್ಳಿ, ಎಂ ಹಟ್ನ, ಗಣಿಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್‌ನಲ್ಲಿ ವ್ಯತ್ಯಯ ಉಂಟಾಗಲಿದೆ.

ಬಡಗೂಡಮ್ಮ ದೇವಿಯ ಅದ್ದೂರಿ ಜಾತ್ರಾ ಮಹೋತ್ಸವಕ್ಕೆ ತೆರೆ.



ನಾಗಮಂಗಲ, ಮೇ 4– ತಾಲೂಕಿನ ಗ್ರಾಮ ದೇವತೆ ಬಡಗೂಡಮ್ಮ ದೇವಿಯ ಜಾತ್ರಾ ಮಹೋತ್ಸವ ರಾಜ್ಯದ ವಿವಿಧ ಭಾಗಗಳಿಂದ ಬಂದಂತಹ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ವರ್ಷಂ ಪ್ರತಿ ನಡೆಯುವ ಬಡಗೂಡಮ್ಮ ಜಾತ್ರೆ ಹಾಗೂ ಕೊಂಡೋತ್ಸವ ಅಂಗವಾಗಿ ಒಂದು ವಾರ ನಡೆಯುವ ವಿವಿಧ ಪೂಜಾ ಕೈಂಕರ್ಯಗಳು ಪೂರ್ಣಗೊಂಡಿದ್ದು, ಶನಿವಾರ ಮುಂಜಾನೆ ಸೂರ್ಯೋದಯ ಶುಭ ಬ್ರಾಹ್ಮಿ ಮಹೋತ್ಸವದಲ್ಲಿ ಅರ್ಚಕರಾದ ಗಂಗಾ ಮಾಸ್ತಿ ಹಾಗೂ ಬಂದಮ್ಮ ದೇವಿ ಅರ್ಚಕ ಸತೀಶ್ ಅಗ್ನಿಕೊಂಡವನ್ನು ಯಶಸ್ವಿಯಾಗಿ ಹಾಯ್ದರು.

ಇದಕ್ಕೂ ಮುನ್ನ ಶುಕ್ರವಾರ ರಾತ್ರಿ ಪಟ್ಟಣದ ಪ್ರಮುಖ ರಾಜ ಬೀದಿಗಳಲ್ಲಿ ಬಂಡಿ ಉತ್ಸವ ನಡೆದು ಬಳಿಕ ಸಂಜೆ 5 ಗಂಟೆಗೆ ಕೊಂಡದ ಸೌದೆಗೆ ಪೂಜೆ ಸಲ್ಲಿಸಿ ಅಗ್ನಿಸ್ಪರ್ಶ ನೆರವೇರಿಸಲಾಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರ: ಅರ್ಹ ಮತದಾರರು ಹೆಸರು ನೋಂದಾಯಿಸಿಕೊಳ್ಳಲು ನಾಳೆಯವರೆಗೆ ಅವಕಾಶ



ಮಂಡ್ಯ, ಮೇ 4– ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ ಅರ್ಹ ಶಿಕ್ಷಕ ಮತದಾರರ ಪರಿಷ್ಕರಣೆ ನಡೆಸಿ ಡಿಸೆಂಬರ್ 30ರಂದು ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಮೇ 6ರ ಸಂಜೆ 5ಗಂಟೆಯವರೆಗೆ ಅರ್ಹ ಶಿಕ್ಷಕರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಹತೆ ಹೊಂದಿರುವ ಶಿಕ್ಷಕರು ಅಥವಾ ಹೆಸರು ಬಿಟ್ಟಿ ಹೋಗಿರುವವರು ಆಯಾ ತಾಲೂಕು ಕಚೇರಿಗಳಲ್ಲಿ ನೋಂದಾಯಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಜಕೀಯ ಪಕ್ಷದ ಮುಖಂಡರ ಸಭೆ ನಡೆಸಿ ಮಾತನಾಡಿದ ಅವರು, ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ವೇಳಪಟ್ಟಿ ಪ್ರಕಟವಾಗಿದ್ದು, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಚುನಾವಣಾಧಿಕಾರಿಗಳಾಗಿದ್ದು, ಮೇ 9ರಂದು ಚುನಾವಣಾ ಅಧಿಸೂಚನೆ ಹೊರಡಿಸಲಾಗುವುದು. ಚುನಾವಣೆಯಲ್ಲಿ ಸ್ಪರ್ಧೆ ಮಾಡಬಯಸುವ ಅಭ್ಯರ್ಥಿಗಳು ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಿಂದ ನಾಮಪತ್ರ ನಮೂನೆ ಪಡೆದುಕೊಂಡು ಮೇ 16ರೊಳಗೆ ಸಲ್ಲಿಸಬಹುದಾಗಿದೆ. ಮೇ 17ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಮೇ 20 ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನಾಂಕವಾಗಿರುತ್ತದೆ. ಜೂನ್ 3ರಂದು ಬೆಳಿಗ್ಗೆ 8ರಿಂದ 4ರವರೆಗೆ ಮತದಾನ ನಡೆಯಲಿದ್ದು, ಜೂನ್ 6ರಂದು ಮತ ಎಣಿಕೆ ನಡೆಯಲಿದೆ. ಎಲ್ಲ ಚುನಾವಣೆ ಪ್ರಕ್ರಿಯೆಗಳು ಜೂನ್ 12 ರಂದು ಪೂರ್ಣಗೊಳ್ಳುತ್ತದೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳು ಒಳಪಡುತ್ತದೆ ಎಂದು ಹೇಳಿದರು.

4860 ಮತದಾರರು ನೊಂದಣಿ: ಮಂಡ್ಯ ಜಿಲ್ಲೆಯಲ್ಲಿ 8 ಮತಕೇಂದ್ರಗಳಿದ್ದು, ಅಂತಿಮ ಮತದಾರರ ಪಟ್ಟಿಯ ಪ್ರಕಾರ ಈವರೆಗೆ 4860 ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರು ನೊಂದಣಿ ಮಾಡಿಕೊಂಡಿದ್ದು, ಮೇ 6ರ ಸಂಜೆ 5 ಗಂಟೆಯವರೆಗೆ ನೋಂದಣಿಗೆ ಅವಕಾಶ ನೀಡಲಾಗಿದೆ. ಕೆ.ಆರ್.ಪೇಟೆ ಮಿನಿ ವಿಧಾನ ಸೌಧ ಮತ ಕೇಂದ್ರದಲ್ಲಿ ಒಟ್ಟು 427 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ನಾಗಮಂಗಲ ಮಿನಿ ವಿಧಾನ ಸೌಧ ಮತ ಕೇಂದ್ರದಲ್ಲಿ ಒಟ್ಟು–400 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಪಾಂಡವಪುರ ಮಿನಿ ವಿಧಾನ ಸೌಧ ಮತ ಕೇಂದ್ರದಲ್ಲಿ ಒಟ್ಟು–395 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಮಂಡ್ಯ ಮಿನಿವಿಧಾನಸೌಧ ಮತ ಕೇಂದ್ರದಲ್ಲಿ ಒಟ್ಟು–1089, ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಮಂಡ್ಯ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧ ಮತ ಕೇಂದ್ರದಲ್ಲಿ ಒಟ್ಟು–680, ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಮದ್ದೂರು ಮಿನಿ ವಿಧಾನಸೌಧ ಮತ ಕೇಂದ್ರದಲ್ಲಿ, ಒಟ್ಟು–875 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಶ್ರೀರಂಗಪಟ್ಟಣ ಮಿನಿವಿಧಾನ ಸೌಧ ಮತ ಕೇಂದ್ರದಲ್ಲಿ ಒಟ್ಟು –383 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಮಳವಳ್ಳಿ ಮಿನಿವಿಧಾನ ಸೌಧ ಮತ ಕೇಂದ್ರದಲ್ಲಿ ಒಟ್ಟು– 611 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ವಿವರಿಸಿದರು.

ರಾಜಕೀಯ ಲಾಭಕ್ಕೆ ರೇವಣ್ಣ ವಿರುದ್ಧ ಕೇಸ್ ದಾಖಲು

ನಿರೀಕ್ಷಣಾ ಜಾಮೀನು ಅರ್ಜಿ ಮೇಲಿನ ವಿಚಾರಣೆ ವೇಳೆ ರೇವಣ್ಣ ಪರ ವಕೀಲರ ವಾದ

ಬೆಂಗಳೂರು, ಮೇ 4–ಚುನಾವಣೆ ವೇಳೆ ರಾಜಕೀಯ ಲಾಭ ಪಡೆಯಲು ಶಾಸಕ ಹೆಚ್.ಡಿ. ರೇವಣ್ಣ ವಿರುದ್ಧ ಕೇಸ್ ದಾಖಲಿಸಲಾಗಿದೆ ಎಂದು ಅವರ ಪರ ವಕೀಲ ಮೂರ್ತಿ ಡಿ.ನಾಯಕ್ ಅವರು ನಿರೀಕ್ಷಣಾ ಜಾಮೀನು ಅರ್ಜಿ ಮೇಲೆ ನಡೆದ ವಾದದಲ್ಲಿ ನ್ಯಾಯಾಲಯಕ್ಕೆ ತಿಳಿಸಿದರು.

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯ ಅಪಹರಣ ಹಾಗೂ ಅಕ್ರಮ ಬಂಧನ ಪ್ರಕರಣದಲ್ಲಿ ರೇವಣ್ಣ ಅವರಿಗೆ ನಿರೀಕ್ಷಣಾ ಜಾಮೀನಿಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಇಂದು ಮಧ್ಯಾಹ್ನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮುಂದುವರೆಸಿತು. ಕಲಾಪ ಆರಂಭವಾಗುತ್ತಿದ್ದಂತೆ ಪ್ರಕರಣದ ಸರ್ಕಾರಿ ವಿಶೇಷ ಅಭಿಯೋಜಕ (ಎಸ್‌ಪಿಪಿ) ಬಿ.ಎನ್. ಜಗದೀಶ್ ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದಲ್ಲದೇ, ಮುಚ್ಚಿದ ನ್ಯಾಯಾಲಯದ ಕೊಠಡಿಯಲ್ಲಿ ಕಲಾಪ ನಡೆಸಲು ಅನುಮತಿ ನೀಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಆಕ್ಷೇಪಿಸಿದ ರೇವಣ್ಣ ಪರ ವಕೀಲ ಮೂರ್ತಿ ಡಿ. ನಾಯ್ಕ್, ಪ್ರಕರಣವನ್ನು ಅನಗತ್ಯವಾಗಿ ವಿಜೃಂಭಿಸಲು ಎಸ್‌ಐಟಿ ಪ್ರಯತ್ನಿಸುತ್ತಿದೆ. ಈ ಪ್ರಕರಣದಲ್ಲಿ ನಾವು ಏನನ್ನೂ ಮುಚ್ಚಿಡುವ ಅಗತ್ಯವಿಲ್ಲ. ಇಲ್ಲಿ ಅತ್ಯಾಚಾರ ಪ್ರಕರಣದ ಸಾಕ್ಷ್ಯ ವಿಚಾರಣೆ ನಡೆಯುತ್ತಿಲ್ಲ. ತೆರೆದ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕು. ಇದರಲ್ಲಿ ನಿರಾಧಾರವಾದ ಅಪಹರಣ ಆರೋಪ ಮಾತ್ರವಿದೆ. ಇನ್ ಕ್ಯಾಮರಾ ಬಗ್ಗೆ ನಂತರ ತೀರ್ಮಾನಿಸೋಣ ಎಂದಾಗ ನ್ಯಾಯಾಲಯವು ವಾದ ಮಂಡನೆಗೆ ಅವಕಾಶ ನೀಡಿತು.

ರೇವಣ್ಣ ಪರ ವಾದ ಮಂಡಿಸಿದ ಮೂರ್ತಿ ಡಿ.ನಾಯ್ಕ್, ಐಪಿಸಿ ಸೆಕ್ಷನ್ 364ಎ ಕಿಡ್ನ್ಯಾಪ್ ಪ್ರಕರಣ ನಮ್ಮ ಕಕ್ಷಿದಾರರ ಮೇಲೆ ಅನ್ವಯವಾಗುವುದಿಲ್ಲ. ಏ.29 ರಂದು ಘಟನೆಯಾಗಿರುವುದಾಗಿ ಮೇ2 ರಂದು ಎಫ್‌ಐಆರ್ ದಾಖಲಾಗಿದೆ. ನಿನ್ನೆಂಯಷ್ಟೇ ಜಾಮೀನುರಹಿತ ಆರೋಪಗಳಿಲ್ಲವೆಂದು ಎಸ್‌ಐಟಿ ಹೇಳಿತ್ತು. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕೂಡ ನೀಡಿತ್ತು. ಆದರೆ, ಈಗ ಜಾಮೀನುರಹಿತ ಆರೋಪವಿರುವ ಕೇಸ್ ದಾಖಲಿಸಿದೆ. ಎಸ್‌ಐಟಿ ಕ್ರಮದ ಹಿಂದಿರುವ ಉದ್ದೇಶ ಅರ್ಥಮಾಡಿಕೊಳ್ಳಬೇಕು. ಸೆಕ್ಷನ್ 363 ಹಾಗೂ 365 ಎರಡೂ 7 ವರ್ಷಗಳೊಳಗಿನ ಅಪರಾಧಗಳಾಗಿದ್ದು, ಸೆಕ್ಷನ್ 364ಎ ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆಗೂ ಅವಕಾಶವಿರುವ ಅಪರಾಧವಾಗಿದೆ. ಜಾಮೀನು ಸಿಗಬಾರದೆಂದೇ ಇಂತಹ ಸೆಕ್ಷನ್ ಹಾಕಿದ್ದಾರೆ. ಎಫ್‌ಐಆರ್‌ನಲ್ಲಿ 'ರೇವಣ್ಣ ಸಾಹೇಬರು ಕರೆದುಕೊಂಡು ಬಾ ಅಂದಿದ್ದಾರೆ' ಎಂಬ ಪದ ಬಿಟ್ಟರೆ ರೇವಣ್ಣ ವಿರುದ್ಧ ಯಾವುದೇ ಆರೋಪವಿಲ್ಲ ಎಂದು ವಾದ ಮಂಡಿಸಿದರು.


> ಎಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ವಶಕ್ಕೆ ಪಡೆದಿದೆ ಎಂದು ಗೊತ್ತಾಗಿದೆ. ಕಾನೂನು ಪ್ರಕಾರ ರೇವಣ್ಣ ಅವರು ನಡೆದುಕೊಳ್ಳುತ್ತಾರೆ.
> – ಜಿ.ಟಿ.ದೇವೇಗೌಡ, ಶಾಸಕ

> ಹೆಚ್.ಡಿ.ದೇವೇಗೌಡರ ಆಶೀರ್ವಾದ ಪಡೆದು ಅವರ ಮನೆ ಮುಂದೆಯೇ ರೇವಣ್ಣ ಅವರು ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದಾರೆ. ಅದೇ ರೀತಿ ಪ್ರಜ್ವಲ್ ರೇವಣ್ಣ ಕೂಡ ಕಾನೂನು ಚೌಕಟ್ಟಿನಲ್ಲಿ ಶರಣಾಗುವ ಸಾಧ್ಯತೆ ಇದೆ.
> – ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಈ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಆರೋಪಿಯಲ್ಲ. ಪ್ರಕರಣದ ಎ2 ಆರೋಪಿಗೂ ಹೆಚ್.ಡಿ.ರೇವಣ್ಣಗೂ ಯಾವುದೇ ಸಂಬಂಧವಿಲ್ಲ. ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ದೇಶದೆಲ್ಲೆಡೆ ಪ್ರಚಾರವಾಗಿದೆ. ರಾಜಕೀಯ, ಹಣಕಾಸಿನ ಬಲ ಬಳಸಿ ಈ ಕೃತ್ಯ ಮಾಡಿದ್ದಾರೆ. ಈ ಕೇಸಿಗೆ ಸಂಬಂಧವಿಲ್ಲದ ಅಂಶಗಳನ್ನೆಲ್ಲಾ ಎಸ್‌ಐಟಿ ಆಕ್ಷೇಪಣೆಯಲ್ಲಿ ಉಲ್ಲೇಖಿಸಿದೆ. ರೇವಣ್ಣ ಅವರ ಮೇಲಿನ ಆರೋಪಕ್ಕೂ ಎಸ್‌ಐಟಿ ಆಕ್ಷೇಪಣೆಗೂ ಸಂಬಂಧವಿಲ್ಲ. ರಾಜಕೀಯ ದ್ವೇಷದಿಂದ ತನಿಖೆ ನಡೆಯುತ್ತಿದೆ. ಕೆಲವೊಮ್ಮೆ ಪೊಲೀಸರು ಸ್ವತಂತ್ರವಾಗಿ ತನಿಖೆ ನಡೆಸದಿರುವುದು ದುರದೃಷ್ಟಕರ. ಹೀಗಾಗಿ ಆರೋಪಿಯು ಮುಗ್ಧ ಎಂದು ಸಾಬೀತುಪಡಿಸಲು ಅವಕಾಶ ನೀಡಬೇಕು. ಈ ಕಾರಣಕ್ಕಾಗಿಯೇ ನಿರೀಕ್ಷಣಾ ಜಾಮೀನು ನೀಡಬೇಕು ಎಂದು ವಾದ ಮಾಡಿದರು. ವಾದ ಮುಂದುವರೆಸಿದ ರೇವಣ್ಣ ಪರ ವಕೀಲರು, ಎರಡು ತಿಂಗಳು ಕಸ್ಟಡಿಯಲ್ಲಿಟ್ಟು ತನಿಖೆ ನಡೆಸಬೇಕೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಈ ರೀತಿಯ ಹೇಳಿಕೆ ನೀಡುವ ಮೂಲಕ ಅವರು ತನಿಖೆ ದಿಕ್ಕು ತೋರಿಸುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ರಾಜತಾಂತ್ರಿಕ ವೀಸಾ ಕೊಟ್ಟಿದ್ಯಾಕೆಂದು ಕೇಳಿದ್ದಾರೆ. ಚುನಾವಣೆ ವೇಳೆ ರಾಜಕೀಯ ಲಾಭ ಪಡೆಯಲು ಯತ್ನ ನಡೆಯುತ್ತಿದೆ ಎಂದರಲ್ಲದೆ, ಎಸ್‌ಐಟಿ ತನಿಖೆಗೆ ಸಹಕರಿಸಲು ರೇವಣ್ಣ ಸಿದ್ಧರಿದ್ದಾರೆ. ಹೀಗಾಗಿ ಅವರಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಬೇಕೆಂದು ವಾದ ಮಂಡಿಸಿದರು.

ಎಸ್‌ಪಿಪಿ ಬಿ.ಎನ್.ಜಗದೀಶ್ ಮಾತನಾಡಿ, ಹೆಚ್.ಡಿ. ರೇವಣ್ಣ ರಾಜಕೀಯ ಮತ್ತು ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆ. ಹೀಗಾಗಿ ಮಹಿಳೆಯನ್ನು ಅಪಹರಣ ಮಾಡಿರಬಹುದು. ಬಿಹಾರದಲ್ಲಿ ನಡೆಯುತ್ತಿದ್ದ ಘಟನೆ ಇಲ್ಲಿ ನಡೆದಿದೆ. ಇದು ಇನ್ನೂ ಯಾವುದಾದರೂ ಮಹಿಳೆಗೆ ನಡೆದಿದೆಯೋ ತಿಳಿಯಬೇಕಿದೆ. ಸಂತ್ರಸ್ತ ಮಹಿಳೆಯನ್ನು ಕರೆತಂದು ಆಕೆಯ ಹೇಳಿಕೆ ಪಡೆಯಬೇಕಿದೆ. ರೇವಣ್ಣ ಅವರನ್ನು ವಿಚಾರಣೆಗೊಳಪಡಿಸದೇ ಮಹಿಳೆಯನ್ನು ಹುಡುಕಿ ಹೇಳಿಕೆ ಪಡೆಯಲಾಗುವುದಿಲ್ಲ ಎಂದರು. ಉತ್ತರ ಕರ್ನಾಟಕದಲ್ಲಿ ಪ್ರಚಾರ ಮಾಡುತ್ತಿರುವುದಾಗಿ ತಿಳಿಸಿ, ವಿಚಾರಣೆಗೆ ಹಾಜರಾಗಲು ಹೆಚ್.ಡಿ. ರೇವಣ್ಣ ಸಮಯಾವಕಾಶ ಕೇಳಿದ್ದಾರೆ. ಇದು ಅವರು ಸಂಪೂರ್ಣ ಸತ್ಯ ಹೇಳುತ್ತಿಲ್ಲವೆಂದು ತೋರಿಸುತ್ತಿದೆ. ಸಂತ್ರಸ್ತೆ ಪುತ್ರ 20 ವರ್ಷದವನಾಗಿದ್ದು ದೂರು ನೀಡಿದ್ದಾನೆ. ಸೆಕ್ಷನ್ 363 ಸೇರಿಸದಿರುವುದನ್ನು ಗಂಭೀರವಾಗಿ ಪರಿಗಣಿಸಬಾರದು ಎಂದು ಎಸ್‌ಪಿಪಿ ಪ್ರತಿವಾದ ಮಂಡಿಸಿದ್ದರು. ಒಂದೂವರೆ ಗಂಟೆಗಳ ವಾದ ಪ್ರತಿವಾದ ಆಲಿಸಿ ಕೆಲ ಕಾಲ ತೀರ್ಪನ್ನು ಕಾಯ್ದಿರಿಸಿದ ಬಳಿಕ ಅಂತಿಮವಾಗಿ ನಿರೀಕ್ಷಣಾ ಜಾಮೀನು ನಿರಾಕರಿಸಿ ಸೋಮವಾರಕ್ಕೆ ವಿಚಾರಣೆಯನ್ನು ನ್ಯಾಯಾಲಯ ಮುಂದೂಡಿತು.

ಶ್ರೀಮಂತರಿಗೆ ಮೋದಿ ಕೊಟ್ಟ ಸಂಪತ್ತೆಲ್ಲವೂ ಸೃಷ್ಟಿಯಾಗಿದ್ದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ: ಪ್ರಿಯಾಂಕಾ ಗಾಂಧಿ



ದಾವಣಗೆರೆ, ಮೇ 4– ಮೋದಿಯವರು ದೊಡ್ಡ ದೊಡ್ಡ ಇವೆಂಟ್‌ಗಳನ್ನು ಮಾಡುತ್ತಾರೆ. ಆದರೆ ಬಡವರ ಮನೆಗೆ ಹೋಗಿ ಅವರ ಸಮಸ್ಯೆ ಆಲಿಸಲಿಲ್ಲ. ಒಳ್ಳೆ ಮಾತುಗಳನ್ನು ಆಡುತ್ತಾರೆ. ಆದರೆ ಅವರ ಸಂಬಂಧ ದೊಡ್ಡ ದೊಡ್ಡ ಶ್ರೀಮಂತರೊಂದಿಗೆ ಇರುತ್ತದೆಯೇ ಹೊರತು ಬಡವರೊಂದಿಗೆ ಇರುವುದಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ವಾಗ್ದಾಳಿ ನಡೆಸಿದರು.

ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಪರ ಮತಯಾಚನೆ ಮಾಡಿದ ಬಳಿಕ ಅವರು ಮಾತನಾಡಿದರು. ದೇಶದಲ್ಲಿರುವ ವಿಮಾನ ನಿಲ್ದಾಣ, ಬಂದರುಗಳು, ರಸ್ತೆ, ವಿದ್ಯುತ್ ಅನ್ನು ಅವರ ಶ್ರೀಮಂತ ಸ್ನೇಹಿತರಿಗೆ ಕೊಡಲಾಗಿದೆ. ಕಾಂಗ್ರೆಸ್‌ನವರು 70 ವರ್ಷದಲ್ಲಿ ಏನು ಮಾಡಿದ್ದಾರೆ ಎಂದು ಕೇಳುವ ನೀವು(ಬಿಜೆಪಿ) ಇದುವರೆಗೂ ಶ್ರೀಮಂತರಿಗೆ ಕೊಟ್ಟ ಪ್ರತಿಯೊಂದು ಸಂಪತ್ತು ಕೂಡ ನಮ್ಮ ಸರ್ಕಾರದ ಅವಧಿಯಲ್ಲಿ ಸೃಷ್ಟಿಯಾಗಿದ್ದು. ಬಿಜೆಪಿ ಕಳೆದ 10 ವರ್ಷದಲ್ಲಿ 7 ಸಾವಿರ ಕೋಟಿ ಹಣವನ್ನು ದೇಣಿಗೆ ಪಡೆದುಕೊಂಡಿದೆ. ಪ್ರಧಾನಿ ಮೋದಿ ದೊಡ್ಡ ದೊಡ್ಡ ಉದ್ಯಮಿಗಳು, ಬಂಡವಾಳಶಾಹಿಗಳು ಮತ್ತು ಅವರ ಸ್ನೇಹಿತರ 16 ಲಕ್ಷ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ ಎಂದು ದೂರಿದರು.

ಬಿಜೆಪಿ ದೇಣಿಗೆ ಸಂಗ್ರಹ ಮಾಡಿಕೊಂಡು ವಿಶ್ವದಲ್ಲೇ ಅತ್ಯಂತ ಶ್ರೀಮಂತ ಪಕ್ಷವಾಗಿದೆ. ಸದ್ಯ ತಾಯಂದಿರು ದಿನ ಬಳಕೆ ವಸ್ತುಗಳನ್ನು ಕೊಳ್ಳಲು ಅಂಗಡಿಗೆ ಹೋದರೆ ಅಲ್ಲಿ ಅವುಗಳ ಬೆಲೆಗಳನ್ನು ನೋಡಿ ಮನೆಗೆ ವಾಪಸ್ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷಿಗೆ ಬೇಕಾದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಕೋಟ್ಯಾಂತರ ರೂಪಾಯಿ ಸಾಲ ಮಾಡಿದ ಉದ್ಯಮಿಗಳ ಸಾಲ ಮನ್ನಾ ಆಗುತ್ತದೆ. ಆದರೆ ಎರಡ್ಮೂರು ಲಕ್ಷ ಸಾಲ ಮನ್ನಾ ಆಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಧ್ವನಿ ಎತ್ತಿದವರಿಗೆ ಧಮ್ಕಿ: ಗುಜರಾತ್‌ನಲ್ಲಿ ನಿರ್ಮಾಣ ಮಾಡಿದ್ದ ಬ್ರಿಡ್ಜ್ ಬಿದ್ದಾಯಿತು. ಆದರೆ ಆ ಬ್ರಿಡ್ಜ್ ನಿರ್ಮಿಸಿದ ಕಾಂಟ್ರಾಕ್ಟರ್ ಬಳಿಯಿಂದ ಬಿಜೆಪಿಯವರು ದೇಣಿಗೆ ಪಡೆದಿದ್ದಾರೆ. ಲಸಿಕೆ ತಯಾರು ಮಾಡಿದವರಿಂದ ಚಂದಾ ಪಡೆದಿದ್ದಾರೆ. ಆ ವ್ಯಾಕ್ಸಿನ್‌ನಿಂದ ದುಷ್ಪರಿಣಾಮ ಇದೆ ಎಂದು ತಿಳಿದು ಬಂದಿದೆ. ಆರೋಗ್ಯವಾಗಿದ್ದ ಯುವಕರು ಈ ವ್ಯಾಕ್ಸಿನ್ ಪಡೆದಿದ್ದರಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ವ್ಯಾಕ್ಸಿನ್ ಕಂಪನಿ 51 ಕೋಟಿ ಹಣ ಇವರಿಗೆ ದೇಣಿಗೆ ಕೊಟ್ಟಿದೆ. ಈ ದೇಶದಲ್ಲಿ ಯಾರು ಧ್ವನಿ ಎತ್ತುತ್ತಾರೆ ಅಂತಹವರಿಗೆ ಧಮ್ಕಿ ಹಾಕಲಾಗುತ್ತಿದೆ. ದುರಂತ ಎಂದರೆ ಇಡೀ ದೇಶದ ಇತಿಹಾಸದಲ್ಲಿ ಇಬ್ಬರು ಸಿಎಂಗಳನ್ನು ಈ ಸರ್ಕಾರ ಜೈಲಿಗೆ ಹಾಕಿತು ಎಂದು ಹರಿಹಾಯ್ದರು.

ನರೇಂದ್ರ ಮೋದಿಯವರು ದೊಡ್ಡ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿ ಶ್ರೀಮಂತರಿಗೆ ಹಂಚಿಕೆ ಮಾಡಿದ್ದಾರೆ. ದೇಶದ ಸಂಪತ್ತನ್ನು ತಮ್ಮ ಶ್ರೀಮಂತ ಸ್ನೇಹಿತರಿಗೆ ಕೊಡಲಾಗುತ್ತಿದೆ. ಈ ಎಲ್ಲಾ ಸಂಪತ್ತು, ಹಣ ಜನ ಸಾಮಾನ್ಯರದ್ದು, 10 ವರ್ಷಗಳ ಆಡಳಿತದಲ್ಲಿ ಜನರಿಗೆ ಮೋದಿ ಸರ್ಕಾರ ಉದ್ಯೋಗ ಕೊಟ್ಟಿಲ್ಲ. ಭಾರತದಲ್ಲಿ ಚುನಾವಣೆ ನಡೆಯುತ್ತಿದ್ದರೆ ಇವರು ತಮ್ಮ ಭಾಷಣದಲ್ಲಿ ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. 10 ವರ್ಷಗಳಲ್ಲಿ ನೀವು ನಿರ್ಮಾಣ ಮಾಡಿದ ರಸ್ತೆ, ಶಿಕ್ಷಣ, ಶಾಲೆ ಹಾಗೂ ಆಸ್ಪತ್ರೆ ಮತ್ತು ಯುವಕರಿಗೆ ಎಷ್ಟು ಉದ್ಯೋಗ ಕೊಟ್ಟಿವೆ ಎಂಬುದನ್ನು ಹೇಳಬೇಕಿತ್ತು. ಆದರೆ ನೀವು ಅದ್ಯಾವುದನ್ನು ಮಾಡಲಿಲ್ಲ ಎಂದು ಟೀಕಿಸಿದರು.

ನೀವು ಒಬ್ಬ ಹೊಸ ಪಿಎಂ ಆಯ್ಕೆ ಮಾಡಿ, ಹೊಸ ಆಡಳಿತಕ್ಕೆ ಅವಕಾಶ ಕೊಡಿ. ಕರ್ನಾಟಕದಲ್ಲಿ ಬದಲಾವಣೆ ತಂದಂತೆ ಕೇಂದ್ರದಲ್ಲಿ ಬದಲಾವಣೆ ತನ್ನಿ. ಆಲೋಚನೆ ಮಾಡಿ ಮತದಾನ ಮಾಡಿ ಎಂದು ಮತದಾರರಿಗೆ ಪ್ರಿಯಾಂಕಾ ಗಾಂಧಿ ಮನವಿ ಮಾಡಿದರು.

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ ಎಸ್‌ಐಟಿ ತನಿಖೆ ಚುರುಕು

ಹಾಸನ, ಮೇ 4–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಯನ್ನು ಎಸ್‌ಐಟಿ ಚುರುಕುಗೊಳಿಸಿದೆ. ಇಂದು ಹಾಸನಕ್ಕೆ ಭೇಟಿ ನೀಡಿದ್ದ ತನಿಖಾ ತಂಡ ಇಬ್ಬರು ಸಂತ್ರಸ್ತ ಮಹಿಳೆಯರನ್ನು ಕರೆತಂದು ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಅವರ ತಂದೆ, ಶಾಸಕ ಹೆಚ್.ಡಿ.ರೇವಣ್ಣ ಅವರ ನಿವಾಸಗಳಲ್ಲಿ ಮಹಜರು ನಡೆಸಿದೆ. ಹೊಳೆನರಸೀಪುರದ ಹೆಚ್.ಡಿ.ರೇವಣ್ಣ ಮನೆಗೆ ಸಂತ್ರಸ್ತ ಮಹಿಳೆಯರೊಂದಿಗೆ ಆಗಮಿಸಿದ ತನಿಖಾ ತಂಡ, ಮನೆಯ ಹಾಲ್, ಅಡುಗೆ ಮನೆ, ಸ್ಟೋರ್ ರೂಂ ಮತ್ತು ಬೆಡ್ ರೂಂ ಇನ್ನಿತರೆಡೆ ಮಹಜರು ನಡೆಸಿತು. ತಮಗೆ ಮನೆಯ ಯಾವ ಯಾವ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ಎಸಗಲಾಗಿತ್ತು ಎಂದು ಸಂತ್ರಸ್ತ ಮಹಿಳೆಯರು ತಿಳಿಸಿದ್ದನ್ನು ತಂಡವು ದಾಖಲು ಮಾಡಿಕೊಂಡಿತು. ನಂತರ ಹಾಸನದ ಆರ್.ಸಿ. ನಗರದಲ್ಲಿರುವ ಸಂಸದ ಪ್ರಜ್ವಲ್ ರೇವಣ್ಣ ನಿವಾಸಕ್ಕೆ ಸಂತ್ರಸ್ತ ಮಹಿಳೆಯರನ್ನು ಕರೆತಂದ ತನಿಖಾ ತಂಡ ಅಲ್ಲಿ ಸುಮಾರು 6 ಗಂಟೆಗಳ ಕಾಲ ಮಹಜರು ನಡೆಸಿತು. ಇಂದು ಎಸ್‌ಐಟಿಯ ಒಂದು ತಂಡ ಹಾಸನ ಮತ್ತು ಹೊಳೆನರಸೀಪುರದಲ್ಲಿ ಮಹಜರು ಕಾರ್ಯ ನಡೆಸಿದರೆ, ಮತ್ತೊಂದು ತಂಡ ಹುಣಸೂರು ತಾಲೂಕು ಕಾಳೇನಹಳ್ಳಿಯಲ್ಲಿರುವ ಹೆಚ್.ಡಿ.ರೇವಣ್ಣ ಅವರ ಹಿಂದಿನ ಆಪ್ತ ಸಹಾಯಕ ರಾಜಶೇಖರ್ ಅವರ ತೋಟದ ಮನೆ ಮೇಲೆ ದಾಳಿ ನಡೆಸಿ ಅಪಹರಣಕ್ಕೀಡಾಗಿದ್ದ ಸಂತ್ರಸ್ತ ಮಹಿಳೆಯನ್ನು ರಕ್ಷಿಸಿದೆ. ಮತ್ತೊಂದು ತಂಡ ಸಂಜೆ ವೇಳೆಗೆ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿದೆ.

ಪಾಕಿಸ್ತಾನಕ್ಕೂ ಕಾಲಿಟ್ಟ ಯೋಗ; ಇಸ್ಲಾಮಾಬಾದ್ ಪಾಲಿಕೆಯಿಂದ ತರಗತಿ ಆರಂಭ!

ಇಸ್ಲಾಮಾಬಾದ್, ಮೇ 4–ಭಾರತ ಮೂಲದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸ 'ಯೋಗ' ನೆರೆಯ ಪಾಕಿಸ್ತಾನಕ್ಕೂ ಅಧಿಕೃತವಾಗಿ ಕಾಲಿಟ್ಟಿದ್ದು, ಇಸ್ಲಾಮಾಬಾದ್ ಮಹಾನಗರ ಪಾಲಿಕೆಯಿಂದ ತರಗತಿ ಆರಂಭಿಸಲಾಗಿದೆ. ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್ ಉಸ್ತುವಾರಿ ಹೊಣೆ ಹೊತ್ತಿರುವ ರಾಜಧಾನಿ ಅಭಿವೃದ್ಧಿ ಮಂಡಳಿಯು (ಸಿಡಿಎ) ತನ್ನ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ, 'ಇಸ್ಲಾಮಾಬಾದ್ ಮಹಾನಗರ ಪಾಲಿಕೆಯು ಎಫ್–9 ಪಾರ್ಕ್‌ನಲ್ಲಿ ಉಚಿತ ಯೋಗ ತರಗತಿ ಆರಂಭಿಸಿದ್ದು, ಹಲವರು ಈಗಾಗಲೇ ತರಗತಿಗೆ ಸೇರ್ಪಡೆಯಾಗಿದ್ದಾರೆ ಎಂದು ಸಿಡಿಎ ತಿಳಿಸಿದೆ. ಜೊತೆಗೆ ಜನರು ಯೋಗಾಭ್ಯಾಸ ಮಾಡುತ್ತಿರುವ ಚಿತ್ರವನ್ನು ಹಂಚಿಕೊಂಡಿದೆ.

ಅಂದ ಹಾಗೆ ವಿಶ್ವಸಂಸ್ಥೆಯು 2014 ಡಿಸೆಂಬರ್ 11ರಂದು ಭಾರತ ಮೂಲದ ಯೋಗಕ್ಕೆ ಜಾಗತಿಕ ಮನ್ನಣೆ ನೀಡಿ ಜೂನ್ 21 ಅನ್ನು 'ಅಂತಾರಾಷ್ಟ್ರೀಯ ಯೋಗ ದಿನ'ವೆಂದು ಘೋಷಿಸಿತ್ತು. ಈ ಕುರಿತ ಮಹತ್ವದ ಪ್ರಸ್ತಾವಕ್ಕೆ 175 ರಾಷ್ಟ್ರಗಳು ಅಂದು ಸಹಿ ಹಾಕಿದ್ದವು. ಪಾಕಿಸ್ತಾನದಲ್ಲಿ ಯೋಗವು ಔಪಚಾರಿಕವಾಗಿ ಮಾತ್ರ ಬಳಕೆಯಲ್ಲಿತ್ತು. ಸದ್ಯ ಯೋಗಾಭ್ಯಾಸಕ್ಕೆ ಅಧಿಕೃತ ಮಾನ್ಯತೆ ಸಿಕ್ಕಂತಾಗಿದೆ. ಉಚಿತ ಯೋಗ ತರಬೇತಿ ನೀಡುವ ಕ್ರಮವನ್ನು ಹಲವು ಶ್ಲಾಘಿಸಿದ್ದಾರೆ.

ಪ್ರಧಾನಿಗೆ ಸವಾಲು ಹಾಕುವ ಮೊದಲು 'ರಾಯ್ ಬರೇಲಿ' ಗೆಲ್ಲಿ!



ನವದೆಹಲಿ, ಮೇ 4– ರಾಯ್‌ಬರೇಲಿಯಲ್ಲಿ ರಾಹುಲ್ ಗಾಂಧಿ ನಾಮಪತ್ರ ಸಲ್ಲಿಸಿದ ಬೆನ್ನಲ್ಲೇ ಅವರ ನಿರ್ಧಾರವನ್ನು ವ್ಯಂಗ್ಯ ಮಾಡಿದ್ದ ಮಾಜಿ ವಿಶ್ವ ಚೆಸ್ ಚಾಂಪಿಯನ್ ರಷ್ಯಾದ ಗ್ಯಾರಿ ಕ್ಯಾಸ್ಪರೋವ್, ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ್ದಾರೆ. ಅಮೇಥಿ ಬಿಟ್ಟು ರಾಯ್ ಬರೇಲಿಯಿಂದ ಸ್ಪರ್ಧಿಸುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಡೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್ ವೈರಲ್ ಆಗಿರುವ ಹಿನ್ನೆಲೆಯಲ್ಲಿ ರಷ್ಯಾದ ಚೆಸ್ ಪಟು ಗ್ಯಾರಿ ಕಾಸ್ಪರೋವ್, ಭಾರತೀಯ ರಾಜಕೀಯದ ಕುರಿತಾದ ತಮ್ಮ 'ಚಿಕ್ಕ ಜೋಕ್' ಇದಾಗಿದ್ದು, ನಾನು ರಾಜಕೀಯ ಪಂಡಿತನಲ್ಲ ಎಂದು ಹೇಳಿದ್ದಾರೆ.

ಈ ಹಿಂದೆ ಉನ್ನತ ಪಟ್ಟಕ್ಕಾಗಿ ಸವಾಲು ಹಾಕುವ ಮೊದಲು ರಾಯ್ ಬರೇಲಿಯನ್ನು ಮೊದಲು ಗೆಲ್ಲಿರಿ ಎಂದು ರಾಹುಲ್ ಗಾಂಧಿ ಕುರಿತು ಕ್ಯಾಸ್ಪರೋವ್ ವ್ಯಂಗ್ಯ ಮಾಡಿದ್ದರು. ಈ ಪೋಸ್ಟ್ ವ್ಯಾಪಕ ವೈರಲ್ ಆಗಿ ಪರ–ವಿರೋಧ ಚರ್ಚೆಗಳು ನಡೆಯುತ್ತಿರುವಂತೆಯೇ ತಮ್ಮ ಪ್ರಮಾದ ಅರಿವಾಗಿ ಕ್ಯಾಸ್ಪರೋವ್ ಸ್ಪಷ್ಟನೆ ನೀಡಿದ್ದಾರೆ. 61 ವರ್ಷ ವಯಸ್ಸಿನ ಕ್ಯಾಸ್ಪರೋವ್ ಇದು ಕೇವಲ ತಮಾಷೆ ಮತ್ತು ಅದನ್ನು ಜೋಕ್ ಆಗಿ ಮಾತ್ರ ನೋಡಬೇಕು ಎಂದು ಮನವಿ ಮಾಡಿದ್ದಾರೆ.

ಬಿರುಗಾಳಿ-ಮಳೆ ಆರ್ಭಟ; ಮೈಸೂರಲ್ಲಿ ಇಬ್ಬರು ಬಲಿ

● ನಾಲ್ವರಿಗೆ ಗಾಯ; ಮಳೆಗಿಂತ ಬಿರುಗಾಳಿಯಿಂದ ಭಾರಿ ಅವಾಂತರ ● ಪರಿಹಾರ ಕಾರ್ಯಾಚರಣೆ ಸಂಬಂಧ ಸಬೂಬು ಹೇಳುವ ನಗರಪಾಲಿಕೆ, ಮುಡಾ, ಚೆಸ್ಕಾಂ, ಅರಣ್ಯ ಸಿಬ್ಬಂದಿ
● ಸಮನ್ವಯ ಕೊರತೆಯಿಂದ ಕುಂಟುತ್ತಿರುವ ಕಾರ್ಯಾಚರಣೆ; ರಸ್ತೆ-ಫುಟ್‌ಪಾತ್‌ನಲ್ಲೇ ರಾಶಿ ರಾಶಿ ಬಿದ್ದಿರುವ ಮರದ ಕೊಂಬೆ-ರೆಂಬೆಗಳು; ನೇತು ಬಿದ್ದಿರುವ ವಿದ್ಯುತ್ ತಂತಿಗಳು





ಮೈಸೂರು ಜಿಲ್ಲೆಯಲ್ಲಿ ವಾಡಿಕೆಗೂ ಮೀರಿ 12.8 ಮಿಲಿ ಮೀಟರ್ ಮಳೆ

ಮೈಸೂರು ಜಿಲ್ಲೆಯಲ್ಲಿ ಶುಕ್ರವಾರ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. 4 ಮಿಲಿ ಮೀಟರ್‌ನಷ್ಟು ವಾಡಿಕೆ ಮಳೆಯಾಗಬೇಕಿತ್ತು. ಆದರೆ ನಿನ್ನೆ ಮೈಸೂರು ಜಿಲ್ಲೆಯಲ್ಲಿ ಒಂದೇ ದಿನ 12.8 ಮಿಲಿ ಮೀಟರ್ ಮಳೆಯಾಗಿದೆ. ಹವಾಮಾನ ಇಲಾಖೆ ತಾಲೂಕುವಾರು ನೀಡಿರುವ ಅಂಕಿ ಅಂಶಗಳ ಪ್ರಕಾರ ಮೈಸೂರು ಜಿಲ್ಲೆಯ 10 ತಾಲೂಕುಗಳಲ್ಲಿ ಮೈಸೂರು ತಾಲೂಕಲ್ಲಿ 19.9 ಮಿಲಿಮೀಟರ್ ಮಳೆಯಾಗಿದೆ. ಹೆಚ್.ಡಿ.ಕೋಟೆ ತಾಲೂಕಿನಲ್ಲಿ 18.3 ಮಿಲಿ ಮೀಟರ್, ಹುಣಸೂರಿನಲ್ಲಿ 17.3 ಮಿಲಿ ಮೀಟರ್, ಕೆ.ಆರ್.ನಗರದಲ್ಲಿ 8.9 ಮಿಲಿ ಮೀಟರ್, ನಂಜನಗೂಡಿನಲ್ಲಿ 3.4 ಮಿಲಿ ಮೀಟರ್, ಪಿರಿಯಾಪಟ್ಟಣದಲ್ಲಿ 11.7 ಮಿಲಿ ಮೀಟರ್, ತಿ.ನರಸೀಪುರದಲ್ಲಿ 9.6 ಮಿಲಿ ಮೀಟರ್, ಸರಗೂರು ಹಾಗೂ ಸಾಲಿಗ್ರಾಮ ತಾಲೂಕಿನಲ್ಲಿ 9.8 ಮಿಲಿ ಮೀಟರ್ ಮಳೆಯಾಗಿದೆ.

ಮಳೆ ಬಂದರೂ ನೀರಿಗೆ ಹಾಹಾಕಾರ

ಶುಕ್ರವಾರ ಸಂಜೆ ಭಾರಿ ಮಳೆಯಾಗಿ ಸ್ವಲ್ಪ ತಂಪೆರೆದಿದೆ. ಆದರೆ ಇಂದು ಬೆಳಗ್ಗೆ ನೀರಿಗೆ ಹಾಹಾಕಾರ ಉಂಟಾಗಿತ್ತು. ವಿದ್ಯುತ್ ಸಂಪರ್ಕವಿಲ್ಲದ ಕಾರಣ ವಾಣಿ ವಿಲಾಸ ಕಾರ್ಯಾಗಾರದಿಂದ ನೀರು ಸರಬರಾಜು ಸಾಧ್ಯವಾಗಲಿಲ್ಲ. ಇದರಿಂದ ಕೆಲವು ಬಡಾವಣೆಗಳಲ್ಲಿ ಅಕ್ಕ-ಪಕ್ಕದಲ್ಲಿದ್ದ ಬೋರ್‌ವೆಲ್ ಮೂಲಕ ನೀರು ಸಂಗ್ರಹಿಸಿದರು. ಕೆಲವರು ಟ್ಯಾಂಕ್‌ಗಳ ಮೂಲಕ ನೀರು ತರಿಸಿಕೊಂಡರು. ಆದರೆ ಬೋರ್‌ವೆಲ್ ಸೌಲಭ್ಯವಿಲ್ಲದ, ಸಂಪ್ ಇಲ್ಲದ ಬಹಳಷ್ಟು ಜನರು ನೀರಿಲ್ಲದೆ ತೊಂದರೆ ಅನುಭವಿಸಿದರು. ಸಂಪ್‌ಗಳಲ್ಲಿ ನೀರಿದ್ದರೂ ವಿದ್ಯುತ್ ಇಲ್ಲದ ಕಾರಣ ಟ್ಯಾಂಕ್‌ಗಳಿಗೆ ನೀರು ತುಂಬಿಸಲು ಸಾಧ್ಯವಾಗಲಿಲ್ಲ. ಇದರಿಂದ ಸ್ನಾನ ಸೇರಿದಂತೆ ನಿತ್ಯ ವಿಧಿಗಾಗಿ ನೀರಿಲ್ಲದೆ ಜನರು ಪರದಾಡಿದರು.

ಮೈಸೂರು, ಮೇ 4 (ಬಿಎಲ್‌ಯು)- ಭಾರಿ ಗಾಳಿಯೊಂದಿಗೆ ವರುಣನ ಆರ್ಭಟಕ್ಕೆ ಮೈಸೂರು ಅಕ್ಷರಶಃ ತತ್ತರಿಸಿದೆ.



ಶಿವಕುಮಾರ್

ಶುಕ್ರವಾರ ಉಂಟಾದ ಬಿರುಗಾಳಿ ಸಹಿತ ಭಾರಿ ಮಳೆಗೆ ಇಬ್ಬರು ಬಲಿಯಾಗಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ವರ್ಷಧಾರೆಗೆ ಭೂಮಿ ಸ್ವಲ್ಪ ತಂಪಾದರೂ ಗಾಳಿಯ ರಭಸಕ್ಕೆ ದೊಡ್ಡ ಗಾತ್ರದ ಮರಗಳು ಧರೆಗುರುಳಿವೆ.

ನೂರಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಇಷ್ಟೆಲ್ಲಾ ಅವಾಂತರವಾದರೂ ನಗರಪಾಲಿಕೆ, ಚೆಸ್ಕಾಂ ಬೆರಳೆಣಿಕೆಯಷ್ಟು ಸಿಬ್ಬಂದಿಯನ್ನು ಪರಿಹಾರ ಕಾರ್ಯಾಚರಣೆಗೆ ನಿಯೋಜಿಸಿವೆ. ಮಳೆ ಅವಾಂತರ ವೇಳೆ ಕಾರ್ಯಾಚರಣೆಗೆ ಪೂರ್ವ ತಯಾರಿ ಮಾಡಿಕೊಳ್ಳದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಮೈಸೂರು ತಾಲೂಕು ಮಾರಶೆಟ್ಟಿ ಹಳ್ಳಿಯ ವಾಸಿ ಶಿವಕುಮಾರ್(35) ಹಾಗೂ ನಂಜನಗೂಡು ತಾಲೂಕು ಸುತ್ತೂರು ಗ್ರಾಮದ ವಾಸಿ ರೈತ ಮಹಿಳೆ ಮಾದಮ್ಮ (65) ಮಳೆಗೆ ಬಲಿಯಾದವರಾಗಿದ್ದಾರೆ.

ಶಿವಕುಮಾರ್ ತಿ.ನರಸೀಪುರ ರಸ್ತೆಯಲ್ಲಿ ಬರುವ ನಾಡನಹಳ್ಳಿಯ ವೈದ್ಯರ ಭವನದ ಬಳಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಮಳೆ ಬಂದ ಕಾರಣ ಪಕ್ಕದಲ್ಲೇ ಇದ್ದ ಸೆಕ್ಯೂರಿಟಿ ರೂಂಗೆ ಹೋಗುವಾಗ ಗಾಳಿ ರಭಸಕ್ಕೆ ರೂಂ ಮೇಲಿಂದ ತೂರಿ ಬಂದ ಕಬ್ಬಿಣದ ಶೀಟ್ ಶಿವಕುಮಾರ್ ತಲೆಗೆ ಬಡಿದಿದೆ. ತೀವ್ರ ರಕ್ತಸ್ರಾವದಿಂದ ನರಳುತ್ತಿದ್ದ ಶಿವಕುಮಾರ್ ಅವರನ್ನು ತಕ್ಷಣವೇ ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

ರೈತ ಮಹಿಳೆ ಬಲಿ: ಮೈಸೂರು ತಾಲೂಕು ಸುತ್ತೂರಿನ ರೈತ ಮಹಿಳೆ ಮಾದಮ್ಮ ಮೇವು ತರಲು ಹೊಲಕ್ಕೆ ಹೋಗಿದ್ದಾಗ ಭಾರಿ ಗಾಳಿಯಿಂದ ಮರದ ಕೊಂಬೆ ಬಿದ್ದು ಸಾವನ್ನಪ್ಪಿದ್ದಾರೆ. ಮೈಸೂರಿನ ರಾಜೀವ್‌ನಗರದ ವಾಸಿ ನೂರ್ ಅಹಮದ್ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಆಟೋ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಮರದ ರೆಂಬೆ ಆಟೋದ ಮೇಲೆ ಬಿದ್ದ ಪರಿಣಾಮ ಆತನಿಗೆ ಗಂಭೀರ ಗಾಯಗಳಾಗಿದ್ದು, ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಗರದ ಕಾರಂಜಿ ಕೆರೆ ರಸ್ತೆಯಲ್ಲಿ ಬೈಕ್‌ನಲ್ಲಿ ಹೋಗುವಾಗ ಗಾಳಿ-ಮಳೆಗೆ ಮರದ ಕೊಂಬೆ ಬೈಕ್ ಸವಾರನ ಮೇಲೆ ಬಿದ್ದಿದೆ. ಇದರ ಪರಿಣಾಮ ವಿದ್ಯಾರ್ಥಿಗಳಾದ ಅಮೀರ್ ಇರ್ಫಾನ್ ಮತ್ತು ಎಂ.ಡಿ.ಶಂಶುದ್ದೀನ್ ಗಂಭೀರವಾಗಿ ಗಾಯಗೊಂಡಿದ್ದು, ಎಂ.ಜಿ.ರಸ್ತೆಯ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರದ ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ವಿದ್ಯಾರ್ಥಿನಿ ಸಹನಾ ಮಳೆ ಬರುವಾಗ ಸ್ಕೂಟರ್‌ನಲ್ಲಿ ಮನೆಗೆ ಹೋಗುವಾಗ ಹೆಲಿಪ್ಯಾಡ್ ಬಳಿ ಮರದ ರೆಂಬೆ ಬಿದ್ದಿದೆ. ಸಹನಾಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಒಟ್ಟಾರೆ ವರ್ಷದ ಮೊದಲ ಮಳೆ ಇಬ್ಬರನ್ನು ಬಲಿ ತೆಗೆದುಕೊಂಡಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ವಿದ್ಯುತ್ ಕಡಿತ: ಭಾರಿ ಮಳೆಯ ಕಾರಣ ನಗರದ ಬಹುತೇಕ ಬಡಾವಣೆಗಳಲ್ಲಿ ಮರಗಳು ಧರೆಗುರುಳಿವೆ. ಮರದ ರೆಂಬೆ-ಕೊಂಬೆಗಳು ಮುರಿದು ಬಿದ್ದು, 200ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ತುಂಡಾಗಿ ಬಿದ್ದಿವೆ. ಇದರ ಪರಿಣಾಮ ಮೈಸೂರು ನಗರದ ಶೇ.70ರಷ್ಟು ಭಾಗದಲ್ಲಿ ನಿನ್ನೆ ರಾತ್ರಿಯಿಂದ ಇಂದು ಸಂಜೆ ತನಕ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಕಗ್ಗತ್ತಲು ಆವರಿಸಿತ್ತು.

ಇಂದು ಬೆಳಿಗ್ಗೆಯಿಂದಲೇ ನಗರ ಪಾಲಿಕೆಯ ಅಭಯ ತಂಡ ಮೈಸೂರಿನ ಹಲವು ಕಡೆ ರಸ್ತೆ ಮೇಲೆ ಬಿದ್ದಿದ್ದ ಮರಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಮತ್ತೊಂದೆಡೆ ಬುಡಸಹಿತ ಉರುಳಿ ಬಿದ್ದ ಮರಗಳ ತೆರವುಗೊಳಿಸಲು ಪಾಲಿಕೆಯ ಬೆರಳೆಣಿಕೆಯಷ್ಟು ಸಿಬ್ಬಂದಿ ಕಾರ್ಯನಿರತರಾಗಿದ್ದರು.

ಸಿಬ್ಬಂದಿ ಕೊರತೆ ಕಾರಣ ರಸ್ತೆ ಮೇಲೆ ಬಿದ್ದಿದ್ದ ಮರಗಳ ಕೊಂಬೆ-ರೆಂಬೆಗಳನ್ನು ಸಂಪೂರ್ಣ ತೆರವುಗೊಳಿಸದೆ ಫುಟ್‌ಪಾತ್‌ಗೆ ಎಳೆದು ರಾಶಿ ಹಾಕಲಾಗಿದೆ. ಕೆಲವೆಡೆ ರಸ್ತೆಯಲ್ಲಿ ಮರಗಳು ಉರುಳಿ ಬಿದ್ದಿದ್ದರೂ ಸಂಜೆಯಾದರೂ ಅವುಗಳನ್ನು ತೆರವು ಮಾಡುವ ಗೋಜಿಗೆ ಹೋಗಲಿಲ್ಲ.

ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳ ಮೇಲೆ ಬಿದ್ದ ಮರದ ರೆಂಬೆ-ಕೊಂಬೆ ಕೂಡ ತೆರವು ಮಾಡಲಾಗಿಲ್ಲ. ಕೆಲವು ಕಡೆ ತೆರವು ಮಾಡಿದ್ದರೂ ವಿದ್ಯುತ್ ತಂತಿ ರಿಪೇರಿ ಮಾಡದೆ, ಅವು ನೇತಾಡುತ್ತಿವೆ.

ಮಳೆಗಾಲದಲ್ಲಿ ಇಂತಹ ಅವಘಡಗಳು ಸರ್ವೆ ಸಾಮಾನ್ಯ. ಪರಿಸ್ಥಿತಿ ನಿಭಾಯಿಸಲು ಮೈಸೂರು ನಗರಪಾಲಿಕೆ ಸಜ್ಜಾಗಿರಬೇಕಿತ್ತು. ಯಾವುದೇ ತಯಾರಿ ಇಲ್ಲದ ಅಧಿಕಾರಿಗಳು ಗಾಳಿ-ಮಳೆ ಆರ್ಭಟದಿಂದ ಕಕ್ಕಾಬಿಕ್ಕಿಯಾಗಿದ್ದಾರೆ.

ವಿದ್ಯುತ್ ಸಂಪರ್ಕವಿಲ್ಲದ ಕಾರಣ ಮೈಸೂರು ನಗರದ ಬಹುತೇಕ ಸಿಗ್ನಲ್ ಲೈಟ್‌ಗಳು ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ಸಂಚಾರಿ ಪೊಲೀಸರು ಸಿಗ್ನಲ್‌ನಲ್ಲಿ ನಿಂತು ವಾಹನ ಸಂಚಾರ ನಿಯಂತ್ರಣಕ್ಕೆ ಕ್ರಮ ಕೈಗೊಂಡರು.

ಚೆಸ್ಕಾಂ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ 350 ಸಿಬ್ಬಂದಿ ಹಾಗೂ 150 ಹೊರಗುತ್ತಿಗೆ ನೌಕರರು ಇಡೀ ದಿನ ಕಾರ್ಯಾಚರಣೆಯಲ್ಲಿ ನಿರತರಾಗಿದ್ದರು. ಮುರಿದು ಬಿದ್ದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸ ಕಂಬಗಳ ಅಳವಡಿಸಿದರು. ಆದರೆ ಇನ್ನು ಬಹಳಷ್ಟು ಕಡೆಗಳಲ್ಲಿ ವಿದ್ಯುತ್ ಕಂಬಗಳು ಹಾಗೆ ರಸ್ತೆ ಮಧ್ಯೆ ಬಿದ್ದಿದ್ದವು. ಮಳೆ ಅವಘಡ ಸಂಭವಿಸಿದಾಗ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಚೆಸ್ಕಾಂ ಕೂಡ ಸಜ್ಜಾಗಿಲ್ಲ ಎಂಬುದು ಮನವರಿಕೆ ಆಗುತ್ತಿದೆ. ಪಾಲಿಕೆ ಹಾಗೂ ಚೆಸ್ಕಾಂ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಯವರು ತಮಗೇನು ಸಂಬಂಧವಿಲ್ಲವೆಂಬಂತೆ ದೂರ ಉಳಿದಿದ್ದಾರೆ. ನಗರಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ಚೆಸ್ಕಾಂ, ಅರಣ್ಯ ಇಲಾಖೆ, ಕಂದಾಯ ಇಲಾಖೆ ನಾನಾ ಇಲಾಖೆ ನಡುವೆ ಸಮನ್ವಯತೆ ಇದ್ದರೆ ಅತೀ ಶೀಘ್ರ ಕಾರ್ಯಾಚರಣೆ ನಡೆಸಬಹುದಿತ್ತು. ಆದರೆ ಸಮನ್ವಯ ಕೊರತೆಯಿಂದ ಕಾರ್ಯಾಚರಣೆ ಕುಂಟುತ್ತಾ ಸಾಗಿದೆ.

ನಗರದ ಸರಸ್ವತಿಪುರಂ ಸ್ವಿಮ್ಮಿಂಗ್ ಪೂಲ್ ರಸ್ತೆಯಲ್ಲಿ ಕಾರಿನ ಮೇಲೆ ವಿದ್ಯುತ್ ಕಂಬ ಮುರಿದು ಬಿದ್ದಿದ್ದು, ಸಂಜೆಯಾದರೂ ಅದನ್ನು ತೆರವು ಮಾಡಿರಲಿಲ್ಲ. ಹಾಗಾಗಿ ಕಾರಿನ ಚಾಲಕ ಚಂದನ್ ಪಾಲಿಕೆ ಹಾಗೂ ಚೆಸ್ಕಾಂ ಸಿಬ್ಬಂದಿಯ ದಾರಿ ಕಾಯುತ್ತಾ ಸುಸ್ತಾದರು. ಬಹಳಷ್ಟು ವಿದ್ಯುತ್ ಕಂಬಗಳು ಶಿಥಿಲಗೊಂಡಿದ್ದವು. ಆದರೆ ಅವುಗಳನ್ನು ತೆರವು ಮಾಡಿ ಹೊಸ ಕಂಬ ಅಳವಡಿಸಲು ಚೆಸ್ಕಾಂ ಮುಂದಾಗಿಲ್ಲ ಮಳೆಯ ಕಾರಣ ಬಹಳಷ್ಟು ರಸ್ತೆಗಳಲ್ಲಿ ಮ್ಯಾನ್ ಹೋಲ್‌ಗಳು ಉಕ್ಕಿ ಹರಿಯುತ್ತಿವೆ. ಕಲುಷಿತ ನೀರು ದಾಟಿಕೊಂಡು ಜನರು ಓಡಾಡುವ ದುರ್ಗತಿ ಬಂದಿದೆ. ಪಾಲಿಕೆಗೆ ದೂರು ನೀಡಿದರೂ ಮ್ಯಾನ್‌ಹೋಲ್ ಸರಿ ಮಾಡಲು ಯಾರೂ ಬರುತ್ತಿಲ್ಲವೆಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಮೈಸೂರಿನ ಧನ್ವಂತ್ರಿ ರಸ್ತೆಯ ಸ್ಟೋನ್ ಬಿಲ್ಡಿಂಗ್ ಬಳಿ ಭಾರಿ ಗಾತ್ರದ ಅರಳಿಮರದ ರೆಂಬೆ ಮುರಿದು ಬಿದ್ದು ಆ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಪಾಲಿಕೆ ಸಿಬ್ಬಂದಿ ಮುರಿದು ಬಿದ್ದ ಮರಗಳ ತೆರವುಗೊಳಿಸುವ ಕಾರ್ಯಾಚರಣೆ ಕೈಗೊಂಡರು.





ವಿದ್ಯಾರ್ಥಿಗಳಾದ ಅಮೀರ್ ಇರ್ಫಾನ್ ಮತ್ತು ಎಂ.ಡಿ. ಶಂಶುದ್ದೀನ್ ಗಂಭೀರವಾಗಿ ಗಾಯಗೊಂಡು ಎಂ.ಜಿ.ರಸ್ತೆಯ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿರುವುದು.

ಪೂರ್ವ ಮುಂಗಾರು ಶುಭಾರಂಭ; ಮೇ 8ರವರೆಗೆ ನಿರಂತರ ಮಳೆ

ಕಳೆದ ವರ್ಷದಂತೆ ಈ ಬಾರಿಯೂ ಬರಗಾಲ ಬಂದೆರಗಬಹುದು ಎಂಬ ಆತಂಕ ರೈತಾಪಿ ವರ್ಗದಲ್ಲಿ ಮನೆ ಮಾಡಿತ್ತು. ಆದರೆ ಪೂರ್ವ ಮುಂಗಾರು ಶುಭಾರಂಭಗೊಂಡಿದ್ದು, ಭರಣಿ ಮಳೆ ಹರುಷ ತಂದಿದೆ. ಏಪ್ರಿಲ್ 27ರಂದೇ ಪೂರ್ವ ಮುಂಗಾರು ಪ್ರವೇಶಿಸಿದ್ದು, ಶುಕ್ರವಾರ ಆರಂಭವಾದ ಮಳೆ ಮೇ 8ರವರೆಗೆ ನಿರಂತರವಾಗಿ ಸುರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ಹಲವು ತಿಂಗಳಿಂದ ಮಳೆ ಇಲ್ಲದೆ ಬಿಲಿಸಿನ ತಾಪಮಾನ ಏರಿಕೆಯಾಗುತ್ತಲೇ ಇತ್ತು. ಮೈಸೂರಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಬೇಸಿಗೆ ಬಿರು ಬಿಸಿಲಿನಿಂದ ಜನರು ತತ್ತರಿಸಿದ್ದರು. ಯಾವಾಗ ಮಳೆ ಆಗುವುದೋ ಎಂದು ಜನರು ಆಕಾಶದತ್ತ ಮುಖ ಮಾಡಿದ್ದರು. ನಿನ್ನೆ ಬೆಳಿಗ್ಗೆಯಿಂದ ಬಿಲಿಲಿನ ಝಳವಿತ್ತು. ನಿನ್ನೆ ಸಂಜೆ 4.30 ಗಂಟೆಯಲ್ಲಿ ಇದ್ದಕ್ಕಿದ್ದಂತೆ ದಟ್ಟ ಮೋಡ ಆವರಿಸಿ ಮಳೆಯ ಸಿಂಚನವಾಯಿತು. ಆದರೆ ಗಾಳಿ ಸಹಿತ ಆರಂಭವಾದ ಜೋರು ಮಳೆ ಬಹಳಷ್ಟು ಅವಘಡಗಳನ್ನು ಉಂಟು ಮಾಡಿದರೂ ಅಂತಿಮವಾಗಿ ಧರೆಗೆ ತಂಪೆರೆಯಿತು. ಸುಮಾರು ಒಂದು ಗಂಟೆ ಸುರಿದ ಮಳೆ ಜನರಲ್ಲಿ ಹರ್ಷ ತಂದಿದೆ.

ವಿದ್ಯಾರ್ಥಿಗಳಿಂದ ರಸ್ತೆಯಲ್ಲಿ ಮುರಿದು ಬಿದ್ದಿದ್ದ ಮರಗಳ ತೆರವು



ಮೈಸೂರು, ಮೇ4(ಜಿಎ)- ಶುಕ್ರವಾರ ಸಂಜೆ ಸುರಿದ ಭಾರೀ ಗಾಳಿ ಹಾಗೂ ಮಳೆಯಿಂದ ರಸ್ತೆಗಳ ಮಧ್ಯದಲ್ಲಿ ಮುರಿದು ಬಿದ್ದದ್ದ ಗಿಡಮರಗಳನ್ನು ಶೇಷಾದ್ರಿಪುರಂ ಪದವಿ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ತೆರವುಗೊಳಿಸುವ ಮೂಲಕ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಮುಂಭಾಗ, ರೈಲ್ವೆ ನಿಲ್ದಾಣದ ಹತ್ತಿರ ಇರುವ ಪೆಟ್ರೋಲ್ ಬಂಕ್ ಬಳಿ, ಮೆಟ್ರೋಪೋಲ್ ಬಳಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಬಿದ್ದಿದ್ದಂತಹ ಮರಗಳ ರೆಂಬೆಯನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು.

ಮರಗಳ ತೆರವು ಕಾರ್ಯದಲ್ಲಿ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಡಾ.ರಾಘವೇಂದ್ರ, ಸ್ವಯಂ ಸೇವಕರಾದ ದಿವಿತ್, ದರ್ಶನ್, ಮುರಳಿ, ವಿನಯ್, ನಿತಿನ್ ಕೃಷ್ಣ, ಚೇತನ್ ಸಿಂಗ್ ಮತ್ತಿತರರು ಭಾಗಿಯಾಗಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾನಕ್ಕಾಗಿ ನೋಂದಣಿಗೆ ನಾಳೆ ಕಡೇ ದಿನ

ಮೈಸೂರು,ಮೇ 4-ಜೂನ್ 3 ರಂದು ನಡೆಯುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಚುನಾವಣಾ ಆಯೋಗದಿಂದ ಹೆಸರನ್ನು ನೋಂದಾಯಿಸಲು ಮೇ 6 ಸೋಮವಾರ ಕೊನೆಯ ದಿನಾಂಕವಾಗಿದೆ. ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಗೆ ಬರುವ ಪ್ರೌಢಶಾಲಾ, ಪಿಯುಸಿ, ಪದವಿ ಕಾಲೇಜುಗಳ ಶಿಕ್ಷಕರು ಹಾಗೂ ಉಪನ್ಯಾಸಕರು, ಐಟಿಐ ಕಾಲೇಜುಗಳ ಉಪನ್ಯಾಸಕರು, ಡಿಪ್ಲೊಮಾ, ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ, ವೈದ್ಯಕೀಯ ಕಾಲೇಜು, ಆಯುರ್ವೇದ ಕಾಲೇಜು, ಫಾರ್ಮಸಿ ಕಾಲೇಜು, ಪಾಲಿಟೆಕ್ನಿಕ್ ಕಾಲೇಜುಗಳು ಉಪನ್ಯಾಸಕರು ಮತ್ತು ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ಎಲ್ಲಾ ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಮಂತ್ರಾಲಯ ಮಠದ ಆವರಣದಲ್ಲಿ ವಿಶ್ವ ದಾಖಲೆಯ ರಾಘವೇಂದ್ರ ಸ್ವಾಮಿಗಳ ಭಾವಚಿತ್ರ ರಚನೆ



ಮೈಸೂರು,ಮೇ 4(ಜಿಎ)-ಮೈಸೂರು ಕಲಾವಿದರು ತಂಡದಿಂದ ಓಂ ಕಾರ್ಸ್ ಸಂಸ್ಥೆ ಸಹಯೋಗದಲ್ಲಿ ಮೇ 8ರಂದು ಸಂಜೆ 6ಕ್ಕೆ ಆಂಧ್ರಪ್ರದೇಶದ ಮಂತ್ರಾಲಯ ಮಠದ ಆವರಣದಲ್ಲಿ 20,000ಕ್ಕೂ ಹೆಚ್ಚು ಚದರ ಅಡಿ ವಿಸ್ತೀರ್ಣದಲ್ಲಿ ರಾಘವೇಂದ್ರಸ್ವಾಮಿ ಭಾವಚಿತ್ರ ರಚಿಸಿ ವಿಶ್ವ ದಾಖಲೆ ಮಾಡಲಾಗುವುದು ಎಂದು ತಂಡದ ಸದಸ್ಯ ಪುನೀತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಂಡದ 9 ಜನ ಸದಸ್ಯರು 12 ಗಂಟೆಗಳಲ್ಲಿ ಚಿತ್ರ ರಚಿಸುವರು. 2,000 ಕೆ.ಜಿ.ಗೂ ಹೆಚ್ಚು ರಂಗೋಲಿ, ಬಣ್ಣ ಬಳಕೆಯಾಗಲಿದೆ. ವರ್ಲ್ಡ್ ರೆಕಾರ್ಡ್, ಲಿಮ್ಕಾ ಸಂಸ್ಥೆ, ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಮುಂತಾದ ಸಂಸ್ಥೆಗಳಿಗೆ ಮಾಹಿತಿ ನೀಡಲಾಗಿದ್ದು, ಪ್ರತಿನಿಧಿಗಳು ಭಾಗವಹಿಸುವರು. ಮಾಹಿತಿ ಹಾಗೂ ಸಹಕಾರಕ್ಕೆ ಮೊ.ಸಂ. 89702 32323 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಓಂ ಕಾರ್ಸ್ ಮಾಲೀಕ ವಿ.ಅಭಿಲಾಷ್, ರಂಗೋಲಿ ಕಲಾವಿದೆ ಸಿ.ಲಕ್ಷ್ಮಿ, ತಂಡದ ಸದಸ್ಯರಾದ ಪುನೀತ್ ರಾಯಣ್ಣ, ಮಂಜುನಾಥ್ ಇದ್ದರು.

ಇಂದು ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆ

ಮೈಸೂರು,ಮೇ 4-ನಗರದ ಕಸಾಪ ಸಭಾಂಗಣದಲ್ಲಿ ಮೇ 5ರಂದು ಬೆಳಗ್ಗೆ 10.30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ವಿವಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಸಿ.ಪಿ.ಸಿದ್ಧಾಶ್ರಮ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಹೆಜ್ಜೆ ಕುರಿತುಗಳು ವಿಷಯವನ್ನು ಕುರಿತು ಮೈಸೂರು ವಿವಿ ಕನ್ನಡ ಪ್ರಾಧ್ಯಾಪಕಿ ಪ್ರೊ.ವಿಜಯ ಕುಮಾರಿ ಎಸ್.ಕರೀಕಲ್ ಮಾತನಾಡಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಹಿರಿಯ ಸಾಹಿತಿಗಳಾದ ಎಸ್.ರಾಮಪ್ರಸಾದ್, ಡಾ.ಟಿ.ಎನ್.ನಾಗರತ್ನ, ಸಿ.ಚಾಮಶೆಟ್ಟಿ, ಇಂದಿರಾ ಪಾಟೀಲ್ ಅವರನ್ನು ಸನ್ಮಾನಿಸಲಾಗುವುದು. ಕವಿಗೋಷ್ಠಿಯಲ್ಲಿ ಕೆರೋಡಿ ಲೋಲಾಕ್ಷಿ, ಸುಮತಿ ಸುಬ್ರಹ್ಮಣ್ಯ, ಬಿ.ಎಲ್.ಪ್ರಭು, ನರಸಿಂಗರಾವ್, ತುಳಸಿ ವಿಜಯಕುಮಾರಿ, ಯಶೋಧ ರಾಮಕೃಷ್ಣ, ಡಾ.ಟಿ.ತ್ಯಾಗರಾಜು, ನಾರಾಯಣರಾವ್, ಶಾಂತಕುಮಾರಿ ಕವನ ವಾಚಿಸಲಿದ್ದಾರೆ. ಕನ್ನಡ ಗೀತ ಗಾಯನದಲ್ಲಿ ವಿದುಷಿ ಡಾ.ಜಿ.ವಿ.ಸುಬ್ಬಲಕ್ಷ್ಮಿ, ಶ್ರೀಲತಾ ಮನೋಹರ್, ರಮೇಶ್‌ಕುಮಾರ್, ಕೆ.ವಿ. ವಾಸು, ಪರಮೇಶ್ ಉತ್ತನಹಳ್ಳಿ, ಜಯಶ್ರೀ ಶಿವರಾಂ, ಪ್ರೇಮರಾವ್, ಸೌಮ್ಯ ಪ್ರವೀಣ್ ಹಾಡಲಿದ್ದಾರೆ.

ತಮಿಳುನಾಡಿಗೆ ಕಾವೇರಿ ನೀರು; ಸಹಿ ಸಂಗ್ರಹ




ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಟೌನ್‌ಹಾಲ್ ಮುಂಭಾಗ ಸಾರ್ವಜನಿಕರಿಂದ ಸಹಿ ಸಂಗ್ರಹಿಸಲಾಯಿತು.

ಮೈಸೂರು, ಮೇ 4(ಜಿಎ)-ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಟೌನ್‌ಹಾಲ್ ಮುಂಭಾಗ ಶನಿವಾರ ಸಾರ್ವಜನಿಕರಿಂದ ಸಹಿ ಸಂಗ್ರಹಿಸಲಾಯಿತು.

ಈ ವೇಳೆ ಸಮಿತಿಯ ಅಧ್ಯಕ್ಷ ಜಯಪ್ರಕಾಶ್(ಜೆಪಿ) ಮಾತನಾಡಿ, ಕಾವೇರಿ ನ್ಯಾಯ ಮಂಡಳಿ ನೀಡುತ್ತಿರುವ ತೀರ್ಪುಗಳಿಂದ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದು ಮುಂದುವರೆದರೆ, ರಾಜ್ಯ ಅಭಿವೃದ್ಧಿ ಕುಂಠಿತಗೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ರಾಜ್ಯದಲ್ಲಿ ನೀರಿನ ಅಭಾವದಿಂದ ಕೈಗಾರಿಕೆಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಕಾವೇರಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕುವವರೆಗೂ ಹೋರಾಟ ನಡೆಸಲಾಗುತ್ತದೆ ಎಂದರು.

ಈ ವೇಳೆ ತೇಜಸ್ ಲೋಕೇಶ್‌ಗೌಡ, ಸ್ವಾಮಿಗೌಡ, ಹೊನ್ನೆಗೌಡ, ಮಹೇಶ್ ಒಂಟಿಕೊಪ್ಪಲ್, ಪುಷ್ಪ, ಮಂಜುಳಾ, ಮಹದೇವಸ್ವಾಮಿ, ಹನುಮಂತೇಗೌಡ, ವಿಷ್ಣು, ಭಾಗ್ಯಮ್ಮ, ಸಿಂಧುವಳ್ಳಿ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜೆಎಸ್‌ಎಸ್ ವಾಕ್, ಶ್ರವಣ ಸಂಸ್ಥೆಯಲ್ಲಿ ಪದವಿ ದಿನಾಚರಣೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಶನಿವಾರ ನಡೆದ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪದವೀಧರರ ದಿನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮುಖ್ಯಸ್ಥೆ ಡಾ. ಆಶೂ ಗ್ರೋವರ್ ಪ್ರದವಿ ಪ್ರದಾನ ಮಾಡಿದರು.

ಮೈಸೂರು,ಮೇ 4(ಎಂಟಿವೈ)- ವಾಕ್ ಮತ್ತು ಶ್ರವಣ ವೈದ್ಯಕೀಯ ಶಿಕ್ಷಣ ಪಡೆದ ವಿದ್ಯಾರ್ಥಿಗಳು ನೂತನ ಆವಿಷ್ಕಾರ ಮತ್ತು ತಂತ್ರಜ್ಞಾನ ಬಳಕೆಯಲ್ಲಿ ಕೌಶಲ್ಯ ಅಳವಡಿಸಿಕೊಂಡು ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಬೇಕು ಎಂದು ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮುಖ್ಯಸ್ಥೆ ಡಾ.ಆಶೂ ಗ್ರೋವರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಶನಿವಾರ ನಡೆದ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ-2024 ಪದವಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರವಣ ಆರೋಗ್ಯ ಕ್ಷೇತ್ರದಲ್ಲಿ ವೈದ್ಯರು ಹಾಗೂ ಸ್ಪೀಚ್ ಥೆರಪಿಸ್ಟ್‌ಗಳಿಗೆ ಬಹುಬೇಡಿಕೆ ಇದ್ದು, ಧ್ವನಿಯಿಲ್ಲದವರಿಗೆ ಧ್ವನಿಯಾಗುವ ಹಾಗೂ ಶ್ರವಣ ದೋಷವುಳ್ಳವರಿಗೆ ನೆರವಾಗುವ ಮಹತ್ತರ ಕಾರ್ಯನಿರ್ವಹಿಸಲು ವಿಫುಲ ಅವಕಾಶ ಇದೆ. ಪ್ರಸ್ತುತ ವಾಕ್ ಮತ್ತು ಶ್ರವಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಿದ್ದು, ಅತ್ಯಾಧುನಿಕ ಉಪಕರಣಗಳು ಇಂದು ಬಳಕೆಯಾಗುತ್ತಿವೆ. ಆದರೆ, ಈ ಹೊಸ ಹೊಸ ವೈದ್ಯಕೀಯ ಆವಿಷ್ಕಾರಗಳು ಜನರನ್ನು ತಲುಪಲು ತಡವಾಗುತ್ತಿದೆ. ಹೀಗಾಗಿ ನವ ಪದವೀಧರರು ಈ ಕುರಿತು ಗಮನ ಹರಿಸಬೇಕು. ತಂತ್ರಜ್ಞಾನ ಬಳಕೆಯ ಪರಿಣತರಾಗಿ ರೋಗ ಗುಣಪಡಿಸುವ ವಿಧಾನಗಳನ್ನು ಅಳವಡಿಸಿಕೊಳ್ಳುವುದಕ್ಕೆ ಮುಂದಾಗಬೇಕು ಎಂದರು.

ಮುಂದಿನ 10 ವರ್ಷಗಳಲ್ಲಿ ಉದ್ಯೋಗಗಳನ್ನು ಪಡೆಯಲು ಕಷ್ಟವಾಗುತ್ತದೆ ಮತ್ತು ಭವಿಷ್ಯದಲ್ಲಿ ತಂತ್ರಜ್ಞಾನ ಮತ್ತು ಸಂಬಂಧಿತ ಕೌಶಲ್ಯಗಳನ್ನು ಹೊಂದಿದವರು ಮಾತ್ರ ಯಶಸ್ಸು ಸಾಧಿಸುತ್ತಾರೆ. ಪ್ರಸ್ತುತ ಕಾಲಘಟ್ಟದಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಸವಾಲುಗಳು ಎದುರಾಗಿವೆ. ಇದನ್ನೆಲ್ಲಾ ನಮ್ಮ ಪರಿಶ್ರಮ ಹಾಗೂ ಜ್ಞಾನ ಕೌಶಲ್ಯದಿಂದ ಮೆಟ್ಟಿ ನಿಂತು ಸಾಧನೆ ಮಾಡುವುದರ ಜೊತೆಗೆ ಶಿಕ್ಷಣದೊಂದಿಗೆ ಮಾನವೀಯ ಮೌಲ್ಯ ಬೆಳೆಸಿಕೊಳ್ಳುವ ಮನೋಭಾವ ನಮ್ಮದಾಗಬೇಕು. ಶೈಕ್ಷಣಿಕ ಸಾಧನೆಯೊಂದಿಗೆ ಸಮಾಜಕ್ಕೂ ನಾವು ಕೊಡುಗೆ ನೀಡುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ಪದವೀಧರರ ದಿನಾಚರಣೆಯಲ್ಲಿ 36 ವಿದ್ಯಾರ್ಥಿಗಳಿಗೆ ಪದವಿ ಹಾಗೂ 19 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವೀಧರರು ಸೇರಿದಂತೆ ಒಟ್ಟು 55 ಪದವೀಧರರನ್ನು ಸನಾನಿಸಲಾಯಿತು. ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಪ್ರಶಸ್ತಿಯನ್ನು ಮೂವರು ಪದವಿಪೂರ್ವ ಮತ್ತು ಮೂವರು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಡಾ.ಬಸಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ವಾಕ್ ಮತ್ತು ಶ್ರವಣ ಸಂಸ್ಥೆಯ ಡಾ.ಆರ್.ಸುಮಾ ಉಪಸ್ಥಿತರಿದ್ದರು.

ಕೊಡಗಿನ ಮೊದಲ ಫ್ಲೈಓವರ್ ಸಂಚಾರಕ್ಕೆ ಮುಕ್ತ

ತಲಕಾವೇರಿ, ಭಾಗಮಂಡಲ ಪುಣ್ಯಕ್ಷೇತ್ರಗಳ ದರ್ಶನಕ್ಕೆ ಇನ್ನಿಲ್ಲ ಅಡ್ಡಿ



ಸಂಚಾರಕ್ಕೆ ಮುಕ್ತಗೊಂಡಿರುವ ಕೊಡಗಿನ ಏಕೈಕ ಫ್ಲೈ ಓವರ್ ಮೇಲೆ ವಾಹನ ಸಂಚಾರ.

ಮಡಿಕೇರಿ, ಮೇ 4– ಕೊಡಗಿನ ಮೊದಲ ಫ್ಲೈಓವರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾಗಮಂಡಲ ಮೇಲ್ಸೇತುವೆ ಕಾಮಗಾರಿ ಸಂಪೂರ್ಣ ಮುಕ್ತಾಯ ಕಂಡಿದ್ದು, ಇದೀಗ ಎಲ್ಲಾ ಮಾದರಿಯ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಕಾವೇರಿ ನೀರಾವರಿ ನಿಗಮದ ಮೂಲಕ ಕಾಮಗಾರಿ ಅನುಷ್ಠಾನಗೊಂಡಿದ್ದು, ರಾಜ್ಯ ಸರಕಾರ ಇದಕ್ಕಾಗಿ ಒಟ್ಟು 28 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಈ ಮೇಲ್ಸೇತುವೆ ನಿರ್ಮಾಣದಿಂದಾಗಿ ಭಾಗಮಂಡಲ ವ್ಯಾಪ್ತಿಯ ಹತ್ತಾರು ಹಳ್ಳಿಗಳ ಗ್ರಾಮಸ್ಥರ ಸಹಿತ ತಲಕಾವೇರಿ ಮತ್ತು ಭಾಗಮಂಡಲ ಪುಣ್ಯಕ್ಷೇತ್ರಗಳಿಗೆ ಮಳೆಗಾಲವೂ ಪ್ರವಾಹದ ಯಾವುದೇ ಅಡ್ಡಿ ಆತಂಕಗಳಿಲ್ಲದೇ ಪ್ರಯಾಣ ಮಾಡಬಹುದಾಗಿದೆ. ಜಿಲ್ಲೆಯಲ್ಲಿ ಮಳೆಗಾಲ ಎದುರಾಗಲು ಕೆಲವೇ ದಿನಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಇದೀಗ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಜೂನ್ 4ರವರೆಗೂ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಮೇಲ್ಸೇತುವೆಯ ಅಧಿಕೃತ ಲೋಕಾರ್ಪಣಾ ಕಾರ್ಯ ಮುಂದಿನ ದಿನಗಳಲ್ಲಿ ನಡೆಯಲಿದೆ.

ಪ್ರವಾಹದಿಂದ ಸಂಚಾರಕ್ಕೆ ಮುಕ್ತಿ: ಮಳೆಗಾಲದಲ್ಲಿ ಬ್ರಹ್ಮಗಿರಿ ಬೆಟ್ಟ ಸಾಲು, ತಲಕಾವೇರಿ, ಕೋರಂಗಾಲ, ಚೇರಂಗಾಲ, ಭಾಗಮಂಡಲ ವ್ಯಾಪ್ತಿಯಲ್ಲಿ ಅತಿಯಾಗಿ ಮಳೆಯಾಗುತ್ತದೆ. ಪರಿಣಾಮ ಕಾವೇರಿ, ಕನ್ನಿಕೆ, ಸುಜ್ಯೋತಿ ನದಿಗಳು ಸಂಗಮವಾಗುವ ತ್ರಿವೇಣಿ ಸಂಗಮದಲ್ಲಿ ಸಹಜವಾಗಿಯೇ ಪ್ರವಾಹ ಏರ್ಪಡುತ್ತದೆ. ಇದರಿಂದಾಗಿ ಮಡಿಕೇರಿ–ಭಾಗಮಂಡಲ–ತಲಕಾವೇರಿ ಮತ್ತು ಭಾಗಮಂಡಲ–ಅಯ್ಯಂಗೇರಿ–ನಾಪೋಕ್ಲು ರಸ್ತೆಗಳು ಸಂಪರ್ಕ ಕಡಿದುಕೊಳ್ಳುತ್ತವೆ. ರಸ್ತೆಗಳ ಮೇಲೆ ನೀರು ಹರಿಯುವ ಕಾರಣದಿಂದ ಎಲ್ಲಾ ರೀತಿಯ ವಾಹನಗಳ ಸಂಚಾರ ಸ್ಥಗಿತಗೊಳ್ಳುತ್ತದೆ. ಎಡೆಬಿಡದೆ ಮಳೆ ಸುರಿದಲ್ಲಿ ತ್ರಿವೇಣಿ ಸಂಗಮ ಸಹಿತ ಭಾಗಮಂಡಲ ಕನಿಷ್ಠ 3 ದಿನಗಳವರೆಗೂ ದ್ವೀಪವಾಗಿ ಮಾರ್ಪಡುತ್ತದೆ. ಇದೀಗ ಮೇಲ್ಸೇತುವೆ ಕಾಮಗಾರಿ ಮುಕ್ತಾಯ ಕಂಡು ವಾಹನಗಳ ಓಡಾಟಕ್ಕೆ ಅವಕಾಶ ಒದಗಿಸಿರುವುದು ಅಲ್ಲಿನ ನಿವಾಸಿಗಳ ಸಹಿತ ಭಕ್ತರಿಗೂ ಅನುಕೂಲ ಕಲ್ಪಿಸಿದಂತಾಗಿದೆ.

ಕಾಮಗಾರಿಗೆ ಹಲವು ವಿಘ್ನ

2018ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಆಡಳಿತ ಅವಧಿಯಲ್ಲಿ ಭಾಗಮಂಡಲ ಮೇಲ್ಸೇತುವೆ ಯೋಜನೆ ಪ್ರಸ್ತಾಪಕ್ಕೆ ಜೀವ ಸಿಕ್ಕಿತ್ತು ಕಾವೇರಿ ನೀರಾವರಿ ನಿಗಮದ ವತಿಯಿಂದ ಕೈಗೊಳ್ಳಲಾದ ಕಾಮಗಾರಿಯನ್ನು 4–10–2018ರಂದು ಗುತ್ತಿಗೆ ನೀಡಲಾಗಿದೆ. ಈ ಸಂದರ್ಭ 18 ತಿಂಗಳ ಕಾಲಾವಧಿ ನಿಗದಿಪಡಿಸಿ, 3–4–2020ರೊಳಗೆ ಕಾಮಗಾರಿ ಪೂರ್ಣಗೊಳಿಸಲು ಗಡುವು ನೀಡಲಾಗಿತ್ತು. ಆದರೆ ಕಾಮಗಾರಿ ನಡೆಯುವ ಸ್ಥಳದಲ್ಲಿ ಭೂ ಸ್ವಾಧೀನ, ವಿದ್ಯುತ್ ಕಂಬಗಳ ಸ್ಥಳಾಂತರ, ಅರಣ್ಯ ಇಲಾಖೆಯಿಂದ ಗಿಡ ಮರಗಳ ತೆರವು ಕಾರ್ಯಕ್ಕೆ ವಿಳಂಬವಾಗಿರುವುದು, 2018ರಲ್ಲಿ ಉಂಟಾದ ಭೀಕರ ಪ್ರಾಕೃತಿಕ ವಿಕೋಪ ಮತ್ತು ಪ್ರವಾಹ, 2020ರ ಕೋವಿಡ್ ಲಾಕ್‌ಡೌನ್ ಕಾರಣಗಳಿಂದ ಮೇಲ್ಸೇತುವೆ ಕಾಮಗಾರಿಗೆ ವಿಘ್ನಗಳು ಎದುರಾಗಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬಹುದು.

880 ಮೀಟರ್ ಉದ್ದ: ಈ ಮೇಲ್ಸೇತುವೆ ಭಾಗಮಂಡಲ ಪ್ರವೇಶ ದ್ವಾರದ ಮುಂದಿನಿಂದ ಪ್ರಾರಂಭವಾಗಿ ತಲಕಾವೇರಿ ರಸ್ತೆಯನ್ನು ಸಂಪರ್ಕಿಸುತ್ತದೆ. ಮಾತ್ರವಲ್ಲದೇ ಭಾಗಮಂಡಲ ಹೃದಯ ಭಾಗದಿಂದ ಮೇಲ್ಭಾಗವಾಗಿ ಮತ್ತೊಂದು ಸಂಪರ್ಕ ರಸ್ತೆ ನಾಪೋಕ್ಲು ಕಡೆಗೆ ತೆರಳುವ ಸೇತುವೆ ಬಳಿ ಕೊನೆಗೊಳ್ಳುತ್ತದೆ. ಇಂಜಿನಿಯರಿಂಗ್ ವಿನ್ಯಾಸದಂತೆ ಮೇಲ್ಸೇತುವೆ ಒಟ್ಟು 880 ಮೀಟರ್ ಉದ್ದವಿದ್ದು, ಮಡಿಕೇರಿ–ಭಾಗಮಂಡಲ, ಭಾಗಮಂಡಲ–ತಲಕಾವೇರಿ, ಭಾಗಮಂಡಲ–ಅಯ್ಯಂಗೇರಿ ಎಂಬಂತೆ ಒಟ್ಟು 3 ಭಾಗಗಳಾಗಿ ವಿಂಗಡಿಸಲಾಗಿದೆ. ಈ ಪೈಕಿ 68 ಮೀಟರ್ ಉದ್ದ ಕೇವಲ ಸೇತುವೆ ವಿನ್ಯಾಸವನ್ನು ಒಳಗೊಂಡಿದೆ. ಒಟ್ಟು ಒಟ್ಟು 36 ಪಿಲ್ಲರ್‌ಗಳನ್ನು ಹೊಂದಿದ್ದು, 200 ಮೀಟರ್ ಸಂಪರ್ಕ ರಸ್ತೆ ಮತ್ತು ಇನ್ನುಳಿದಂತೆ ಒಳಚರಂಡಿ ವ್ಯವಸ್ಥೆಯನ್ನೂ ಒಳಗೊಂಡಿದೆ. ಈ ರಸ್ತೆಯಲ್ಲಿ 60 ಟನ್ ಭಾರಕ್ಕೂ ಮೇಲ್ಪಟ್ಟ ವಾಹನಗಳು ಸಂಚರಿಸಬಹುದಾಗಿದ್ದು, 40 ಕಿ.ಮೀ ವೇಗದ ಮಿತಿ ಅಳವಡಿಸಲಾಗಿದೆ. ವಿದ್ಯುತ್ ದೀಪಗಳು, ಕೇಬಲ್‌ಗಳ ಸಹಿತ ಮೇಲ್ಸೇತುವೆಯ ಮಳೆ ನೀರು ಹರಿದು ಹೋಗುವ ಕಡೆಗಳಲ್ಲಿ ಪೈಪ್‌ಗಳ ಸಹಿತ ಸುಣ್ಣ ಬಣ್ಣ ಬಳಿಯುವ ಕಾಮಗಾರಿಯೂ ಪೂರ್ಣವಾಗಿದೆ.

> “ಭಾಗಮಂಡಲ ಮೇಲ್ಸೇತುವೆ ಕಾಮಗಾರಿಯನ್ನು ಅತ್ಯಂತ ಶ್ರಮವಹಿಸಿ ಪೂರ್ಣಗೊಳಿಸಲಾಗಿದೆ. ಇನ್ನೇನು ಮಳೆಗಾಲ ಆರಂಭವಾಗುವ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ವಾಹನ ಸಂಚಾರಕ್ಕೆ ಈಗಾಗಲೇ ಅನುವು ಮಾಡಿಕೊಡಲಾಗಿದೆ. ಭಾಗಮಂಡಲ ವ್ಯಾಪ್ತಿಯಲ್ಲಿ ಈ ಮಳೆಗಾಲ ಪ್ರವಾಹ ಏರ್ಪಟ್ಟರು ಕೂಡ ಮಡಿಕೇರಿಯಿಂದ ಭಾಗಮಂಡಲ–ತಲಕಾವೇರಿ ಹಾಗೂ ಭಾಗಮಂಡಲ–ನಾಪೋಕ್ಲು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಮೇಲ್ಸೇತುವೆಯ ಎಲ್ಲಾ ಹಂತದ ಕಾಮಗಾರಿಯೂ ಮುಕ್ತಾಯಗೊಂಡಿದೆ.
>
> –ಹರಿನಾರಾಯಣ, ಫ್ಲೈಓವರ್ ಪ್ರಾಜೆಕ್ಟ್ ಡೈರೆಕ್ಟರ್

ಖಾಸಗಿ ಜಮೀನುಗಳಲ್ಲಿ ಮರಗಳ ಸರ್ವೆ ಕಾರ್ಯ
ಅರಣ್ಯ ಇಲಾಖೆ ಆದೇಶ ತಡೆಯಲು ಸೂಚನೆ



ಪೊನ್ನಣ್ಣ

ಮಡಿಕೇರಿ,ಮೇ 4– ಅರಣ್ಯ ಇಲಾಖೆ ಖಾಸಗಿ ಜಮೀನುಗಳಲ್ಲಿರುವ ಸರ್ಕಾರಿ ಮರಗಳನ್ನು ದಾಖಲು ಮಾಡುವ ಪ್ರಕ್ರಿಯೆ ಕುರಿತು ಅರಣ್ಯ ಇಲಾಖೆ ಹೊರಡಿಸಿರುವ ಆದೇಶವನ್ನು ತಡೆ ಹಿಡಿಯುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹೇಳಿದ್ದಾರೆ.

ಚುನಾವಣೆ ಮುಗಿದ ಬಳಿಕ ಈ ಬಗ್ಗೆ ಅರಣ್ಯ ಸಚಿವರ ಸಮ್ಮುಖದಲ್ಲಿ ಉನ್ನತ ಮಟ್ಟದ ಸಭೆ ನಡೆಸಿ, ಇದಕ್ಕೆ ಪರಿಹಾರ ಕಂಡು ಕೊಳ್ಳಲಾಗುವುದು. ಮುಂದಿನ ನಿರ್ಧಾರ ತೆಗೆದು ಕೊಳ್ಳುವವರೆಗೂ ಅರಣ್ಯ ಇಲಾಖೆಯಿಂದ ಯಾವುದೇ ಕ್ರಮವಾಗುವುದಿಲ್ಲ, ಬೆಳೆಗಾರರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದು ಪೊನ್ನಣ್ಣ ಅಭಯ ನೀಡಿದ್ದಾರೆ.

ಸರಕಾರಿ ಮರಗಳ ದಾಖಲಾತಿಗೆಂದು ಅರಣ್ಯ ಸಿಬ್ಬಂದಿಗಳು ಕಾಫಿ ತೋಟಗಳಿಗೆ ಬರುವುದಿಲ್ಲ. ತಾವು ಮತ್ತು ರಾಜ್ಯ ಸರ್ಕಾರ ರೈತರ, ಬೆಳೆಗಾರರ ರಕ್ಷಣೆಗೆ ಬದ್ಧರಾಗಿದ್ದೇವೆ ಎಂದು ಎ.ಎಸ್.ಪೊನ್ನಣ್ಣ ಹೇಳಿದ್ದಾರೆ. ವಿಷಯವನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ಸರಿಯಲ್ಲ ಎಂದು ತೀಕ್ಷ್ಣವಾಗಿ ನುಡಿದ ಅವರು, ಮರದ ಹಕ್ಕು ವಿಚಾರದಲ್ಲಿ ತಾವು ವೈಯಕ್ತಿಕವಾಗಿ ಮತ್ತು ಕಾನೂನಾತ್ಮಕವಾಗಿ ಹೋರಾಟ ಮಾಡಿದ್ದು, ಅಂದು ಯಾರು ಈ ಹೋರಾಟ ವಿರೋಧಿಸಿದ್ದರೋ, ಯಾರು ಬೆಳೆಗಾರರಿಗೆ ಮರದ ಹಕ್ಕು ತಪ್ಪಿಸಿದ್ದರೋ ಅಂತಹವರು ಇಂದು ಬೆಳೆಗಾರರ ಪರ ಮಾತನಾಡುತ್ತಿದ್ದಾರೆ. ಇದಕ್ಕೆ ಬೆಳೆಗಾರರು ಕಿವಿಗೊಡಬಾರದೆಂದು ಎ.ಎಸ್. ಪೊನ್ನಣ್ಣ ಮನವಿ ಮಾಡಿದ್ದಾರೆ.

ಅರಣ್ಯ ಸಂಪತ್ತು, ಪರಿಸರ ರಕ್ಷಣೆ, ಅರಣ್ಯದಲ್ಲಿರುವ ಮರಗಳ ಸಂರಕ್ಷಣೆಗೆ ರಾಜ್ಯ ಸರಕಾರ ಮತ್ತು ತಾವು ಬದ್ಧರಾಗಿದ್ದೇವೆ. ಆದರೆ ಕೆಲವು ಮರ ವ್ಯಾಪಾರಿಗಳು ಜಿಲ್ಲೆಯ ಪ್ರಕೃತಿ ಸಂಪತ್ತನ್ನು ನಾಶ ಮಾಡಿದ್ದಾರೆ. ಅಂತಹ ಮರ ವ್ಯಾಪಾರಿಗಳಿಗೆ ಜಿಲ್ಲೆಯಲ್ಲಿ ಅವಕಾಶವಿಲ್ಲವೆಂದು ಎ.ಎಸ್. ಪೊನ್ನಣ್ಣ ಸ್ಪಷ್ಟಪಡಿಸಿದ್ದಾರೆ.

ಮೇ 7 ರಂದು ಸ್ವಚ್ಛತಾ ಕಾರ್ಯ

ಮಡಿಕೇರಿ: ಶ್ರೀ ತಲಕಾವೇರಿ ದೇವಾಲಯದಲ್ಲಿ ಮೇ 7 ರಂದು ಮಧ್ಯಾಹ್ನ 2 ಗಂಟೆಯ ನಂತರ ಸ್ವಚ್ಛತಾ ಕಾರ್ಯದ ಪ್ರಯುಕ್ತ ಶ್ರೀ ತಲಕಾವೇರಿ ದೇವಾಲಯದ ಪ್ರವೇಶ ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ಸಹಕರಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್.ಜಿ. ಚಂದ್ರಶೇಖರ್ ಕೋರಿದ್ದಾರೆ.

ಮನೆಗೆ ನುಗ್ಗಿ ದಂಪತಿ ಮೇಲೆ ಹಲ್ಲೆ ನಡೆಸಿ ನಗ–ನಾಣ್ಯ ದೋಚಿ ಪರಾರಿಯಾಗಿದ್ದ ಐವರು ಮುಸುಕುಧಾರಿಗಳ ಬಂಧನ

ಆರೋಪಿಗಳಿಂದ ಚಿನ್ನಾಭರಣ, ನಗದು ವಶ



ಸಿದ್ದಾಪುರ: ಮನೆಗೆ ನುಗ್ಗಿ ದಂಪತಿ ಮೇಲೆ ಹಲ್ಲೆ ನಡೆಸಿ ನಗ–ನಾಣ್ಯ ದೋಚಿ ಪರಾರಿಯಾಗಿದ್ದ ಐವರು ಮುಸುಕುಧಾರಿ ಆರೋಪಿಗಳನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ಗೊಣ್ಣೂರು ಗ್ರಾಮದ ಚನ್ನಂಗಿ ನಿವಾಸಿ ತಂಗಪ್ಪನ್.ಕೆ.ಕೆ ಅವರ ಮನೆಗೆ ದಿನಾಂಕ 08–06–2022 ರಂದು ರಾತ್ರಿ ಅಪರಿಚಿತ ಮುಸುಕುಧಾರಿ ವ್ಯಕ್ತಿಗಳು ಮನೆಗೆ ನುಗ್ಗಿ ತಂಗಪ್ಪನ್.ಕೆ.ಕೆ ಹಾಗೂ ಪತ್ನಿಯ ಮೇಲೆ ಹಲ್ಲೆ ನಡೆಸಿ, ಬೆದರಿಸಿ ಮನೆಯಲ್ಲಿದ್ದ ಅಂದಾಜು ನಗದು 2,00,000 ರೂ. ಹಾಗೂ ಪತ್ನಿಯ ಕುತ್ತಿಗೆಯಲ್ಲಿದ್ದ 8 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿದ್ದು, ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವ ಸಲುವಾಗಿ ಮಹೇಶ್ ಕುಮಾರ್, ಡಿಎಪಿ, ಮಡಿಕೇರಿ ಉಪವಿಭಾಗ, ರಾಜು.ಪಿ.ಕೆ. ಸಿಪಿಐ, ಮಡಿಕೇರಿ ನಗರ ವೃತ್ತ, ರಾಘವೇಂದ್ರ ಪಿಎಸ್ಐ ಮತ್ತು ಹಾಲಪ್ಪ ಆರ್.ಎಸ್, ಪಿಎಸ್ಐ (ಅಪರಾಧ) ಹಾಗೂ ಸಿದ್ದಾಪುರ ಠಾಣೆ ಸಿಬ್ಬಂದಿ ಮತ್ತು ಡಿಸಿಆರ್‌ಬಿ ಹಾಗೂ ತಾಂತ್ರಿಕ ಸಿಬ್ಬಂದಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ಕೈಗೊಂಡು ವೈಜ್ಞಾನಿಕ ಸಾಕ್ಷ್ಯಾಧರ (Scientific Evidence) ಗಳಿಂದ ಆರೋಪಿಗಳ ಸುಳಿವು ಸಿಕ್ಕಿದ್ದು, ವಿಶೇಷಾ ತನಿಖಾ ತಂಡವು ಆರೋಪಿಗಳನ್ನು ಬಂಧಿಸಿತು.

ಲವಕುಮಾರ್ ಎಂ.ಕೆ.(51), ಚನ್ನಂಗಿ, ವಿನೋದ್‌ಹೆಚ್.ಸಿ.(45), ಅಟ್ಟೂರು. ಅನೀಶ್ ಪಿ.ಎಸ್.(33), ಅಯ್ಯಪ್ಪ ಬೆಟ್ಟ, ವಿರಾಜಪೇಟೆನಗರ. ಪ್ರವೀಣ್ ಕುಮಾರ್(46), ಅಟ್ಟೂರು. ರಫೀಕ್ ಕೆ.ಈ.(45), ಭದ್ರಗೋಳ ಅವರುಗಳನ್ನು ಬಂಧಿಸಲಾಗಿದ್ದು, ಅವರಿಂದ 1.7.9 ಗ್ರಾಂ ಚಿನ್ನದ ಸರ ಹಾಗೂ 60,000 ರೂ. ಹಾಗೂ ಕೃತ್ಯಕ್ಕೆ ಬಳಸಿದ ವಾಹನ ಮಾರುತಿ 800 ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಇಂದು ಕಸಾಪದ 110ನೇ ಸಂಸ್ಥಾಪನಾ ದಿನಾಚರಣೆ

ಮಡಿಕೇರಿ: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 110ನೇ ಸಂಸ್ಥಾಪನಾ ದಿನಾಚರಣೆಯು ಮೇ 5 ರಂದು ಮಧ್ಯಾಹ್ನ 3 ಗಂಟೆಗೆ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿ ಆವರಣದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕೆ.ಆರ್.ನಗರ ಸಂತ ಅಂತೋಣಿ ಪ್ರೌಢಶಾಲೆಯ ಅಧ್ಯಾಪಕ ವಿಲ್‌ಫ್ರಡ್ ಕ್ರಾಸ್ತಾ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಕೊಡಗು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಟಿ.ಜಿ.ಪ್ರೇಮ್ ಕುಮಾರ್, ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್,ಇತರರು ಪಾಲ್ಗೊಳ್ಳಲಿದ್ದಾರೆ.

ದೇವಟ್ ಪರಂಬು ಸ್ಮಾರಕದಲ್ಲಿ ಕೊಡವ ಸಿಎನ್‌ಸಿ ಶ್ರದ್ಧಾಂಜಲಿ



ಮಡಿಕೇರಿ,ಮೇ4– ಕುತಂತ್ರದಿಂದ ಕೊಡವರ ಹತ್ಯೆಯಾದ ದೇವಟ್ ಪರಂಬು ಸ್ಮಾರಕ ಪ್ರದೇಶದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಾಸಿಕ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ದೇವಟ್ ಪರಂಬುವಿಗೆ ತೆರಳಿದ ಪ್ರಮುಖರು ಹಿರಿಯರಿಗೆ ಪುಷ್ಪನಮನ ಸಲ್ಲಿಸಿ ಕೊಡವ ಲ್ಯಾಂಡ್ ಪರ ಹಕ್ಕೊತ್ತಾಯ ಮಂಡಿಸಿದರು. ಇದೇ ಸಂದರ್ಭ ಗಾಳಿಯಲ್ಲಿ ಗುಂಡು ಹಾರಿಸಿ ಹಿರಿಯರಿಗೆ ಗೌರವ ಅರ್ಪಿಸಿದರು.

ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು, ಆದಿಮಸಂಜಾತ ಕೊಡವ ಜನಾಂಗೀಯ ಬುಡಕಟ್ಟು ಜನಾಂಗಕ್ಕೆ ಎಸ್‌ಟಿ ಟ್ಯಾಗ್ ಕಲ್ಪಿಸಬೇಕು, ಕೊಡವ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆಯ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಂವಿಧಾನಿಕ ಖಾತ್ರಿ ಒದಗಿಸಬೇಕು, ಕೊಡವ ಸಾಂಪ್ರದಾಯಿಕ 'ಸಂಸ್ಕಾರ ಗನ್' ಹಕ್ಕಿಗೆ ಸಾಂವಿಧಾನಿಕ ಭದ್ರತೆ ನೀಡಬೇಕು, ಟಿಪ್ಪು ಸಂಚಿನಿಂದ ದೇವಟ್ ಪರಂಬುವಿನಲ್ಲಿ ನಡೆದ ನರಮೇಧದ ಸ್ಮರಣಾರ್ಥ ಅಂತರರಾಷ್ಟ್ರೀಯ ಸ್ಮಾರಕ ನಿರ್ಮಾಣ ಮಾಡಬೇಕು ಹಾಗೂ ಕೊಡವರ ನರಮೇಧವನ್ನು ವಿಶ್ವ ರಾಷ್ಟ್ರಸಂಸ್ಥೆ ಯುಎನ್‌ಓ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಈ ಹಕ್ಕುಗಳು ಶೀಘ್ರ ಈಡೇರಲಿ ಎಂದು ಹಿರಿಯರಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿದರು. ಪ್ರಮುಖರಾದ ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್, ಪುಟ್ಟಿಚಂಡ ದೇವಯ್ಯ, ಪುದಿಯೊಕ್ಕಡ ಕಾಶಿ, ಸುಳ್ಳಿಮಾಡ ಸುತನ್, ಸುಳ್ಳಿಮಾಡ ನಾಣಯ್ಯ, ಅರೆಯಡ ಸಾವನ್ ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

ಕೆನರಾ ಬ್ಯಾಂಕ್ ವಿಲೀನ ಖಂಡಿಸಿ ಯರಿಯೂರು ಗ್ರಾಮಸ್ಥರ ಪ್ರತಿಭಟನೆ



ಯಳಂದೂರು ತಾಲೂಕಿನ ಯರಿಯೂರು ಗ್ರಾಮದ ಕೆನರಾ ಬ್ಯಾಂಕ್ ಶಾಖೆಯನ್ನು ಯಳಂದೂರು ಪಟ್ಟಣದ ಶಾಖೆಗೆ ವಿಲೀನಗೊಳಿಸುತ್ತಿರುವ ಪ್ರಕ್ರಿಯೆಯನ್ನು ಖಂಡಿಸಿ ಗ್ರಾಮಸ್ಥರು ಹಾಗೂ ಗ್ರಾಹಕರು ಶನಿವಾರ ಬ್ಯಾಂಕಿನ ಮುಂಭಾಗ ಪ್ರತಿಭಟನೆ ನಡೆಸಿದರು.

ಯಳಂದೂರು, ಮೇ 4– ತಾಲೂಕಿನ ಯರಿಯೂರು ಗ್ರಾಮದಲ್ಲಿರುವ ಕೆನರಾ ಬ್ಯಾಂಕನ್ನು ಯಳಂದೂರು ಪಟ್ಟಣದ ಶಾಖೆಗೆ ವಿಲೀನಗೊಳಿಸುತ್ತಿರುವ ಕ್ರಮವನ್ನು ಖಂಡಿಸಿ ಯರಿಯೂರು ಗ್ರಾಮಸ್ಥರು ಹಾಗೂ ಬ್ಯಾಂಕಿನ ಗ್ರಾಹಕರು ಶನಿವಾರ ಬ್ಯಾಂಕಿನ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮುಖಂಡ ಜೆ. ಮಹೇಶ್ ಮಾತನಾಡಿ, 2017 ರಲ್ಲಿ ಆರ್‌ಬಿಐ ನಿಯಮಗಳಿಗನುಸಾರವಾಗಿ ಯರಿಯೂರು ಗ್ರಾಮದಲ್ಲಿ ಸಿಂಡಿಕೇಟ್ ಬ್ಯಾಂಕ್ ಸ್ಥಾಪನೆಯಾಯಿತು. ಈ ಬ್ಯಾಂಕ್ ಆರಂಭಗೊಂಡ ನಂತರ ಇಲ್ಲಿ ಉತ್ತಮ ವಹಿವಾಟು ನಡೆಸುತ್ತಿದೆ. 2 ಸಾವಿರ ಗ್ರಾಹಕರನ್ನು ಬ್ಯಾಂಕ್ ಹೊಂದಿದ್ದು, ಕೇಂದ್ರ ಸರ್ಕಾರ ಹಲವು ಬ್ಯಾಂಕ್‌ಗಳನ್ನು ವಿಲೀನಗೊಳಿಸಿದ ನಂತರ ಈ ಬ್ಯಾಂಕ್ ಕೆನರಾ ಬ್ಯಾಂಕಾಗಿ ಪರಿವರ್ತನೆಗೊಂಡಿತು ಎಂದರು.

ಈಗ ಇದ್ದಕ್ಕಿದ್ದಂತೆ ಈ ಬ್ಯಾಂಕನ್ನು ಪಟ್ಟಣದಲ್ಲಿರುವ ಕೆನರಾ ಬ್ಯಾಂಕ್ ಶಾಖೆಗೆ ವಿಲೀನಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಸರ್ಕಾರದ ಅನೇಕ ಯೋಜನೆಗಳ ಹಣ ಬ್ಯಾಂಕಿಗೆ ನೇರವಾಗಿ ವರ್ಗಾವಣೆಯಾಗುವುದರಿಂದ ಪ್ರತಿನಿತ್ಯ ನೂರಾರು ಗ್ರಾಹಕರು ಬ್ಯಾಂಕಿಗೆ ಎಡತಾಕುತ್ತಾರೆ. ಗ್ರಾಮೀಣ ಭಾಗದಲ್ಲಿ ಬ್ಯಾಂಕ್ ಇರುವುದರಿಂದ ವಹಿವಾಟು ಸುಲಭವಾಗುತ್ತದೆ. ಆದರೆ ಇದನ್ನು ವಿಲೀನಗೊಳಿಸಿದರೆ ಪಟ್ಟಣಕ್ಕೆ ತೆರಳಿ ಅಲ್ಲಿ ವ್ಯವಹಾರ ಮಾಡಲು ವಿಳಂಬವಾಗುತ್ತದೆ. ಅಲ್ಲದೆ ಗ್ರಾಹಕರ ಸಂಖ್ಯೆ ಅಧಿಕವಾಗುವುದರಿಂದ ಗಂಟೆ ಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಗ್ರಾಮೀಣ ಕೂಲಿ ಕಾರ್ಮಿಕರು ತಮ್ಮ ಕೂಲಿಯನ್ನು ಬಿಟ್ಟು ಅರ್ಧ ದಿನವನ್ನು ಇದಕ್ಕೆ ಮೀಸಲಾಗಿಡುವ ಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲದೆ ವಯಸ್ಸಾದವರಿಗೆ ಹಾಗೂ ಮಹಿಳೆಯರು, ವಿಕಲಚೇತನರಿಗೆ ಇದರಿಂದ ಹೆಚ್ಚಿನ ತೊಂದರೆಯಾಗುತ್ತದೆ ಎಂದರು.

ಇಲ್ಲಿರುವ ಬ್ಯಾಂಕನ್ನು ಬೇರೆ ಬ್ಯಾಂಕ್‌ಗೆ ವಿಲೀನಗೊಳಿಸುತ್ತಿರುವ ಪ್ರಕ್ರಿಯೆಯನ್ನು ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳು ಕೈಬಿಡಬೇಕು. ಈ ಬಗ್ಗೆ ಲೀಡ್ ಬ್ಯಾಂಕ್ ಮ್ಯಾನೇಜರ್ ಹಾಗೂ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಲಾಗುವುದು. ಈ ಪ್ರಕ್ರಿಯೆಯನ್ನು ನಿಲ್ಲಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು. ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಇದನ್ನು ಇಲ್ಲಿ ಉಳಿಸಲು ಸಂಬಂಧಪಟ್ಟವರ ಜೊತೆ ಮಾತುಕತೆ ನಡೆಸಿ ಗ್ರಾಮೀಣರ ನೆರವಿಗೆ ನಿಲ್ಲಬೇಕು ಎಂದು ಮನವಿ ಮಾಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ರಮೇಶ್, ಗೋವಿಂದಶೆಟ್ಟಿ, ಆನಂದ್, ಅಂಗಡಿ ಮಹೇಶ್, ಮಹದೇವಶೆಟ್ಟಿ, ಜಯಣ್ಣ, ರತ್ನಮ್ಮ, ಮಹದೇವಮ್ಮ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಸದಸ್ಯರು, ಮಹಿಳಾ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಕೋರ್ಟ್ ಆದೇಶ: ಮಲೆಯೂರು ಪಿಎಸಿಸಿ ಬ್ಯಾಂಕ್‌ನಲ್ಲಿ ಗಿರವಿ ಇಟ್ಟಿದ್ದ ರೈತರ ಚಿನ್ನಾಭರಣ ವಾಪಸ್ ನೀಡಿದ ಡಿಸಿ

- ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಹೋರಾಟದ ಫಲ,
- ಜಿಲ್ಲಾಡಳಿತ ಮಧ್ಯಸ್ಥಿಕೆ
- ಪ್ರಥಮ ಹಂತದಲ್ಲಿ 37 ರೈತರಿಗೆ ಚಿನ್ನ ವಾಪಸ್



ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರು ಗಿರವಿ ಇಟ್ಟಿದ್ದ ಚಿನ್ನಾಭರಣಗಳನ್ನು 37 ಮಂದಿ ರೈತರಿಗೆ ಪ್ರಥಮ ಹಂತದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ವಾಪಸ್ ನೀಡಿದರು.

ಚಾಮರಾಜನಗರ, ಮೇ 4– ನ್ಯಾಯಾಲಯದ ಆದೇಶದ ಮೇರೆಗೆ ತಾಲೂಕಿನ ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರು ಗಿರವಿ ಇಟ್ಟಿದ್ದ ಚಿನ್ನಾಭರಣಗಳನ್ನು 37 ಮಂದಿ ರೈತರಿಗೆ ಪ್ರಥಮ ಹಂತದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ವಾಪಸ್ ನೀಡಿದರು.

ಮಲೆಯೂರು ಸಹಕಾರ ಸಂಘದಲ್ಲಿ 357 ಹೆಚ್ಚು ಮಂದಿ ರೈತರು ತಮ್ಮ ಚಿನ್ನಾಭರಣಗಳನ್ನು ಅಡಮಾನ ಮಾಡಿ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆದುಕೊಂಡಿದ್ದರು.

ಸಂಘದ ಕಾರ್ಯದರ್ಶಿ ನಾಗೇಂದ್ರ ಹಾಗೂ ಆಡಳಿತ ಮಂಡಳಿ ಸದಸ್ಯರು ರೈತರ ಚಿನ್ನಾಭರಣಗಳನ್ನು ಅಕ್ರಮವಾಗಿ ಬೇರೆ ಖಾಸಗಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಹಣಕ್ಕೆ ಗಿರಿವಿ ಇಟ್ಟು ವಂಚನೆ ಮಾಡಿದ್ದರು. ಹಣ ಕಟ್ಟಿರುವ ರೈತರಿಗೆ ಚಿನ್ನಾಭರಣ ವಾಪಸ್ ನೀಡದೆ ಸಬೂಬು ಹೇಳುತ್ತಿದ್ದರು. ಈ ಅಕ್ರಮದ ವಿರುದ್ಧ ಕಳೆದ ಒಂದೂವರೆ ವರ್ಷದಿಂದ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘವು ರೈತರೊಡಗೂಡಿ ನಿರಂತರ ಹೋರಾಟ ಮಾಡಲಾಗುತ್ತಿತ್ತು. ಇದರಿಂದ ಎಚ್ಚೆತ್ತುಕೊಂಡಿದ್ದ ಜಿಲ್ಲಾಡಳಿತ ಮಧ್ಯಸ್ಥಿಕೆ ವಹಿಸಿತ್ತು. ಇಂದು ನ್ಯಾಯಾಲಯದ ಆದೇಶದ ಮೇರೆಗೆ 37 ಮಂದಿಗೆ ರೈತರಿಗೆ ಚಿನ್ನಾಭರಣವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೀಡಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಮಾತನಾಡಿ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಸುಮಾರು ಒಂದೂವರೆ ವರ್ಷದ ನಿರಂತರ ಹೋರಾಟದಿಂದಾಗಿ ಜಿಲ್ಲಾಡಳಿತದ ಮಧ್ಯಸ್ಥಿಕೆಯಲ್ಲಿ, ನ್ಯಾಯಾಲಯ ಆದೇಶದ ಮೇರೆಗೆ ಮೊದಲ ಹಂತದಲ್ಲಿ 37 ಮಂದಿಗೆ ಚಿನ್ನವನ್ನು ವಾಪಸ್ ವಿತರಿಸಲಾಯಿತು. ಇದು ಸಂಘದ ಹೋರಾಟ ಫಲಶ್ರುತಿಯಾಗಿದೆ ಎಂದರು.

ಸಂಘದಿಂದ ಜಿಲ್ಲಾಡಳಿತಕ್ಕೆ ಅಭಿನಂದನೆ: ಸಹಕಾರಿ ಸಂಘಗಳು, ಬ್ಯಾಂಕ್‌ಗಳಲ್ಲಿ ಚಿನ್ನಾಭರಣ ಗಿರವಿ ಇಟ್ಟು ಮೋಸ ಹೋದ ಪ್ರಕರಣಗಳಲ್ಲಿ ಸಂಬಂಧಪಟ್ಟ ರೈತರಿಗೆ ಚಿನ್ನಾಭರಣ ವಾಪಸ್ ವಿರತಣೆ ಮಾಡಿರುವ ಜಿಲ್ಲಾಡಳಿಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ತಹಸೀಲ್ದಾರ್ ಬಸವರಾಜು, ಸಬ್‌ಇನ್‌ಸ್ಪೆಕ್ಟರ್ ಸಾಗರ್, ಎ.ಆರ್.ದಯಾನಂದ, ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಪ್ರಧಾನ ಕಾರ್ಯದರ್ಶಿ ಮಲೆಯೂರು, ಮಹೇಂದ್ರ, ಸತೀಶ್, ಜನ್ನೂರು ಕಾಂತರಾಜು, ಉಡಿಗಾಲ ಮಂಜುನಾಥ್, ಕೀಳಲಿಪುರ ಶ್ರೀಕಂಠ, ಅರಳೀಕಟ್ಟೆ ಪ್ರಭುಸ್ವಾಮಿ ಇತರರು ಹಾಜರಿದ್ದರು.

ನಗರದ ಎಪಿಎಂಸಿಯಲ್ಲಿ ಒಣ ಮೇವು ಮಾರಾಟ

ಚಾಮರಾಜನಗರ: ಚಾಮರಾಜನಗರದ ಎಪಿಎಂಸಿ ಆವರಣದಲ್ಲಿ ಒಣ ಮೇವು ಲಭ್ಯತೆ ಇದ್ದು, ಮೇವಿನ ಕೊರತೆವುಳ್ಳ ರೈತರು (ನೀರಾವರಿ ಸೌಲಭ್ಯ ಹೊಂದಿರುವ ರೈತರು ಹಾಗೂ ಪಶು ಪಾಲನಾ ಇಲಾಖೆಯಿಂದ ಮೇವಿನ ಕಿರುಪೊಟ್ಟಣ ತೆಗೆದುಕೊಂಡ ರೈತರನ್ನು ಹೊರತುಪಡಿಸಿ) ಆಧಾರ್ ಕಾರ್ಡ್, ಎಫ್‌ಐಡಿ ಸಂಖ್ಯೆ ಹಾಗೂ 5 ರಾಸುಗಳಿಗೆ ಒಳಪಟ್ಟು ಕಿವಿ ಓಲೆ ಸಂಖ್ಯೆಯೊಂದಿಗೆ ಎಲ್ಲಾ ದಾಖಲಾತಿಗಳನ್ನು ಒದಗಿಸಿ 1 ಕೆಜಿಗೆ 2 ರೂ. ನಂತೆ ಹಣ ನೀಡಿ ಮೇವನ್ನು ಪಡೆಯಬಹುದು ಎಂದು ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 18ರಿಂದ ಇಲ್ಲಿಯವರೆಗೆ 39,270 ಕೆ.ಜಿ ಒಣ ಜೋಳದ ಕಡ್ಡಿ ಮೇವನ್ನು ಅವಶ್ಯಕತೆ ಇರುವ ಚಾಮರಾಜನಗರ ತಾಲೂಕಿನ ರೈತರಿಗೆ ನೀಡಲಾಗಿದ್ದು, ಮೇವಿಲ್ಲದೆ ಜಾನುವಾರುಗಳನ್ನು ಮಾರಾಟ ಮಾಡುತ್ತಿರುವುದು ಹಾಗೂ ಮರಣ ಹೊಂದಿರುವುದು ಕಂಡು ಬಂದಲ್ಲಿ ಕಂಟ್ರೋಲ್ ರೂಂ ಸಂಖ್ಯೆ– 1077 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಪಶು ಆಸ್ಪತ್ರೆ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ಪುಣ್ಯದ ಕೆಲಸ

ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ

ಚಾಮರಾಜನಗರ, ಮೇ 4– ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ಒಂದು ಪುಣ್ಯದ ಕೆಲಸವಾಗಿದೆ. ಶೋಷಿತ ಸಮುದಾಯಗಳಿಗೆ ಸರ್ಕಾರ ಸವಲತ್ತು ತಲುಪಿಸಿದ ಆತ್ಮತೃಪ್ತಿ ಸಿಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ ತಿಳಿಸಿದರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಯೋನಿವೃತ್ತಿ ಹೊಂದಿದ್ದ ಅವರಿಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಆಯೋಜನೆ ಮಾಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಸಂವಿಧಾನ ರಚನೆ ಮಾಡುವ ಜೊತೆಗೆ ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಬಯಸಿ, ಸರ್ಕಾರ ಯೋಜನೆಗಳು ಪ್ರತಿಯೊಬ್ಬರಿಗೂ ತಲುಪಬೇಕೆಂಬ ಆಶಯವನ್ನು ಹೊಂದಿದ್ದರು. ಇದರ ಫಲವಾಗಿ ಸಮಾಜ ಕಲ್ಯಾಣ ಮೂಲಕ ಶೋಷಿತ ಸಮುದಾಯಗಳ ಏಳಿಗೆಗೆ



ಅನೇಕ ಯೋಜನೆಗಳನ್ನು ಜಾರಿಯಾದವು. ಇಂಥ ಬಹಳಷ್ಟು ಯೋಜನೆಗಳನ್ನು ಶೋಷಿತ ಸಮುದಾಯಗಳಿಗೆ ತಲುಪಿಸಿದ ತೃಪ್ತಿ ಇದೆ. ಈ ಹಿಂದೆ ಇದ್ದ ಬಹಳಷ್ಟು ಯೋಜನೆಗಳು ಈಗ ಕಡಿತಗೊಂಡಿವೆ. ಆಗ ಇದ್ದ ಯೋಜನೆಗಳು ಹಾಗೂ ಸವಲತ್ತುಗಳು ಪರಿಪೂರ್ಣವಾಗಿ ಇಲಾಖೆಯ ಮುಖಾಂತರ ಅರ್ಹ ಫಲಾನುಭವಿಗಳಿಗೆ ತಲುಪಿತ್ತು ಎಂದರು.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಚಿಕ್ಕಬಸವಯ್ಯ ಅವರ ಸೇವೆ ಅನನ್ಯ. ಇಲಾಖೆಯಲ್ಲಿ ಬಹಳ ಅನುಭವ ಹೊಂದಿದ್ದ ಅವರಲ್ಲಿದ್ದ ಸಹನೆ ಹಾಗೂ ತಾಳ್ಮೆ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚಿಕ್ಕಬಸಯ್ಯ ಅವರನ್ನು ಇಲಾಖೆಯ ಪರವಾಗಿ ನೌಕರರು ಚಿನ್ನದ ಸರ ನೆನಪಿನ ಕಾಣಿಕೆ ನೀಡಿ, ಶಾಲುಹೊದಿಸಿ ಅಭಿನಂದಿಸಿ, ಆತ್ಮೀಯವಾಗಿ ಬೀಳ್ಕೊಟ್ಟರು. ದಲಿತಪರ ಸಂಘಟನೆಗಳ ಮುಖಂಡರು ಸನ್ಮಾನಿಸಿ, ಚಿಕ್ಕಬಸವಯ್ಯ ಅವರ ಗುಣಗಾನ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡಗಳ ಇಲಾಖೆಯ ಉಪ ನಿರ್ದೇಶಕಿ ಮಂಜುಳಾ, ಪೌರಾಯುಕ್ತ ರಾಮದಾಸ್, ತಾಪಂ ಇಓ ಕೃಷ್ಣಪ್ಪ, ಸಹಾಯಕ ನಿರ್ದೇಶಕರಾದ ಗುಂಡ್ಲುಪೇಟೆಯ ಮೋಹನ್‌ಕುಮಾರ್, ಯಳಂದೂರು ರಾಜೇಶ್, ದಲಿತ ಸಂಘಟನೆಗಳ ಮುಖಂಡರಾದ ಬಸವನಪುರ ರಾಜಶೇಖರ್, ಅರಕಲವಾಡಿ ನಾಗೇಂದ್ರ, ಕೆ.ಎಂ. ನಾಗರಾಜು, ಸಿ.ಎಂ.ಶಿವಣ್ಣ, ಸಿ.ಎಂ.ಕೃಷ್ಣಮೂರ್ತಿ, ಬ್ಯಾಡಮೂಡ್ಲು ಬಸವಣ್ಣ, ಆಲೂರು ನಾಗೇಂದ್ರ, ಹಾಗೂ ಜಿಲ್ಲೆಯ ತಾಲೂಕು ವ್ಯಾಪ್ತಿಯ ನಿಲಯ ಪಾಲಕರು, ಅಧಿಕಾರಿಗಳು ಮತ್ತು ನೌಕರರರು ಇದ್ದರು.

ಮೇ 8 ರಂದು ಹನೂರಿಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಸಾರ್ವಜನಿಕರಿಂದ ದೂರು ಸ್ವೀಕಾರ

ಚಾಮರಾಜನಗರ, ಮೇ 4– ಲೋಕಾಯುಕ್ತ ಅಧಿಕಾರಿಗಳು ಮೇ 8 ರಂದು ಹನೂರು ತಾಲೂಕು ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಪ್ರವಾಸಿಮಂದಿರದಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಕ್ಕೆ ಲಂಚದ ಬೇಡಿಕೆ, ಅಕ್ರಮ ಆಸ್ತಿಗಳಿಕೆ ಬಗ್ಗೆ ಮಾಹಿತಿ, ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸಗಳ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ಲೋಕಾಯುಕ್ತ ಕಾಯ್ದೆಯಡಿ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ನೀಡಬಹುದು.

ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನ್ನ ಹಾಕಿದ ಮನೆಗೆ ಮರಿತಿಬ್ಬೇಗೌಡ ದ್ರೋಹ

ಜೆಡಿಎಸ್ ಮುಖಂಡ ವಿವೇಕಾನಂದ ವಾಗ್ದಾಳಿ



ಮೈಸೂರು, ಮೇ 4– ರಾಜಕೀಯ ಲೆಕ್ಕಾಚಾರದೊಂದಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ಟೀಕಿಸುತ್ತಿರುವ ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರಿಗೆ ಈ ಬಾರಿ ಚುನಾವಣೆಯಲ್ಲಿ ಸೋಲು ಕಟ್ಟಿಟ್ಟ ಬುತ್ತಿ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಪ್ರಬಲ ಆಕಾಂಕ್ಷಿ ಕೆ.ವಿವೇಕಾನಂದ ಅಭಿಪ್ರಾಯಿಸಿದ್ದಾರೆ.

ಮರಿತಿಬ್ಬೇಗೌಡ ಜೆಡಿಎಸ್ ಪಕ್ಷದಿಂದ ಎರಡು ಬಾರಿ ಎಂಎಲ್‌ಸಿ ಆಗಿ, ವಿಧಾನ ಪರಿಷತ್ ಉಪ ಸಭಾಪತಿ ಆಗಿದ್ದವರು. ಆದರೆ ಎಲ್ಲಾ ಅಧಿಕಾರ ಅನುಭವಿಸಿ ಈಗ ಅನ್ನ ತಿಂದ ಮನೆಗೆ ದ್ರೋಹ ಬಗೆಯುತ್ತಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮತ್ತು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆ ವೇಳೆ ಮಂಡ್ಯದಲ್ಲಿ ಹಾಲು ಕೊಡುತ್ತೀರೋ ಅಥವಾ ವಿಷ ಕೊಡುತ್ತೀರೋ ನೀವೇ ತೀರ್ಮಾನಿಸಿ ಎಂದು ಕುಮಾರಸ್ವಾಮಿ ಅವರು ಜನರಿಗೆ ಹೇಳಿದ್ದನ್ನು ಮರಿತಿಬ್ಬೇಗೌಡ ವ್ಯಂಗ್ಯವಾಡಿದ್ದಾರೆ.

ಮರಿತಿಬ್ಬೇಗೌಡರಿಗೆ ತಮ್ಮನ್ನು ರಾಜಕೀಯವಾಗಿ ಬೆಳೆಸಿದ ದೇವೇಗೌಡರು ಮತ್ತು ಕುಮಾರಸ್ವಾಮಿ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ನೈತಿಕತೆ ಇದ್ದಿದ್ದರೆ ಹಿಂದಿನ ಪದವೀಧರರ ಕ್ಷೇತ್ರದ ಚುನಾವಣೆ ವೇಳೆ ಕಾಂಗ್ರೆಸ್ ಪರ ಪ್ರಚಾರ ಮಾಡುವ ಮುನ್ನ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು. ಆದರೆ ಜೆಡಿಎಸ್ ಪಕ್ಷದಲ್ಲೇ ಇದ್ದುಕೊಂಡು ಅಧಿಕಾರ ಅನುಭವಿಸಿ, ಅಧಿಕಾರಾವಧಿಯ ಅಂತಿಮ ಘಳಿಗೆಯಲ್ಲಿ ರಾಜೀನಾಮೆ ನೀಡಿದ್ದಾರೆ. ಅಧಿಕಾರದ ಆಸೆಗೆ ಪಕ್ಷಾಂತರ ಮಾಡಿ, ಬೆಳೆಸಿದವರನ್ನೇ ಟೀಕಿಸುತ್ತಿರುವ ಸ್ವಾರ್ಥ ರಾಜಕಾರಣವನ್ನು ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಈ ಬಾರಿ ತಕ್ಕ ಪಾಠ ಕಲಿಸುತ್ತಾರೆ ಎಂದು ವಿವೇಕಾನಂದ ಕಿಡಿಕಾರಿದ್ದಾರೆ.

ವಿದ್ಯುತ್ ಸ್ಪರ್ಶ; ಹಸು ಸಾವು

ಮೈಸೂರು, ಮೇ 4(ಎಸ್‌ಬಿಡಿ)– ಬಿರುಗಾಳಿ ಸಹಿತ ಮಳೆ ಪರಿಣಾಮ ನಿನ್ನೆ ವಿದ್ಯುತ್ ಪ್ರವಹಿಸಿ ಹಸುವೊಂದು ಸಾವಿನ ದವಡೆಗೆ ಸಿಲುಕಿ ಅದೃಷ್ಟವಶಾತ್ ಪಾರಾದ ಸ್ಥಳದಲ್ಲೇ ಇಂದು ಬೇರೊಂದು ಹಸು ಸಾವನ್ನಪ್ಪಿದೆ.



ಅಗ್ರಹಾರದ ರಾಮಾನುಜ ರಸ್ತೆ, 12ನೇ ಕ್ರಾಸ್‌ನಲ್ಲಿ ನಿನ್ನೆ ರಾತ್ರಿ ವಿದ್ಯುತ್ ಕಂಬದ ಬಳಿ ಹೋದ ಹಸುವೊಂದು ನೆಲಕ್ಕುರುಳಿ ಒದ್ದಾಡುತ್ತಿತ್ತು. ಇದನ್ನು ಗಮನಿಸಿದ ಸ್ಥಳೀಯರು ವಿದ್ಯುತ್ ಪ್ರವಹಿಸಿರಬಹುದು ಎಂದು ತಿಳಿದು ಸೆಸ್ಕ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ತಕ್ಷಣ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಹಸು ಚೇತರಿಸಿಕೊಂಡು ಸಾವಿನಿಂದ ಪಾರಾಯಿತು.

ಆದರೆ ಅದೇ ಸ್ಥಳದಲ್ಲಿ ಶನಿವಾರ ಬೆಳಗ್ಗೆ ಬೇರೊಂದು ಹಸು ಅಸುನೀಗಿದೆ. ವಿದ್ಯುತ್ ಅವಘಡದಿಂದಲೇ ಹಸು ಸಾವನ್ನಪ್ಪಿದೆ ಎಂದು ಸ್ಥಳೀಯರು ಹೇಳಿದ್ದಾರೆ. ನೂರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿರುವುದರಿಂದ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಒತ್ತಡದಲ್ಲಿದ್ದಾರೆ. ಹಾಗಾಗಿ ನಿನ್ನೆ ಮಾಹಿತಿ ನೀಡಿದ್ದರಿಂದ ತಕ್ಷಣ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರಾದರೂ ಪರಿಹಾರ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಿರುವುದಾಗಿ ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ರೇವಣ್ಣ ಬಂಧನ

ಇತ್ತ ದೇವೇಗೌಡರ ಮನೆಯನ್ನು ಎಸ್‌ಐಟಿ ಅಧಿಕಾರಿಗಳ ತಂಡ ಸುತ್ತುವರಿದಿತ್ತು. ಮತ್ತೊಂದೆಡೆ ಎಸ್‌ಐಟಿಗೆ ಸಹಕರಿಸಲು ಗುಪ್ತದಳ ಪೊಲೀಸರು ಕೂಡ ದೇವೇಗೌಡರ ನಿವಾಸದ ಮೇಲೆ ನಿಗಾ ವಹಿಸಿದ್ದರು. ಮಧ್ಯಂತರ ನಿರೀಕ್ಷಣಾ ಜಾಮೀನು ನಿರಾಕರಿಸಿ ನ್ಯಾಯಾಧೀಶರು ಆದೇಶ ನೀಡಿದ ಮಾಹಿತಿ ತಿಳಿಯುತ್ತಿದ್ದಂತೆಯೇ ಕೆಲವೇ ನಿಮಿಷದಲ್ಲಿ 2 ಕಾರುಗಳಲ್ಲಿ ಆಗಮಿಸಿದ ಎಸ್‌ಐಟಿ ಅಧಿಕಾರಿಗಳ ತಂಡ ದೇವೇಗೌಡರ ಮನೆ ಬಾಗಿಲು ಬಡಿಯಿತು. ಎಸ್‌ಐಟಿ ಅಧಿಕಾರಿಗಳ ತಂಡವಿದ್ದ ಕಾರುಗಳು ದೇವೇಗೌಡರ ನಿವಾಸಕ್ಕೆ ಬಂದ ಕ್ಷಣದಿಂದಲೇ ಎಸ್‌ಐಟಿಯ ಮಹಿಳಾ ಸಿಬ್ಬಂದಿಯೋರ್ವರು ಘಟನಾವಳಿಗಳನ್ನು ವಿಡಿಯೋ ಚಿತ್ರೀಕರಣ ಮಾಡಲಾರಂಭಿಸಿದರು. ದೇವೇಗೌಡರ ನಿವಾಸದ ಮುಂದೆ ಇದ್ದ ಅವರ ಭದ್ರತಾ ಅಧಿಕಾರಿಗಳಿಗೆ ಎಸ್‌ಐಟಿ ಅಧಿಕಾರಿಗಳು ತಾವು ಬಂದಿರುವ ಮಾಹಿತಿ ನೀಡಿ, ಬಾಗಿಲಲ್ಲೇ ಸುಮಾರು 15 ನಿಮಿಷಗಳ ಕಾಲ ಕಾದ ಬಳಿಕ ರೇವಣ್ಣ ಸ್ವತಃ ತಾವೇ ಬಾಗಿಲು ತೆರೆದು ಮನೆಯಿಂದ ಹೊರಬಂದಾಗ ಅವರಿಗೆ ಬಂಧನದ ವಿಚಾರ ತಿಳಿಸಿ ಅವರನ್ನು ತಮ್ಮ ಕಾರಿನಲ್ಲಿ ವಿಧಾನ ಸೌಧ ಬಳಿ ಇರುವ ಕಾರ್ಲ್‌ಟನ್ ಭವನದ ಎಸ್‌ಐಟಿ ಕಚೇರಿಗೆ ಕರೆದೊಯ್ದರು.

ಇತ್ತ ರೇವಣ್ಣರ ಬಂಧಿಸಿ, ಅಧಿಕಾರಿಗಳು ಅವರನ್ನು ಕರೆತರುತ್ತಿದ್ದಾರೆ ಎಂಬ ಮಾಹಿತಿ ರವಾನೆಯಾಗುತ್ತಿದ್ದಂತೆಯೇ ಅಲರ್ಟ್ ಆದ ಹೈಗ್ರೌಂಡ್ ಠಾಣೆ ಪೊಲೀಸರು, ಎಸಿಪಿ, ಇಬ್ಬರು ಇನ್ಸ್‌ಪೆಕ್ಟರ್, ಐವರು ಸಬ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ 50 ಸಿವಿಲ್ ಸಿಬ್ಬಂದಿ ಹಾಗೂ ಒಂದು ಕೆಎಸ್‌ಆರ್‌ಪಿ ತಂಡದೊಂದಿಗೆ ಕಾರ್ಲ್‌ಟನ್ ಭವನದ ಮುಂದೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಭಾರೀ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು. ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ತಮ್ಮ ತನಿಖಾಧಿಕಾರಿ, ಎಡಿಜಿಪಿ ಬಿ.ಕೆ. ಸಿಂಗ್ ಮುಂದೆ ಹಾಜರುಪಡಿಸಿದರು. ಇದೇ ವೇಳೆ ಕಾರ್ಲ್‌ಟನ್ ಭವನಕ್ಕೆ ವೈದ್ಯರ ಸಮೇತ ಆಂಬುಲೆನ್ಸ್ ಕರೆಸಿದ್ದು, ರೇವಣ್ಣ ಅವರ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಕರೆದೊಯ್ಯಲು ಕರೆತರಲಾಗಿದೆ ಎಂದು ಮೂಲವೊಂದು ತಿಳಿಸಿದರೆ, ಮತ್ತೊಂದು ಮೂಲದ ಪ್ರಕಾರ ರೇವಣ್ಣ ಆರೋಗ್ಯ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಆಂಬುಲೆನ್ಸ್‌ನಲ್ಲಿ ವೈದ್ಯರ ತಂಡವನ್ನು ಕರೆತರಲಾಗಿದೆ ಎಂದು ಹೇಳಲಾಗಿದೆ.

ರಾತ್ರಿ ವೇಳೆಗೆ ಎಸ್‌ಐಟಿ ಅಧಿಕಾರಿಗಳು ಬೌರಿಂಗ್ ಆಸ್ಪತ್ರೆಗೆ ರೇವಣ್ಣ ಅವರನ್ನು ಕರೆದೊಯ್ದು ಆರೋಗ್ಯ ತಪಾಸಣೆ ನಡೆಸಿದ ನಂತರ ತಮ್ಮ ಕಚೇರಿಗೆ ವಾಪಸ್ ಕರೆತಂದರು.

ಹಿನ್ನೆಲೆ: ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್‌ಗಳಲ್ಲಿನ ದೃಶ್ಯಗಳು ಹರಿದಾಡಲಾರಂಭಿಸಿದ ನಂತರ ಏಪ್ರಿಲ್ 28ರಂದು ಹೊಳೆನರಸೀಪುರ ಠಾಣೆಯಲ್ಲಿ ಹೆಚ್.ಡಿ. ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ವಿರುದ್ಧ ಸಂತ್ರಸ್ತ ಮಹಿಳೆಯೋರ್ವರು ದೂರು ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಏಪ್ರಿಲ್ 30ರಂದು ನಿರೀಕ್ಷಣಾ ಜಾಮೀನಿಗಾಗಿ ರೇವಣ್ಣ ಪರ ವಕೀಲರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಮೇ 2ರಂದು ಈ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಧೀಶರು, ಪ್ರಕರಣದಲ್ಲಿ ಯಾವುದೇ ಸೆಕ್ಷನ್ ಜಾಮೀನು ರಹಿತ ಇಲ್ಲ. ಹೀಗಾಗಿ ಅರ್ಜಿದಾರರು ನೇರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಬಹುದು. ಹೀಗಿರುವಾಗ ನಿರೀಕ್ಷಣಾ ಜಾಮೀನು ಅರ್ಜಿ ಅವಶ್ಯಕತೆ ಇತ್ತೇ? ಎಂದು ಪ್ರಶ್ನಿಸಲಾಗಿ ರೇವಣ್ಣ ವಕೀಲರು ಅರ್ಜಿಯನ್ನು ಹಿಂಪಡೆದಿದ್ದರು.

ಅದೇ ವೇಳೆ ಮೇ 2ರಂದು, ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಏಪ್ರಿಲ್ 29ರಂದು ರಾತ್ರಿ ಅಪಹರಿಸಿ, ಅಕ್ರಮ ಬಂಧನದಲ್ಲಿಡಲಾಗಿದೆ ಎಂದು ಆಕೆಯ ಪುತ್ರ, ಹೆಚ್.ಡಿ. ರೇವಣ್ಣ ಮತ್ತು ಸತೀಶ್ ಬಾಬಣ್ಣ ಎಂಬುವರ ವಿರುದ್ಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದ. ಇದು ಜಾಮೀನು ರಹಿತ ಪ್ರಕರಣವಾಗಿದ್ದ ಕಾರಣ ಮೇ 3ರಂದು ರೇವಣ್ಣ ಪರ ವಕೀಲರು ಈ ಪ್ರಕರಣದಲ್ಲಿ ಮಧ್ಯಂತರ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ಇಂದು ನಡೆದು ಸಂಜೆ ವೇಳೆಗೆ ನ್ಯಾಯಾಧೀಶರು ಮಧ್ಯಂತರ ಜಾಮೀನು ನೀಡಲು ನಿರಾಕರಿಸಿ ಅರ್ಜಿ ವಿಚಾರಣೆಯನ್ನು ಮೇ 6ಕ್ಕೆ ಮುಂದೂಡಿದರು.

ರೇವಣ್ಣ ಅವರ ಬಂಧನವಾಗಿರುವುದರಿಂದ ಅವರ ಪರವಾಗಿ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ಸಹಜವಾಗಿಯೇ ವಜಾಗೊಳ್ಳುತ್ತದೆ. ಹೀಗಾಗಿ ರೇವಣ್ಣ ಅವರಿಗೆ ಜಾಮೀನು ನೀಡುವಂತೆ ಅವರ ಪರ ವಕೀಲರು ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿದೆ.


ಸಂತ್ರಸ್ತೆ ಎಸ್‌ಐಟಿಯಿಂದ ರಕ್ಷಣೆ

ಈ ನಡುವೆ ಪ್ರಕರಣದ ಮೊದಲನೇ ಆರೋಪಿಯಾದ ಹೆಚ್.ಡಿ. ರೇವಣ್ಣ ಅವರು ನಿರೀಕ್ಷಣಾ ಜಾಮೀನಿಗಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಸಂತ್ರಸ್ತ ಮಹಿಳೆಯ ರಕ್ಷಣೆ ಕಾರ್ಯಾಚರಣೆಯಲ್ಲಿ ತೊಡಗಿದ್ದ ಎಸ್‌ಐಟಿ ತಂಡ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ. ರೇವಣ್ಣ ಬಳಿ ಈ ಹಿಂದೆ ಆಪ್ತ ಸಹಾಯಕನಾಗಿದ್ದ ರಾಜಶೇಖರ್ ಎಂಬಾತನ ಹುಣಸೂರು ತಾಲೂಕು ಕಾಳೇನಹಳ್ಳಿ ಗ್ರಾಮದ ತೋಟದ ಮನೆಗೆ ಇಂದು 2 ಕಾರುಗಳಲ್ಲಿ ಬಂದು ದಾಳಿ ನಡೆಸಿದರು. ಈ ವೇಳೆ ರಾಜಶೇಖರ್ ಪರಾರಿಯಾದನಾದರೂ ನಂತರ ಮುಂದುವರೆದ ಕಾರ್ಯಾಚರಣೆಯನ್ನು ಎಸ್‌ಐಟಿ ಅಧಿಕಾರಿಗಳು ಆತನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ. ತೋಟದ ಮನೆಯಲ್ಲಿದ್ದ ಮಹಿಳೆಯನ್ನು ಎಸ್‌ಐಟಿ ತಂಡ ರಕ್ಷಿಸಿ, ಕರೆದೊಯ್ದಿದೆ. ಈಕೆ ನೀಡಲಿರುವ ಹೇಳಿಕೆಯನ್ನಾಧರಿಸಿ ಪ್ರಕರಣ ಭಾರೀ ತಿರುವು ಪಡೆದುಕೊಳ್ಳಲಿದೆ ಎಂದು ಹೇಳಲಾಗಿದೆ.

ಕಳೆದ ಏಪ್ರಿಲ್‌ನಲ್ಲಿ ಇಬ್ಬರು ಮಕ್ಕಳನ್ನು ಕಾಡಿದ್ದ ಕಾಲರಾ!

ಸದ್ಯ ಸೂಕ್ತ ಚಿಕಿತ್ಸೆ ಮೂಲಕ ಇಬ್ಬರು ಗುಣಮುಖ



●ಪವನ್ ಮೂರ್ತಿ ಎಂ.ಬಿ.

ಮೈಸೂರು,ಮೇ 4 – ಕಳೆದ ಐದು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಯಾವುದೇ ಕಾಲರಾ ಪ್ರಕರಣಗಳು ಪತ್ತೆಯಾಗಿರಲಿಲ್ಲ. ಆದರೆ ಈ ವರ್ಷ ಏಪ್ರಿಲ್‌ನಲ್ಲಿ ಎರಡು ಪ್ರಕರಣಗಳು ಕಾಣಿಸಿಕೊಂಡು ಸೂಕ್ತ ಚಿಕಿತ್ಸೆ ಹಿನ್ನೆಲೆಯಲ್ಲಿ ಇಬ್ಬರೂ ಸೋಂಕಿನಿಂದ ಗುಣಮುಖರಾಗಿದ್ದಾರೆ.

ಕಾಲರಾ ತಡೆಗೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದು, ಇದಕ್ಕೆ ಪೂರಕವಾಗಿ ಸಾರ್ವಜನಿಕರು ಎಚ್ಚರ ವಹಿಸುವುದು ಅಗತ್ಯವಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಮಾಹಿತಿಯಂತೆ ಕಳೆದ ಐದು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಕಾಲರಾ ಸೋಂಕು ಪತ್ತೆಯಾಗಿರಲಿಲ್ಲ ಆದರೆ ಈ ವರ್ಷ ಪತ್ತೆಯಾದ ಎರಡು ಪ್ರಕರಣಗಳಲ್ಲಿ ಮಕ್ಕಳು ಈ ಸೋಂಕಿಗೆ ತುತ್ತಾಗಿ ಗುಣಮುಖಗೊಂಡಿದ್ದಾರೆ.

ಏ.7 ಮತ್ತು ಏ.10ರಂದು ಕ್ರಮವಾಗಿ 14 ವರ್ಷದ ಬಾಲಕಿ, 13 ವರ್ಷದ ಬಾಲಕನಲ್ಲಿ ಸೋಂಕು ಪತ್ತೆಯಾಗಿತ್ತು. ಇಬ್ಬರೂ ಕೆಆರ್ ಆಸ್ಪತ್ರೆಯ ಚೆಲುವಾಂಬ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಸೋಂಕಿನಿಂದ ಪಾರಾಗಿದ್ದಾರೆ. ಮೈಸೂರು ನಗರದ ಗಾಯತ್ರಿಪುರಂ ನಿವಾಸಿಯಾದ 14 ವರ್ಷದ ಬಾಲಕಿಗೆ ಭೇದಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಪ್ರಯೋಗಾಲಯದ ಪರೀಕ್ಷೆಯಲ್ಲಿ (ಮಲ ಮಾದರಿ ಪರೀಕ್ಷೆ) ಕಾಲರಾ ದೃಢಪಟ್ಟಿತ್ತು.

ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶದಲ್ಲಿ ಒಟ್ಟು 288 ಮನೆಗಳಲ್ಲಿ 863 ಮಂದಿಯನ್ನು ಸಂದರ್ಶಿಸಿದಾಗ, ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿರಲಿಲ್ಲ. ಆದಾಗ್ಯೂ ಇಲ್ಲಿ ಕಾಲರಾ ಬಗ್ಗೆ ಜಾಗೃತಿ ಮೂಡಿಸಲಾಯಿತು. ಜೊತೆಗೆ ಈ ಪ್ರದೇಶದ ಕುಡಿಯುವ ನೀರಿನ ಮೂಲಗಳನ್ನು ಪರೀಕ್ಷೆ ನಡೆಸಿದ್ದು, ಎಲ್ಲವೂ ಕುಡಿಯಲು ಯೋಗ್ಯವಾಗಿರುವುದು ದೃಢಪಟ್ಟಿತು ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಮತ್ತೊಂದು ಪ್ರಕರಣದಲ್ಲಿ ಹಂಚ್ಯಾ ಗ್ರಾಮದ 13 ವರ್ಷದ ಬಾಲಕನು ಭೇದಿ ಕಾರಣಕ್ಕೆ ಚೆಲುವಾಂಬ ಆಸ್ಪತ್ರೆಗೆ ದಾಖಲಾಗಿದ್ದ. ಪರೀಕ್ಷೆಯಲ್ಲಿ ಈತನಿಗೆ ಕಾಲರಾ ದೃಢಪಟ್ಟಿತ್ತು. ಆರೋಗ್ಯ ಇಲಾಖೆ ತಂಡವು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಪೈಪ್‌ಲೈನ್ ಒಂದರಲ್ಲಿ ಅಶುಚಿತ್ವ ಕಂಡು ಬಂದಿತ್ತು. ಸ್ಥಳೀಯ ಸಂಸ್ಥೆಯ ಮೂಲಕ ಇದನ್ನು ಸರಿಪಡಿಸಲಾಯಿತು. ಅಲ್ಲದೆ, ಗ್ರಾಮದಲ್ಲಿ ಜಾಗೃತಿ ಮೂಡಿಸಿ ಕುದಿಸಿದ ನೀರು ಸೇವಿಸುವಂತೆ ಇಲ್ಲವೇ ಗ್ರಾಮದ ಶುದ್ಧ ನೀರಿನ ಘಟಕದಲ್ಲಿನ ನೀರು ಬಳಸುವಂತೆ ಮಾಹಿತಿ ನೀಡಲಾಯಿತು. ಸಮೀಕ್ಷೆ ವೇಳೆ ಗ್ರಾಮದಲ್ಲಿ ಬೇರೆ ಯಾವುದೇ ಕಾಲರಾ ಪ್ರಕರಣ ಪತ್ತೆಯಾಗಿಲ್ಲ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿದವು.

ಹೆಚ್ಚು ಜಾಗರೂಕತೆ ವಹಿಸಿದ್ದೇವೆ...

ಕಳೆದ ಐದು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಯಾವುದೇ ಕಾಲರಾ ಪ್ರಕರಣಗಳು ಪತ್ತೆಯಾಗಿರಲಿಲ್ಲ. ಈ ಬಾರಿ ಎರಡು ಪ್ರಕರಣಗಳು ಪತ್ತೆಯಾಗುತ್ತಿದ್ದಂತೆ ಇಲಾಖೆ ಹೆಚ್ಚು ಜಾಗರೂಕತೆ ವಹಿಸಿದೆ. ಪ್ರಾರಂಭದಲ್ಲೇ ಪ್ರಕರಣಗಳನ್ನು ಗುರುತಿಸಲು ಕ್ರಮ ವಹಿಸಿದ್ದು, ಯಾವುದೇ ಕಾರಣಕ್ಕೂ ಸೋಂಕು ಹರಡದಂತೆ ತಡೆಯಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರು ನಗರ ಮತ್ತು ಇಡೀ ಜಿಲ್ಲೆಯಲ್ಲಿ ನೀರಿನ ಮೂಲಗಳನ್ನು ನಿರಂತರವಾಗಿ ಪರಿಶೀಲಿಸಲು ಕ್ರಮ ವಹಿಸಲಾಗಿದೆ. ಆ ಮೂಲಕ ನೀರಿನ ಮೂಲಗಳು ಶುದ್ಧವಾಗಿರುವಂತೆ ನಿಗಾ ವಹಿಸಲಾಗಿದೆ.

-ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿಗಳು, ಮೈಸೂರು.

ಕಾಲರಾ ತಡೆಗೆ ಮುನ್ನೆಚ್ಚರಿಕೆ ಕ್ರಮಗಳು: ಕುಡಿಯುವ ನೀರಿನ ಶುದ್ಧತೆ ಬಗ್ಗೆ ಎಚ್ಚರ ವಹಿಸಬೇಕು. ಚೆನ್ನಾಗಿ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಸೊಪ್ಪು, ತರಕಾರಿಗಳನ್ನು ಶುದ್ಧವಾಗಿ ನೀರಿನಿಂದ ಸ್ವಚ್ಛಗೊಳಿಸಿ ಸೇವಿಸಬೇಕು. ಶೌಚಾಲಯವನ್ನು ಬಳಸಿದ ನಂತರ ಹಾಗೂ ಆಹಾರವನ್ನು ತಯಾರಿಸುವ, ಸೇವಿಸುವ ಮೊದಲು ಸಾಬೂನು ಬಳಸಿ ಕೈಗಳನ್ನು ಚೆನ್ನಾಗಿ ತೊಳೆಯಬೇಕು. ಮನೆ ಆಹಾರ ಸೇವನೆಗೆ ಆದ್ಯತೆ ನೀಡಬೇಕು. ಹೊರಗಿನ ಆಹಾರವನ್ನು ಸೇವಿಸುವ ಮುನ್ನ ಶುಚಿತ್ವ ಖಾತ್ರಿಪಡಿಸಿಕೊಳ್ಳಲು ಎಚ್ಚರ ವಹಿಸಬೇಕು.

ದೇಹದಲ್ಲಿ ಬಳಲಿಕೆ ಕಂಡುಬಂದರೆ ಓಆರ್‌ಎಸ್, ಉಪ್ಪು ಬೆರೆಸಿದ ನಿಂಬೆ ಪಾನಕ, ಹೆಚ್ಚಿನ ಪ್ರಮಾಣದಲ್ಲಿ ನೀರು ಕುಡಿಯಬೇಕು. ಸೋರಿಕೆ ಇರುವ ಕೊಳಾಯಿ ನೀರನ್ನು ಕುಡಿಯಬಾರದು. ರಸ್ತೆಬದಿಗಳಲ್ಲಿ ಮಾರಾಟ ಮಾಡುವ ತಿನಿಸುಗಳನ್ನು ಸೇವಿಸುವ ಮುನ್ನ ಅದರ ಶುಚಿತ್ವ ಖಾತರಿಪಡಿಸಿಕೊಳ್ಳಬೇಕು. ಧೂಳು, ನೊಣ, ಜಿರಳೆಗಳು ಸೇರಿದಂತೆ ಇತರ ಕೀಟಗಳು ಮುತ್ತುವಂತೆ ತೆರೆದಿಟ್ಟಿರುವ ಆಹಾರ ಪದಾರ್ಥಗಳನ್ನು ಸೇವಿಸಬಾರದು.

ಭೇದಿ ಈ ಸೋಂಕಿನ ಮುಖ್ಯ ಲಕ್ಷಣ: "ಕಾಲರಾ ಎಂಬುದು ಬ್ಯಾಕ್ಟೀರಿಯಾ ಸೋಂಕಾಗಿದ್ದು, ಇದು 'ವಿಬ್ರಿಯೋ ಕಾಲರೇ' ಎಂದು ಕರೆಯಲ್ಪಡುವ ಬ್ಯಾಕ್ಟೀರಿಯಾ ಒಳಗೊಂಡ ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ಈ ಕಾಲರಾ ಸೋಂಕು ಉಂಟಾಗುತ್ತದೆ. ಇದನ್ನು ತಡೆಗಟ್ಟಲು ಆಹಾರ ಮತ್ತು ಕುಡಿಯುವ ನೀರಿನಲ್ಲಿ ಶುದ್ಧತೆ ಕಾಯ್ದುಕೊಳ್ಳುವುದೇ ಸುಲಭ ಮಾರ್ಗ. ಭೇದಿ ಈ ಸೋಂಕಿನ ಮುಖ್ಯ ಲಕ್ಷಣವಾಗಿದ್ದು, ಶೀಘ್ರವೇ ಸೂಕ್ತ ಚಿಕಿತ್ಸೆ ಕೊಡಿಸುವುದರಿಂದ ಪ್ರಾಣಾಪಾಯದಿಂದ ಪಾರಾಗಬಹುದು.

ಬೇಸಿಗೆಯಲ್ಲಷ್ಟೇ ಮಾತ್ರವಲ್ಲ, ವರ್ಷದ 365 ದಿನಗಳಲ್ಲೂ ಕಾಲರಾ ಕಾಣಿಸಿಕೊಳ್ಳಬಹುದು

ಡಾ.ಎಸ್.ಚಿದಂಬರ ಮಾಹಿತಿ

ಮೈಸೂರು, ಮೇ 4– ಕಾಲರಾ ಸೋಂಕು ಕೇವಲ ಬೇಸಿಗೆಯಲ್ಲೇ ಬರುತ್ತದೆ ಎಂದೇನಿಲ್ಲ. ವರ್ಷದ 365 ದಿನಗಳಲ್ಲಿ ಯಾವಾಗ ಬೇಕಾದರೂ ಬರಬಹುದು ಎಂದು ಚಾಮರಾಜನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕಾಲರಾ ಯಾರಿಗಾದರೂ ಇದ್ದರೆ ಅವರ ಮಲದಿಂದ ಸೋಂಕು ಹರಡುತ್ತದೆ. ನೀರಿಗೆ ಅವರ ಮಲದ ಅಂಶ ಸೇರಿದ್ದರೆ ಅದನ್ನು ಸೇವನೆ ಮಾಡಿದರೆ, ಅಂತಹವರಿಗೆ ಕಾಲರಾ ಸೋಂಕು ಬರಲಿದೆ ಎಂದು ಹೇಳಿದರು.

ಬೇಸಿಗೆ ಸಂದರ್ಭದಲ್ಲಿ ನೀರು ಕಲುಷಿತಗೊಳ್ಳುವ ಸಾಧ್ಯತೆ ಹೆಚ್ಚಿರುವ ಹಿನ್ನೆಲೆಯಲ್ಲಿ ಈ ಕಾಲದಲ್ಲಿ ಕಾಲರಾ ಕಾಣಿಸಿಕೊಳ್ಳುವುದು ಹೆಚ್ಚಾಗಿರುತ್ತದೆ. ಹಿಂದಿನ ದಿನಗಳನ್ನು ನೋಡಿದರೆ ಆಗ ಕೆರೆ ನೀರನ್ನು ಆಶ್ರಯಿಸುವುದೇ ಹೆಚ್ಚಿತ್ತು. ಬೇಸಿಗೆಕಾಲದಲ್ಲಿ ಕೆರೆಯಲ್ಲಿ ನೀರಿನ ಕೊರತೆ ಇರುತ್ತಿತ್ತು. ಮಲ ವಿಸರ್ಜನೆ ನಂತರ ಕೆರೆಯಲ್ಲಿ ಶುಚಿ ಮಾಡಿಕೊಳ್ಳುವ ಅಭ್ಯಾಸ ರೂಢಿಯಲ್ಲಿತ್ತು. ಹಾಗಾಗಿ ಈ ನೀರನ್ನು ಬಾಯಿ ತೊಳೆಯಲು, ಸೇವಿಸಲು ಉಪಯೋಗಿಸಿದಾಗ, ಕಾಲರಾ ಸೋಂಕು ಹರಡುತ್ತಿತ್ತು. ಪೈಪ್‌ಲೈನ್ ವ್ಯವಸ್ಥೆ ಬಂದ ಮೇಲೆ ಸೋಂಕು ಕಾಣಿಸಿಕೊಳ್ಳಲು ಅವಕಾಶ ಇರಲಿಲ್ಲ (ಪೈಪ್‌ಲೈನ್ ಸೋರಿಕೆ ಮೂಲಕ ಕಲುಷಿತ ನೀರು ಮಿಶ್ರಣಗೊಳ್ಳದಿದ್ದರೆ). ಆದರೆ ಈ ಪೈಪ್‌ಲೈನ್ ಸಹ ಸೋರಿಕೆಯಾಗಿ ಕಲುಷಿತ ನೀರು ಮಿಶ್ರಣಗೊಂಡು ಕಾಲರಾ ಬ್ಯಾಕ್ಟೀರಿಯಾ ಇದ್ದರೆ, ಕಾಲರಾ ಹರಡುತ್ತದೆ ಎಂದು ವಿವರಿಸಿದರು.

ಕಾಲರಾ ಬ್ಯಾಕ್ಟೀರಿಯಾ ತಗುಲಿರುವ ಆಹಾರ, ನೀರು ಸೇವನೆಯಿಂದ ಸೋಂಕು ಬರಲಿದೆ. ಕಾಲರಾ ಸೋಂಕು ತಗುಲಿದರೆ ಭೇದಿ ಆಗಲಿದ್ದು, ಕೇವಲ ಎರಡು ಮೂರು ಬಾರಿ ಭೇದಿ ಆಗುತ್ತಿದ್ದಂತೆ ಸುಸ್ತು ಕಾಣಿಸಿಕೊಳ್ಳಲಿದೆ. ಶೀಘ್ರವೇ ಚಿಕಿತ್ಸೆ ಕೊಡಿಸದಿದ್ದರೆ ಸಾವು ಸಂಭವಿಸುವುದೇ ಹೆಚ್ಚು. ಕಾಲರಾ ಸೋಂಕು ದೇಹದಲ್ಲಿರುವ ನೀರನ್ನು, ಕರುಳಿನ ಮೂಲಕ ಹೊರಗೆ ಹಾಕಲಿದೆ. ಹಾಗಾಗಿ ಹೆಚ್ಚು ನೀರು ಕುಡಿಯಬೇಕು ಎಂದು ತಿಳಿಸಿದರು.

ವರ್ಕ್ ಫ್ರಮ್ ಹೋಮ್ ಆಮಿಷಕ್ಕೆ ಬಲಿಯಾಗಿ 7 ಲಕ್ಷ ರೂ. ಕಳೆದುಕೊಂಡ ಯುವತಿ

ಕಡಿಮೆ ಬೆಲೆಗೆ ಕಾರ್ಪೆಟ್ ಕೊಡಿಸುವುದಾಗಿ ವಂಚನೆ

ಮೈಸೂರು, ಮೇ 4(ಎಸ್‌ಬಿಡಿ)– ವರ್ಕ್ ಫ್ರಮ್ ಹೋಮ್ ನೆಪದಲ್ಲಿ ಯುವತಿಗೆ ಸುಮಾರು 7 ಲಕ್ಷ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಹೆಬ್ಬಾಳು ನಿವಾಸಿ ಕೆ.ಆರ್. ವಿದ್ಯಾಶ್ರೀ ಹಣ ಕಳೆದುಕೊಂಡವರು. ಇವರ ಮೊಬೈಲ್‌ಗೆ 8801885–854737 ಸಂಖ್ಯೆಯಿಂದ ವರ್ಕ್ ಫ್ರಮ್ ಹೋಮ್ ಬಗ್ಗೆ ಸಂದೇಶ ಬಂದಿತ್ತು. ಅದಕ್ಕೆ ಪ್ರತಿಕ್ರಿಯಿಸಿದಾಗ ಅವರ ಮೊಬೈಲ್ ಸಂಖ್ಯೆಯನ್ನು ಒಂದು ಟೆಲಿಗ್ರಾಂ ಗ್ರೂಪ್‌ಗೆ ಸೇರ್ಪಡೆ ಮಾಡಿದ್ದರು. ಬಳಿಕ ಕೆಲವು ಯೂಟ್ಯೂಬ್ ಚಾನೆಲ್‌ಗಳ ಲಿಂಕ್ ಕಳುಹಿಸಿ, ಅದನ್ನು ಲೈಕ್ ಮಾಡುವ ಟಾಸ್ಕ್ ನೀಡಿದ್ದರು. ಆ ಟಾಸ್ಕ್ ಪೂರ್ಣಗೊಳಿಸಿದ ನಂತರ ವಿದ್ಯಾಶ್ರೀಗೆ 2,600 ರೂ. ಹಣ ಸಂದಾಯ ಮಾಡಿದ್ದರು.

ಹೀಗೆ ನಂಬಿಕೆ ಗಳಿಸಿದ ಬಳಿಕ ಹಣ ಹೂಡಿ, ಕಮಿಷನ್ ರೂಪದಲ್ಲಿ ಲಾಭ ಗಳಿಸುವ ಪ್ರಿಪೇಯ್ಡ್ ಟಾಸ್ಕ್ ನೀಡಿದ್ದರು. ಅದನ್ನು ನಂಬಿದ ವಿದ್ಯಾಶ್ರೀ ಆರಂಭದಲ್ಲಿ 5 ಸಾವಿರ ರೂ. ಹಣ ಹೂಡಿಕೆ ಮಾಡಿ, ಆ ಟಾಸ್ಕ್ ಅನ್ನೂ ಪೂರ್ಣಗೊಳಿಸಿ, ಕಮಿಷನ್ ಹಣ ಕೇಳಿದರು. ಆದರೆ ಎಲ್ಲಾ ಹಂತದ ಟಾಸ್ಕ್ ಅನ್ನೂ ಪೂರ್ಣಗೊಳಿಸಿದ ನಂತರ ಒಟ್ಟಿಗೆ ಹಣ ನೀಡುವುದಾಗಿ ನಂಬಿಸಿ, ಹಂತ ಹಂತವಾಗಿ 6,94,827 ರೂ. ಹಣ ಪೀಕುತ್ತಾರೆ. ಆದರೂ ಇನ್ನೂ ಹಣ ಪಾವತಿಸುವಂತೆ ಒತ್ತಾಯಿಸಿದ್ದರಿಂದ ಅನುಮಾನ ಬಂದು ವಿಚಾರಿಸಿದಾಗ ಮೋಸ ಹೋಗಿರುವುದು ವಿದ್ಯಾಶ್ರೀ ಅವರಿಗೆ ಗೊತ್ತಾಗಿದೆ.

ಈ ಸಂಬಂಧ ವಿದ್ಯಾಶ್ರೀ ನೀಡಿದ ದೂರಿನ ಮೇರೆಗೆ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.


ಉದ್ಯಮಿಗೆ ವಂಚನೆ: ಮೈಸೂರಿನ ಉದಯಗಿರಿ ನಿವಾಸಿ, ವಾಣಿಜ್ಯೋದ್ಯಮಿ ಹಯಾತ್ ಮೊಹಮದ್ ಅವರಿಗೆ ಕಂಪನಿಯೊಂದರ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ, ಕಾರ್ಪೆಟ್‌ಗಳನ್ನು ಕಡಿಮೆ ಬೆಲೆಗೆ ಕೊಡುವುದಾಗಿ ನಂಬಿಸಿದ್ದಾನೆ. ಇದನ್ನು ನಂಬಿದ ಹಯಾತ್, ಆತ ಕಳುಹಿಸಿದ್ದ ಕ್ಯೂಆರ್ ಕೋಡ್ ಮೂಲಕ 79 ಸಾವಿರ ರೂ. ಹಣ ಪಾವತಿಸಿದ್ದಾರೆ. ನಂತರ ಆತ ಸಂಪರ್ಕಕ್ಕೆ ಸಿಗದೆ ವಂಚಿಸಿದ್ದಾನೆ ಎಂದು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕೊಡಗು ಜಿಲ್ಲೆಯ ವಿವಿಧೆಡೆ ಸುರಿದ ಮಳೆಯಿಂದಾಗಿ ಕುಶಾಲನಗರ ಸಮೀಪದ ದುಬಾರೆ ಬಳಿಯ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದ್ದು, ಪ್ರವಾಸಿಗರಲ್ಲಿ ಸಂತಸ ತಂದಿದೆ.

ಸರಸ್ವತಿಪುರಂನಲ್ಲಿ ಮುಳ್ಳುಹಂದಿಗಳು ಪ್ರತ್ಯಕ್ಷ; ನಿವಾಸಿಗಳಲ್ಲಿ ಆತಂಕ

ಮೈಸೂರು, ಮೇ 4(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿ ಮುಳ್ಳುಹಂದಿಗಳು ಪ್ರತ್ಯಕ್ಷವಾಗಿದ್ದು, ನಿವಾಸಿಗಳಲ್ಲಿ ಆತಂಕ ಮೂಡಿಸಿದೆ. ಅಳಿವಿನಂಚಿನಲ್ಲಿರುವ ಮುಳ್ಳುಹಂದಿಗಳು ಸರಸ್ವತಿಪುರಂನ 5ನೇ ಮುಖ್ಯರಸ್ತೆಯ 9ನೇ ಕ್ರಾಸ್‌ನಲ್ಲಿ ಮೇ 2 ರಂದು ಮಧ್ಯರಾತ್ರಿ 1149ರಲ್ಲಿ ಕಾಣಿಸಿಕೊಂಡಿದ್ದು, ಅವು ಅಡ್ಡಾಡುವ ದೃಶ್ಯ ಇಲ್ಲಿನ ಮನೆಯೊಂದರ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಮುಳ್ಳುಹಂದಿಗಳ ಅಪಾಯಕಾರಿ ಮುಳ್ಳುಗಳನ್ನು ಕಂಡು ನಿವಾಸಿಗಳು ಗಾಬರಿಯಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಇವುಗಳನ್ನು ಸಂರಕ್ಷಣೆ ಮಾಡುವ ಮೂಲಕ ಆತಂಕ ದೂರಮಾಡುವಂತೆ ಒತ್ತಾಯಿಸಿದ್ದಾರೆ.



ಅಮೆರಿಕದ ಕೋರಿಕೆ ಮೇರೆಗೆ ರೂ. 130 ಕೋಟಿ ಮೌಲ್ಯದ ಬಿಟ್ ಕಾಯಿನ್ ವಶಕ್ಕೆ ಪಡೆದ ಇಡಿ

ನವದೆಹಲಿ, ಮೇ 4– ಮಾದಕ ದ್ರವ್ಯ ಕಳ್ಳಸಾಗಣೆಗೆ ಸಂಬಂಧಿಸಿದಂತೆ ನಡೆದಿದೆ ಎನ್ನಲಾದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಅಮೆರಿಕದ ಕೋರಿಕೆ ಮೇರೆಗೆ ಉತ್ತರಾಖಂಡ ಮೂಲದ ವ್ಯಕ್ತಿಯನ್ನು ಜಾರಿ ನಿರ್ದೇಶನಾಲಯ ಅಧಿಕಾರಿಗಳು ಬಂಧಿಸಿ, ಆತನಿಂದ ರೂ. 130 ಕೋಟಿ ಮೌಲ್ಯದ ಬಿಟ್ ಕಾಯಿನ್ ವಶಕ್ಕೆ ಪಡೆದಿದ್ದಾರೆ.

ಪರ್ವಿಂದರ್ ಸಿಂಗ್ ಬಂಧಿತ ಆರೋಪಿ. ಉತ್ತರಾಖಂಡದ ನೈನಿತಾಲ್ ಜಿಲ್ಲೆಯ ಹಲದ್ವಾನಿ ಬಳಿ ಏ. 27ರಂದು ಈತನನ್ನು ವಶಕ್ಕೆ ಪಡೆಯಲಾಗಿದೆ. ಡಾರ್ಕ್ ವೆಬ್ ಮೂಲಕ ಐರೋಪ್ಯ ರಾಷ್ಟ್ರಗಳಲ್ಲಿ ಮಾದಕ ದ್ರವ್ಯ ಕಳ್ಳಸಾಗಣೆ ಮಾಡಿ ಹಣ ಸಂಪಾದಿಸಿದ್ದೆ ಎಂದಿರುವ ಈತ, ಅಪರಾಧವನ್ನು ಒಪ್ಪಿಕೊಂಡ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದ ಕೋರಿಕೆ ಮೇರೆಗೆ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಪರ್ವಿಂದರ್ ಸಿಂಗ್ ಹಾಗೂ ಆತನ ಸೋದರ ಬನಮೀತ್ ಸಿಂಗ್ ಹಾಗೂ ಇನ್ನಿತರರು ಸೇರಿ ಸಿಂಗ್ ಡಿಟಿಓ (ಡ್ರಗ್ ಟ್ರಾಫಿಕಿಂಗ್ ಆರ್ಗನೈಸೇಷನ್) ಎಂಬ ಏಜೆನ್ಸಿಯನ್ನು ನಡೆಸುತ್ತಿದ್ದರು. ತಮ್ಮ ಡಾರ್ಕ್ ವೆಬ್‌ಗೆ ಮಾರಾಟಗಾರರ ಅಂತರ್ಜಾಲ ತಾಣವನ್ನು ಬಳಸುತ್ತಿದ್ದರು. ಜತೆಗೆ ಬಹಳಷ್ಟು ಜಾಹೀರಾತುಗಳನ್ನು ಬಳಸಿಕೊಂಡು ತಮ್ಮದೇ ಜಾಲದ ಮೂಲಕ ಮಾದಕ ದ್ರವ್ಯವನ್ನು ಅಮೆರಿಕ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್ ವಿರುದ್ಧ ಗೆಲುವು: ಆರ್‌ಸಿಬಿ ಪ್ಲೇ ಆಫ್ ಕನಸು ಜೀವಂತ



ಬೆಂಗಳೂರು, ಮೇ 4– ಬೌಲರ್‌ಗಳ ಶಿಸ್ತುಬದ್ಧ ದಾಳಿ, ನಾಯಕ ಫಾಫ್ ಡು ಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಟೈಟಾನ್ಸ್ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ ಆರ್‌ಸಿಬಿ ಟೂರ್ನಿಯಲ್ಲಿ 4ನೇ ಗೆಲುವು ಸಾಧಿಸಿ, ಅಂಕಪಟ್ಟಿಯಲ್ಲಿ 10ನೇ ಸ್ಥಾನದಿಂದ 7ನೇ ಸ್ಥಾನಕ್ಕೆ ಜಿಗಿದಿದೆ. ಕಳೆದ ಪಂದ್ಯದಲ್ಲಿ ಗುಜರಾತ್ ಎದುರು ಗೆದ್ದು ಬೀಗಿದ್ದ ಆರ್‌ಸಿಬಿ, ಇದೀಗ ತವರಿನಲ್ಲೂ ಗುಜರಾತ್ ಎದುರು ಗೆಲುವಿನ ಕೇಕೆ ಹಾಕಿದೆ. ಅಲ್ಲದೇ ಪ್ಲೇ ಆಫ್ ಆಸೆ ಜೀವಂತವಾಗಿರಿಸಿಕೊಂಡಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುಜರಾತ್ ನೀಡಿದ 148 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕೇವಲ 13.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 152 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ಆರ್‌ಸಿಬಿ ಪರ ಇನ್ನಿಂಗ್ಸ್ ಆರಂಭದಿಂದಲೇ ಸ್ಫೋಟಕ ಆಟವಾಡಿದ ವಿರಾಟ್ ಕೊಹ್ಲಿ ಹಾಗೂ ಫಾಫ್ ಡು ಪ್ಲೆಸಿಸ್ ಕೇವಲ 3.1 ಓವರ್‌ಗಳಲ್ಲಿ 50 ರನ್ ಸಿಡಿಸಿದರು. ಮೈಚಳಿ ಬಿಟ್ಟು ಬ್ಯಾಟ್ ಬೀಸಿದ ಫಾಫ್ ಡು ಪ್ಲೆಸಿಸ್ ಕೇವಲ 18 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಮೂಲಕ ಆರ್‌ಸಿಬಿ ಪರ ಕ್ರಿಸ್ ಗೇಲ್(17 ಎಸೆತ) ಬಳಿಕ ಅತಿವೇಗದ ಅರ್ಧಶತಕ ಸಿಡಿಸಿದ ಕೀರ್ತಿಗೆ ಫಾಫ್ ಪಾತ್ರರಾದರು. ಅಂತಿಮವಾಗಿ 5.5 ಓವರ್‌ಗಳಲ್ಲಿ 92 ರನ್ ಜೊತೆಯಾಟವಾಡಿದ ಈ ಜೋಡಿ ತಂಡಕ್ಕೆ ಭರ್ಜರಿ ಆರಂಭ ಒದಗಿಸಿದರು. ಆದರೆ ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಫಾಫ್ ಡು ಪ್ಲೆಸಿಸ್ 23 ಎಸೆತಗಳಲ್ಲಿ 10 ಬೌಂಡರಿ, 3 ಸಿಕ್ಸರ್ ಸಹಿತ 64 ರನ್ ಬಾರಿಸಿ ಜೋಶ್ವಾ ಲಿಟ್ಲ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿದರು.

92 ರನ್‌ಗಳವರೆಗೆ ವಿಕೆಟ್ ನಷ್ಟವಿಲ್ಲದೇ ಮುನ್ನುಗ್ಗುತ್ತಿದ್ದ ಆರ್‌ಸಿಬಿ, ಫಾಫ್ ವಿಕೆಟ್ ಪತನದ ಬೆನ್ನಲ್ಲೇ ದಿಢೀರ್ ಕುಸಿತ ಕಂಡಿತು. ನಾಯಕನ ವಿಕೆಟ್ ಪತನದ ಬಳಿಕ ಕ್ರೀಸ್‌ಗಿಳಿದ ಕಳೆದ ಪಂದ್ಯದ ಹೀರೋ ವಿಲ್ ಜ್ಯಾಕ್ಸ್ ಕೇವಲ ಒಂದು ರನ್ ಗಳಿಸಿ ನೂರ್ ಅಹಮದ್‌ಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಮತ್ತೋರ್ವ ಇನ್ ಫಾರ್ಮ್ ಆಟಗಾರ ರಜತ್ ಪಾಟೀದಾರ್ ಕೇವಲ 2 ರನ್ ಗಳಿಸಿ ಲಿಟ್ಲ್‌ಗೆ ಎರಡನೇ ಬಲಿಯಾದರು. ಅದೇ ಓವರ್‌ನಲ್ಲೇ ಮ್ಯಾಕ್ಸ್‌ವೆಲ್ ಕೂಡಾ 4 ರನ್ ಗಳಿಸಿ ಪೆವಿಲಿಯನ್ ಹಾದಿ ಹಿಡಿದರು. ಕ್ಯಾಮರೋನ್ ಗ್ರೀನ್ ಕೂಡಾ ಒಂದು ರನ್ ಗಳಿಸಿ ಲಿಟ್ಲ್‌ಗೆ 4ನೇ ಬಲಿಯಾದರು. ಆರ್‌ಸಿಬಿ ತಂಡವು ಕೇವಲ 19 ರನ್ ಅಂತರದಲ್ಲಿ ದಿಢೀರ್ ಎನ್ನುವಂತೆ 5 ವಿಕೆಟ್ ಕಳೆದುಕೊಂಡಿತು. ಮತ್ತೊಂದು ತುದಿಯಲ್ಲಿದ್ದ ಭರ್ಜರಿ ಆಟವಾಡಿದ ಕೊಹ್ಲಿ 27 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 42 ರನ್ ಗಳಿಸಿ ನೂರ್ ಅಹಮದ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ 7ನೇ ವಿಕೆಟ್‌ಗೆ ಜೊತೆಯಾದ ದಿನೇಶ್ ಕಾರ್ತಿಕ್ ಹಾಗೂ ಸ್ವಪ್ನಿಲ್ ಸಿಂಗ್ 18 ಎಸೆತಗಳಲ್ಲಿ ಮುರಿಯದ 35 ರನ್‌ಗಳ ಅಮೂಲ್ಯ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಡಿಕೆ ಅಜೇಯ 21 ರನ್ ಬಾರಿಸಿದರೆ, ಸ್ವಪ್ನಿಲ್ ಸಿಂಗ್ ಅಜೇಯ 15 ರನ್ ಸಿಡಿಸಿದರು. ಗುಜರಾತ್ ಪರ ಜೋಶ್ವಾ ಲಿಟ್ಲ್ 4, ನೂರ್ ಅಹಮ್ಮದ್ 2 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ 19.3 ಓವರ್‌ಗಳಲ್ಲಿ 147ರನ್‌ಗೆ ಆಲೌಟಾಯಿತು. ಆರ್‌ಸಿಬಿ ಸಂಘಟಿತ ದಾಳಿ ಎದುರು ತತ್ತರಿಸಿದ ಗುಜರಾತ್ 19ರನ್ ಗಳಿಸುವಷ್ಟರಲ್ಲೇ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 4ನೇ ವಿಕೆಟ್‌ಗೆ ಶಾರುಖ್ ಖಾನ್ ಹಾಗೂ ಡೇವಿಡ್ ಮಿಲ್ಲರ್ ಜೋಡಿ 37 ಎಸೆತಗಳಲ್ಲಿ 61 ರನ್‌ಗಳ ಜತೆಯಾಟವಾಡಿತು. ಶಾರುಖ್ ಖಾನ್ 37, ಮಿಲ್ಲರ್ 30 ಹಾಗೂ ರಾಹುಲ್ ತೆವಾಟಿಯಾ 35 ರನ್ ಬಾರಿಸಿ ತಂಡಕ್ಕೆ ಆಸರೆಯಾದರು. ರಶೀದ್ ಖಾನ್ 18 ರನ್ ಗಳಿಸಿ, ವಿಜಯ್ ಶಂಕರ್ 10 ರನ್ ಗಳಿಸಿ ಔಟಾದರು. ಬೆಂಗಳೂರು ಪರ ಮೊಹಮ್ಮದ್ ಸಿರಾಜ್, ಯಶ್ ದಯಾಳ್, ವಿಜಯ್ ಕುಮಾರ್ ವೈಶಾಖ್ ತಲಾ 2, ಕ್ಯಾಮರೂನ್ ಗ್ರೀನ್, ಕರಣ್ ಶರ್ಮಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಆರ್‌ಸಿಬಿ ಪರ ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	10	8	2	0	16
ಕೊಲ್ಕತ್ತಾ	10	7	3	0	14
ಲಕ್ನೋ	10	6	4	0	12
ಹೈದರಾಬಾದ್	10	6	4	0	12
ಚೆನ್ನೈ	10	5	5	0	10
ಡೆಲ್ಲಿ	11	5	6	0	10
ಬೆಂಗಳೂರು	11	4	7	0	8
ಪಂಜಾಬ್	10	4	6	0	8
ಗುಜರಾತ್	11	4	7	0	8
ಮುಂಬೈ	11	3	8	0	6

ಇಂದಿನ ಪಂದ್ಯ (ಮೇ 5)

ಪಂಜಾಬ್ ಕಿಂಗ್ / ಚೆನ್ನೈ ಸೂಪರ್ ಕಿಂಗ್ಸ್

ಸ್ಥಳ: ಧರ್ಮಶಾಲಾ, ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣ

ಸಮಯ: ಮಧ್ಯಾಹ್ನ 3.30ಕ್ಕೆ.

ಲಕ್ನೋ ಸೂಪರ್ ಜೈಂಟ್ / ಕೋಲ್ಕತ್ತಾ ನೈಟ್ ರೈಡರ್ಸ್

ಸ್ಥಳ: ಲಕ್ನೋ, ಭಾರತ್‌ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣ

ಸಮಯ: ಸಂಜೆ 7.30ಕ್ಕೆ.

ಸಮಾಧಾನಕರ ಬಹುಮಾನ



ಬಿ.ಆರ್.ನಾಗರತ್ನ
ನಂ.1125, 9ನೇ ಮುಖ್ಯ ರಸ್ತೆ,
ಗೋಕುಲಂ 3ನೇ ಹಂತ,
ಮೈಸೂರು-570002
ಮೊ.9731999313

ಹಂಗು



ತನ್ನ ತಾಯಿಯ ಅಂತ್ಯಸಂಸ್ಕಾರ ಮತ್ತು ಕರ್ಮಾಂತರಗಳ ಕಾರ್ಯವನ್ನು ಮುಗಿಸಿಕೊಂಡು ಪ್ರಕಾಶ ತನ್ನ ಹೆಂಡತಿ ಮತ್ತು ಮಗನೊಡನೆ ತಾನು ಕೆಲಸ ಮಾಡುತ್ತಿರುವ ತುಮಕೂರಿಗೆ ಹೊರಟು ನಿಂತನು. ಆಗ ಆತನ ಸೋದರಮಾವ "ಪ್ರಕಾಶ, ನಾನು ಹೇಳುವುದನ್ನು ನೆನಪಿನಲ್ಲಿಟ್ಟುಕೋ, ಆದಷ್ಟು ಬೇಗ ಅಲ್ಲಿ ನೀನು ಮಾಡುತ್ತಿರುವ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೆಂಡತಿ ಮಗನನ್ನು ಕರೆದುಕೊಂಡು ಇಲ್ಲಿಗೇ ಬಂದುಬಿಡಪ್ಪ, ಅವರು ನಿನಗೆ ಕೊಡುವ ಸಂಬಳ ಯಾವ ಮೂಲೆಗೆ ಸಾಕಾಗುತ್ತೆ. ಇನ್ನು ನೀನು ಇರುವ ಬಾಡಿಗೆ ಮನೆಯೋ ಬೆಂಕಿಪೊಟ್ಟಣದಂತಿದೆ. ಈ ಊರಲ್ಲಿ ನನ್ನದೇ ಜಮೀನ್ದಾರಿಕೆ, ಲೇವಾದೇವಿ, ಇತ್ತೀಚೆಗೆ ಒಂದು ಫ್ಲೋರ್‌ಮಿಲ್ ಹಾಕಿಸಿದ್ದೇನೆ. ಸಾಲದ್ದಕ್ಕೆ ನಮ್ಮದೇ ಕೋಳಿಫಾರಂ ಇದೆ. ಒಂದೇ ಎರಡೇ ವ್ಯವಹಾರ. ಅದರಲ್ಲಿ ಯಾವುದು ನಿನಗಿಷ್ಟವಾದ್ದನ್ನು ವಹಿಸಿಕೊಂಡು ಇರುವೆಯಂತೆ. ಇತ್ತೀಚೆಗೆ ನಮ್ಮೂರು ಕಳಲೆಯೇನೂ ಕಮ್ಮಿಯಿಲ್ಲಪ್ಪ. ತುಂಬ ಅಭಿವೃದ್ಧಿ ಆಗಿದೆ. ಮಕ್ಕಳಿಗೆ ಶಾಲೆ, ಹೆಣ್ಣುಮಕ್ಕಳಿಗೆ ಕಸೂತಿ, ಟೈಲರಿಂಗ್ ಹೇಳಿಕೊಡುವ ಸ್ತ್ರೀಸಮಾಜ, ಸ್ತ್ರೀಶಕ್ತಿ ಸಂಘ, ಎಲ್ಲವೂ ಆಗಿವೆ. ನಿನ್ನ ಮಗನಿಗೂ ಓದಿಗೇನೂ ತೊಂದರೆಯಾಗಲ್ಲ. ನಿನ್ನ ಹೆಂಡತಿಗೂ ಬೇಜಾರಾಗಲ್ಲ. ಏನಾದರೂ ಕಲಿತು ತಾನೂ ದುಡಿದು ಸಂಪಾದಿಸಲು ಅವಕಾಶವಿದೆ. ಮೇಲಾಗಿ ಅವಳ ಹೆತ್ತವರು. ಒಡಹುಟ್ಟಿದವರು ಇದೇ ಊರಿನಲ್ಲಿರುವುದರಿಂದ ಬೇಕಾದಾಗ ಹೋಗಿ ಬಂದು ಮಾಡಬಹುದು. ತೀರಾ ಬೇಸರವಾದರೆ ನಂಜನಗೂಡು, ಮೈಸೂರುಗಳಿಗೆ ಹೋಗಿ ತಿರುಗಾಡಿ ಬರಬಹುದು" ಎಂದರು ಸಿದ್ದೇಗೌಡರು. ಅವರ ಮಾತಿಗೆ ಅತ್ತೆ ಚಲುವಮ್ಮನೂ ಧ್ವನಿಗೂಡಿಸಿದರು.

* * *

ಅವರಿಬ್ಬರ ಮಾತಿಗೆ ಪ್ರತ್ಯುತ್ತರ ಕೊಡದೆ ಬರೀ ತಲೆಯಲ್ಲಾಡಿಸಿ ಹೆಂಡತಿ ಮಗ ಧೃವನೊಡನೆ ಬಸ್‌ಸ್ಟ್ಯಾಂಡಿನತ್ತ ನಡೆದ ಪ್ರಕಾಶ. ಕಳಲೆಯಿಂದ ಮೈಸೂರಿಗೆ ತಲುಪಿ ಅಲ್ಲಿಂದ ತುಮಕೂರಿಗೆ ಬಸ್ ಹತ್ತಿದರು. ಬಸ್ಸು ಮುಂದಕ್ಕೆ ಸಾಗುತ್ತಿದ್ದಂತೆ ಪ್ರಕಾಶನ ಮಡದಿ ಸುಮಾಳಿಗೆ ಮನಸ್ಸಿನಲ್ಲಿ ದೊಂಬರಾಟ ಪ್ರಾರಂಭವಾಯಿತು. ಅವಳೂ -ಅದೇ ಊರಿನಲ್ಲಿ ಬೆಳೆದವಳಾದ್ದರಿಂದ ಅವಳಿಗೆ ಚಿಕ್ಕಂದಿನಿಂದಲೂ ಪ್ರಕಾಶನ ತಾಯಿ ಸಿದ್ದೇಗೌಡರ ಮನೆಯಲ್ಲಿ ಅನುಭವಿಸಿದ ಬವಣೆಗಳ ವಿವರಗಳನ್ನು ತನ್ನ ತಂದೆ, ತಾಯಿಯ ಬಾಯಿಂದ ಅನೇಕ ಬಾರಿ ಕೇಳಿ ತಿಳಿದಿದ್ದಳು. ಸಿದ್ದೇಗೌಡರು ತಮ್ಮ ತಂಗಿಯ ಗಂಡನನ್ನು ಕಳೆದುಕೊಂಡ ನಂತರ ಪುಟ್ಟ ಮಗನೊಡನೆ ಅಲ್ಲಿಗೆ ಬಂದಾಗ ಅವಳಿಗೆ ಆಶ್ರಯ ನೀಡಿದ್ದು ನಿಜವಾದರೂ, ಅವಳು ಮತ್ತು ಅವಳ ಮಗನಿಗೆ ಸುಮ್ಮನೆ ಕೂಡಿಸಿ ಏನೂ ಊಟ ಹಾಕಿದ್ದಿಲ್ಲ. ಅವರಿಂದ ನಿರಂತರವಾಗಿ ಜೀತದಾಳಿಗಿಂತ ಹೆಚ್ಚಾಗಿ ದುಡಿಸಿಕೊಳ್ಳುತ್ತಿದ್ದರು. ಇದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು. ಪ್ರಕಾಶ ತನ್ನನ್ನು ಮದುವೆಯಾಗಲು ಇಷ್ಟಪಟ್ಟಾಗಲೂ ಅದಕ್ಕೆ ಗೌಡರ ಮನೆಯಿಂದ ಸಾಕಷ್ಟು ವಿರೋಧ ಎದುರಾಗಿತ್ತು. ಈಗ ಮತ್ತೊಮ್ಮೆ ಅದೇ ಸಿದ್ದೇಗೌಡರು ಮತ್ತೊಂದು ದೂರದೃಷ್ಟಿಯ ಆಲೋಚನೆ ಮಾಡಿ ಮತ್ತೊಮ್ಮೆ ತಮ್ಮನ್ನು ಹೇಗಾದರೂ ತಮ್ಮ ಹಿಡಿತಕ್ಕೆ ಸಿಕ್ಕಿಸುವ ಹುನ್ನಾರ ಹೂಡಿದಂತಿತ್ತು ಅವಳಿಗೆ ಮನಸ್ಸಿನಲ್ಲಿ ಅವ್ಯಕ್ತ ಭಯವೊಂದು ಮೂಡಿತು. "ಏನ್ರಿ, ನಿಮ್ಮ ಮಾವ ಹೇಳಿದಂತೆ ಇರುವ ಕೆಲಸ ಬಿಟ್ಟು ಇಲ್ಲಿಗೇ ಬರುತ್ತೀರಾ?" ಎಂದು ಪ್ರಕಾಶನನ್ನು ಪ್ರಶ್ನಿಸಿದಳು.

ಹೆಂಡತಿಯ ಮಾತಿನಲ್ಲಿದ್ದ ಆತಂಕವನ್ನು ಅರ್ಥಮಾಡಿಕೊಂಡ ಪ್ರಕಾಶನಿಗೆ ತಕ್ಷಣ ಉತ್ತರ ಕೊಡುವ ಮನಸ್ಥಿತಿಯಿರಲಿಲ್ಲ. ಅವನಿಗೆ ತಾನು ಇಲ್ಲಿಯವರೆಗೆ ನಡೆದುಬಂದ ದಾರಿಯ ಚಿತ್ರಗಳು ಮನೋಭಿತ್ತಿಯ ಮೇಲೆ ಬಿಚ್ಚಿಕೊಳ್ಳ ತೊಡಗಿದವು. ನಂಜನಗೂಡಿನ ಸಮೀಪದ ಕಳಲೆ ಎಂಬ ಗ್ರಾಮದ ಪ್ರತಿಷ್ಠಿತ ಕುಟುಂಬಗಳಲ್ಲಿ ದಾಸೇಗೌಡರದ್ದೂ ಒಂದಾಗಿತ್ತು. ಅವರ ಪತ್ನಿ ಮಲ್ಲಮ್ಮ. ಅವರಿಗೆ ಸುಮಾರು ಮಕ್ಕಳು ಹುಟ್ಟಿದರೂ ಉಳಿದವರು ಇಬ್ಬರೇ. ಗಂಡುಮಗ ಸಿದ್ದೇಗೌಡ ಮತ್ತು ಅವನಿಗಿಂತ ಹದಿನಾರು ವರ್ಷ ಕಿರಿಯವಳಾದ ಮಗಳು ಕಾವೇರಿ. ತಕ್ಕಮಟ್ಟಿಗೆ ಓದಿಕೊಂಡು ವ್ಯವಹಾರ ಜ್ಞಾನ ಸಂಪಾದಿಸಿದ್ದ ಮಗನಿಗೆ ಅವರ ಅಂತಸ್ತಿಗೆ ತಕ್ಕಂತೆ ಹೆಣ್ಣು ತಂದು ಮದುವೆ ಮಾಡಿ ಸೊಸೆಯನ್ನು ಮನೆತುಂಬಿಸಿಕೊಂಡಿದ್ದರು. ಆಕೆಯೇ ಚಲುವಮ್ಮ. ಈ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು ಅರುಣ ಮತ್ತು ಕಿರಣ. ಒಬ್ಬ ಹೆಣ್ಣು ಮಗಳು ಸರಸು.

* * *

ದಾಸೇಗೌಡರು ಮಗಳು ಕಾವೇರಿಯನ್ನು ಮಂಡ್ಯ ಜಿಲ್ಲೆಯ ಮಳವಳ್ಳಿಯ ವ್ಯವಸಾಯ ಮತ್ತು ವ್ಯಾಪಾರಗಳನ್ನು ಹೊಂದಿದ್ದ ಮಲ್ಲನಗೌಡ ಮತ್ತು ಕೆಂಪಮ್ಮ ದಂಪತಿಗಳ ಮೂರು ಗಂಡು ಮಕ್ಕಳಲ್ಲಿ ಕೊನೆಯವನಾದ ಚಂದ್ರಪ್ಪನಿಗೆ ಮದುವೆ ಮಾಡಿಕೊಟ್ಟಿದ್ದರು. ಆತನಿಗೆ ವ್ಯವಹಾರ ಜ್ಞಾನ ಸಾಲದು. ಅವನ ಅಣ್ಣಂದಿರೇ ಕುಟುಂಬದ ಎಲ್ಲ ವ್ಯವಹಾರಗಳನ್ನು ನೋಡಿಕೊಂಡು ಇವನನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತಿದ್ದರು. ಅವರಿಬ್ಬರ ಕಪಿಮುಷ್ಠಿಯಲ್ಲಿ ಸಿಕ್ಕಿದ್ದ ಚಂದ್ರಪ್ಪನಿಗೆ ಮನೆಯಲ್ಲಿ ಹೇಳಿಕೊಳ್ಳುವ ಅಧಿಕಾರವಿರಲಿಲ್ಲ. ಅಣ್ಣಂದಿರ ಆಡಳಿತಕ್ಕೆ ಅವನ ಹೆತ್ತವರದ್ದೂ ಕುಮ್ಮಕ್ಕಿತ್ತು. ಹೀಗಾಗಿ ಕಾವೇರಿಯ ಪರಿಸ್ಥಿತಿಯೂ ಚೆನ್ನಾಗಿರಲಿಲ್ಲ. ಮಾಡಬೇಕಾದ ಕೆಲಸಗಳು ಹೊರೆಯಷ್ಟು ಅವಳ ಪಾಲಿಗಿತ್ತು. "ಸಂಸಾರದ ಗುಟ್ಟು ವ್ಯಾಧಿ ರಟ್ಟು" ಎಂಬಂತೆ ತೊತ್ತಿನಂತೆ ದುಡಿಯುತ್ತಿದ್ದರೂ ಒಟ್ಟು ಕುಟುಂಬದ ಗುಟ್ಟನ್ನು ಬಯಲು ಮಾಡದಂತೆ. ಇದರ ಬಗ್ಗೆ ಯಾರ ಮುಂದೆಯೂ ಬಾಯಿಬಿಡದಂತೆ ಎಲ್ಲವನ್ನೂ ಸಹಿಸುತ್ತಿದ್ದಳು. ಆದರೂ ಅಲ್ಪಸ್ವಲ್ಪ ಅವರಿವರ ಬಾಯಿಂದ ವಿಷಯಗಳನ್ನು ಕೇಳಿ ತಿಳಿದ ದಾಸೇಗೌಡರಿಗೆ ದೊಡ್ಡಕುಳವೆಂದು ಮಗಳನ್ನು ಅವರ ಮನೆಗೆ ಕೊಟ್ಟದ್ದು ಎಷ್ಟು ತಪ್ಪಾಗಿದೆ ಎಂಬುದರ ಅರಿವಾಯಿತು. ಇದರಿಂದ ಅವರು ಪಶ್ಚಾತ್ತಾಪ ಪಟ್ಟು ಮಗಳಿಗೆ ಏನಾದರೂ ನೆರವು ಒದಗಿಸೋಣವೆಂದು ಯೋಚಿಸಿ ಅವಳ ಬದುಕನ್ನು ಸುಧಾರಿಸಲು ಮುಂದಾದರು. ಬೀಗರ ಮನೆಯ ಆರ್ಥಿಕ ಸ್ಥಿತಿಯ ಬಗ್ಗೆ ಬಲ್ಲವರಿಂದ ವಿಚಾರಿಸಿದಾಗ ಅವರ ಆದಾಯಕ್ಕಿಂತ ಸಾಲದ ಹೊರೆಯೇ ಹೆಚ್ಚಾಗಿದೆ ಎಂಬ ಅಂಶ ತಿಳಿಯಿತು.

ಅವರು ಬಹಳ ಸಂಕಟಪಟ್ಟರು. ಅದೇ ಕೊರಗಿನಲ್ಲಿ ದಂಪತಿಗಳಿಬ್ಬರೂ ಕಡಿಮೆ ಅವಧಿಯಲ್ಲಿ ವಿಧಿವಶರಾದರು. ಮದುವೆಯಾದ ಆರುವರ್ಷಗಳ ನಂತರ ಗರ್ಭಿಣಿಯಾದ ಸೋದರಿ ಕಾವೇರಿಯನ್ನು ಸಿದ್ದೇಗೌಡರು ತಮ್ಮ ಮನೆಗೆ ಕರೆತಂದರು. ಹೆಂಡತಿಯನ್ನು ನೋಡಲು ಬರುತ್ತಿದ್ದ ಭಾವ ಚಂದ್ರಪ್ಪನಿಗೆ ಕೂಡಿಸಿಕೊಂಡು "ನೀವು ಇಲ್ಲಿಗೇ ಬಂದುಬಿಡಿ, ನಾನು ನಿಮಗೆ ಆಸರೆಯಾಗಿರುತ್ತೇನೆ. ಏನಾದರೂ ಇಲ್ಲಿಯೇ ಸ್ವಂತ ವ್ಯಾಪಾರ, ವ್ಯವಹಾರ ಮಾಡೋಣ" ಎಂದು ತಿಳಿಯ ಹೇಳುತ್ತಿದ್ದರು. ಆದರೆ ಚಂದ್ರಪ್ಪ ಮೊದಲಿನಿಂದಲೂ ಹೆತ್ತವರ ಮತ್ತು ಅಣ್ಣಂದಿರ ಕೈಕೆಳಗೇ ಬೆಳೆದಿದ್ದರಿಂದ ಅವರನ್ನು ಬಿಟ್ಟು ಬರುವ ಧೈರ್ಯವಿರಲಿಲ್ಲ. "ಅವರನ್ನೆಲ್ಲ ಎದುರು ಹಾಕಿಕೊಳ್ಳಬೇಕು. ಅಲ್ಲದೆ ಮಾಡಿದ್ದ ಸಾಲದಲ್ಲಿ ನನ್ನ ಮೇಲೂ ಹೊರೆಯಿದೆ. ಅದನ್ನು ಮೊದಲು ತೀರಿಸಬೇಕಲ್ಲ" ಎಂದು ಹೇಳುತ್ತಲೇ ತನ್ನ ತೀರ್ಮಾನ ಹೇಳುವುದನ್ನು ಮುಂದೂಡುತ್ತಲೇ ಇದ್ದರು.

ಸಿದ್ದೇಗೌಡರು ಮಾತ್ರ ತಮ್ಮ ಪ್ರಯತ್ನವನ್ನು ಮುಂದುವರೆಸುತ್ತಲೇ ಇದ್ದರು. ಪದೇ ಪದೇ ಅದೇ ಮಾತುಗಳನ್ನು ಕೇಳಿ ಕೇಳಿ ಚಂದ್ರಪ್ಪನ ಮನಸ್ಸಿನಲ್ಲೂ ತಾನು ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳುವ ಹಂಬಲ ಹೆಚ್ಚಾಗತೊಡಗಿತ್ತು. ಅದನ್ನು ತಮ್ಮ ಮನೆಯವರ ಮುಂದೆ ಒಮ್ಮೆ ಹೇಳಿಯೂ ಇದ್ದರು. ಆದರೆ ಕಾವೇರಿಗೆ ಮಗ ಹುಟ್ಟಿ ಬೆಳಕು ಕಾಣುವ ಹೊತ್ತಿಗೆ ಚಂದ್ರಪ್ಪ ಪರಲೋಕಕ್ಕೆ ಪಯಣಿಸಿದ್ದರು. ಜಮೀನಿನ ಕೆಲಸ ಮಾಡುತ್ತಿರುವಾಗ ಕಾಲುಜಾರಿ ನೀರಿನ ಕಲ್ಯಾಣಿಯೊಳಕ್ಕೆ ಬಿದ್ದುಬಿಟ್ಟರೆಂದು ಅವನ ದೂರ್ತ ಅಣ್ಣಂದಿರಿಂದ ಸುದ್ದಿ ಬಂದಿತು. ಅಲ್ಲಿಗೆ ಕಾವೇರಿಗೆ ಗಂಡನ ಮನೆಯ ಬಾಗಿಲು ಶಾಶ್ವತವಾಗಿ ಮುಚ್ಚಿಹೋಯಿತು.

* * *

ಹೀಗಾಗಿ ಕಾವೇರಿ ಮತ್ತು ಪ್ರಕಾಶ ಸಿದ್ದೇಗೌಡರ ಮನೆಯ ಸಿಬ್ಬಂದಿಗಳಲ್ಲಿ ಒಬ್ಬರಾಗಿ ಸೇರಿಹೋದರು. ಹುಟ್ಟುತ್ತಲೇ ಅಪ್ಪನನ್ನು ಬಲಿತೆಗೆದುಕೊಂಡ ಮಗನೆಂಬ ಹಣೆಪಟ್ಟಿ ಹೊತ್ತುಕೊಂಡೇ ಅವನ ತಾಯಿಯ ಸೆರಗಿನಲ್ಲೇ ಬೆಳೆದ ಪ್ರಕಾಶ. ಅವನಿಗೆ ಬುದ್ಧಿ ತಿಳಿಯುವ ಮೊದಲೇ ಅವನ ಸೋದರ ಮಾವ, ಅತ್ತೆ ಮತ್ತವರ ಮಕ್ಕಳ ಹುಕುಂಗಳನ್ನು ಪಾಲಿಸುತ್ತಾ ಮನೆಯ ಒಳಗೆ ಹೊರಗಿನ ಚಾಕರಿಗಳಿಗೆ ಕೈಯಾಳು ಆಗಿಬಿಟ್ಟ.

ಅವನನ್ನು ಶಾಲೆಗೂ ಕಳುಹಿಸುತ್ತಿದ್ದರು. ಆದರೆ ಓದಿಕೊಳ್ಳಲು ಅವನಿಗೆ ಕೆಲಸಗಳ ಮಧ್ಯೆ ಪುರುಸೊತ್ತು ಸಿಗುತಿರಲಿಲ್ಲ. ಮಾವನ ಮಕ್ಕಳು ಓದಿನಲ್ಲಿ ಯಾವಾಗಲೂ ಹಿಂದೆ. ಹೇಗೊ ಪರೀಕ್ಷೆಗಳಲ್ಲಿ ಜೀವನಾಂಶದಷ್ಟು ಪಡೆದು ತೇರ್ಗಡೆಯಾಗುತ್ತಿದ್ದರು. ಅಂಥಹವರನ್ನು ಉದ್ದಕ್ಕೂ ಹಣಸುರಿದು ಖಾಸಗಿ ಕಾಲೇಜುಗಳಿಗೆ ಸೇರಿಸಿ ಹಾಗೂಹೀಗೂ ಇಂಜಿನಿಯರಿಂಗ್ ಪಾಸಾಗುವಂತೆ ಮಾಡಿದರು. ಹಣವಂತ ಬೀಗರುಗಳನ್ನು ಹುಡುಕಿ ಅವರ ಮನೆಯ ಹೆಣ್ಣುಗಳನ್ನು ತಂದು ಮದುವೆ ಮಾಡಿಸಿದರು. ಸಾಲದ್ದಕ್ಕೆ ಅವರವರ ಮಾವಂದಿರ ಶಿಫಾರಸ್ಸು, ಹಣದ ಬಲದಿಂದ ವಿದೇಶಗಳಿಗೂ ಕಳಿಸುವ ವ್ಯವಸ್ಥೆಯಾಯಿತು. ಅಲ್ಲಿ ಹೇಗೋ ಅವರ ಜೀವನ ನಡೆಯುತ್ತಿತ್ತು. ಸಿದ್ದೇಗೌಡರ ಕರ್ತವ್ಯ ಮುಗಿದಿತ್ತು.

* * *

ಇರುವ ಒಬ್ಬ ಮಗಳಿಗೆ ಬಡವರ ಮನೆಯ ಹುಡುಗನೊಬ್ಬನಿಗೆ ಆಮಿಷಗಳ ಗಾಳಹಾಕಿ ಮದುವೆಮಾಡಿಸಿ ಮನೆ ಅಳಿಯನನ್ನಾಗಿ ಮಾಡಿಕೊಂಡರು. ಅವನು ಇವರ ಆಜ್ಞಾನುವತಿಯಾಗಿ ಇವರಲ್ಲೇ ಇದ್ದನು. ಇಷ್ಟರ ವೇಳೆಗೆ ಪ್ರಕಾಶ ಎಸ್.ಎಸ್.ಎಲ್.ಸಿ. ಉತ್ತಮ ತರಗತಿಯಲ್ಲಿ ಪಾಸಾದ. ಮುಂದಿನ ವಿದ್ಯಾಭ್ಯಾಸಕ್ಕೆ ಅವನನ್ನು ಕಳುಹಿಸಲು ಯಾರೂ ಮನಸ್ಸು ಮಾಡಲಿಲ್ಲ. ಅಂತೂ ಇಂತೂ ಕಾಡಿಬೇಡಿದ ನಂತರ ಒಂದೂವರೆ ವರ್ಷದ ಐ.ಟಿ.ಐ. ಕೋರ್ಸಿಗೆ ಸೇರಿಸಿದರು. ಬೆಳಗ್ಗೆಯೇ ಎಲ್ಲಾ ಕೆಲಸಗಳನ್ನು ಬೇಗನೆ ಮುಗಿಸಿ ನಂಜನಗೂಡಿಗೆ ಹೋಗಿ ಕಾಲೇಜಿಗೆ ಹಾಜರಾಗುತ್ತಿದ್ದ. ಹೇಗೋ ಅಲ್ಲಿಂದಿಲ್ಲಿಗೆ ಓಡಾಡಿಕೊಂಡೇ ಒಳ್ಳೆಯ ರೀತಿಯಲ್ಲಿ ತೇರ್ಗಡೆಯಾದ. ಅವನ ಅದೃಷ್ಟಕ್ಕೆ ಕೆಲವೇ ದಿನಗಳಲ್ಲಿ ತುಮಕೂರಿನ ಖಾಸಗಿ ಕಾಲೇಜೊಂದರಲ್ಲಿ ಲ್ಯಾಬ್ ಟೆಕ್ನಿಷಿಯನ್ ಎಂದು ಕೆಲಸವೂ ಸಿಕ್ಕಿಬಿಟ್ಟಿತು. ಅಲ್ಲಿ ಎರಡು ವರ್ಷಗಳು ಉರುಳಿದವು. ಮೊದಲಿನಿಂದಲೂ ಪ್ರಕಾಶನನ್ನು ನೋಡಿದ್ದವರು ಮತ್ತು ಅವನ ಮಾವನ ಪರಿಚಿತರೂ ಆಗಿದ್ದ ಸುಮಾಳ ತಂದೆ ಅವನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಮುಂದಾದರು. ಆದರೆ ಅದನ್ನು ತೀವ್ರವಾಗಿ ವಿರೋಧಿಸಿದವರು ಅವನತ್ತೆ ಚಲುವಮ್ಮನವರು. ಅವರು ತಮ್ಮ ಕಡೆಯ ಒಂದು ಹುಡುಗಿಯನ್ನು ಅವನಿಗೆ ತಂದುಕೊಳ್ಳುವ ಅಭಿಲಾಷೆ ಹೊಂದಿದ್ದರು. ಹಾಗಾದರೆ ಪ್ರಕಾಶನನ್ನು ಕೆಲಸ ಬಿಡಿಸಿ ತಮ್ಮೊಡನೆಯೇ ಇಟ್ಟುಕೊಳ್ಳಬಹುದೆಂಬ ದುರಾಲೋಚನೆ ಅವರಿಗೆ. ಆದರೆ ಸುಮಾ ಓದಿದವಳು. ಅದೇ ಊರಿನವಳು. ಅವಳಿಗೆ ತಮ್ಮ ಮನೆಯ ವಿದ್ಯಮಾನಗಳು ತಿಳಿದಿವೆ. ಆದ್ದರಿಂದ ಮುಂದೊಂದು ತಮಗೆದುರಾಗಿ ತಿರುಗಿ ನಿಲ್ಲಬಹುದು ಎಂದು ಆ ಮದುವೆಯನ್ನು ವಿರೋಧಿಸಿದ್ದರು. ಆದರೆ ಅವೆಲ್ಲ ಪ್ರತಿರೋಧಗಳ ನಡುವೆಯೂ ಪ್ರಕಾಶ, ಸುಮಾಳ ಮದುವೆ ನಡೆದುಹೋಯಿತು. ಕೆಲವು ಕಾಲದಲ್ಲಿಯೇ ಅವರಿಗೊಬ್ಬ ಮಗನೂ ಹುಟ್ಟಿದ.

ಪ್ರಕಾಶನಿಗೆ ಆಗ ತನ್ನ ತಾಯಿಯನ್ನು ಕರೆದುಕೊಂಡು ಹೋಗಿ ತನ್ನೊಡನೆ ಇರಿಸಿಕೊಳ್ಳಬೇಕೆಂಬ ಆಸೆಯಿತ್ತು. ಮಾವ ಸಿದ್ದೇಗೌಡರು ಅದಕ್ಕೊಪ್ಪಲೇ ಇಲ್ಲ. ಒತ್ತಾಯಮಾಡಿದಾಗಲೆಲ್ಲ "ನಿನ್ನ ಸಂಬಳದಲ್ಲಿ, ಆ ಬೆಂಕಿಪೊಟ್ಟಣದಂತ ಮನೆಯಲ್ಲಿ ಅದು ಸಾಧ್ಯವಾಗದು. ನಿನ್ನ ಸಂಬಳ ಹೆಚ್ಚಾಗಿ ದೊಡ್ಡ ಮನೆಗೆ ಬದಲಾಯಿಸಿದಾಗ ನೋಡೋಣ" ಎಂದು ಮಾತು ತಳ್ಳಿಹಾಕುತ್ತಿದ್ದರು. ತುಂಬ ಬಲವಂತ ಮಾಡಿದಾಗೊಮ್ಮೆ "ನೋಡಪ್ಪಾ ನನ್ನ ತಂಗಿ ನನಗೆ ಏನೂ ಭಾರವಲ್ಲ. ಅವಳನ್ನು ನಾನಿರುವವರೆಗೂ ಎಲ್ಲಿಗೂ ಕಳುಹಿಸುವುದಿಲ್ಲ. ಬೇಕಿದ್ದರೆ ಒಂದೆರಡು ದಿನ ಕರೆದುಕೊಂಡು ಹೋಗಿ ತಂದುಬಿಡು" ಎಂದು ಆಖೈರಾಗಿ ಹೇಳಿಬಿಟ್ಟರು.

* * *

ಇದೆಲ್ಲಾ ಆದಮೇಲೆ ಅವನ ತಾಯಿ ಕಾವೇರಿ ಕೂಡ "ಮಗಾ ಮನೆಯವರನ್ನೆಲ್ಲಾ ಎದುರು ಹಾಕಿಕೊಂಡು ನಾನು ಅಲ್ಲಿಗೆ ಬರೋಕೆ ಆಗಲ್ಲ. ಅದು ಆಗಹೋಗದ ಮಾತು. ಅವತ್ತಿನ ದಿನ ನಮ್ಮಣ್ಣ, ಅತ್ತಿಗೆ ನನ್ನ ಕೈಹಿಡಿಯದಿದ್ದರೆ ನಾವಿಬ್ಬರೂ ಪರದೇಶಿಗಳಾಗುತ್ತಿದ್ದೆವು. ನಮ್ಮನ್ನು ತಮ್ಮ ಮಡಿಲಿಗೆ ಹಾಕಿಕೊಂಡು ನಮಗೊಂದು ನೆಲೆ ಒದಗಿಸಿದ್ದಾರೆ" ಎಂದು ಮಗನನ್ನು ಸಮಾಧಾನ ಪಡಿಸಿದ್ದಳು. ಪ್ರಕಾಶನಿಗೆ ಏನೂ ಮಾಡಲಿಕ್ಕಾಗದೇ ತಾನೇ ಆಗಾಗ್ಗೆ ಬಂದು ತಾಯಿಯನ್ನು ನೋಡಿಕೊಂಡು ಹೋಗುತ್ತಿದ್ದ. ವರ್ಷಗಳು ಉರುಳಿದಂತೆಲ್ಲ ಅವನ ತಾಯಿ ನವೆದುಹೋದಂತೆ ಕಾಣುತ್ತಿದ್ದಳು. ಅದರ ಬಗ್ಗೆ ವಿಚಾರಿಸಿದಾಗಲೆಲ್ಲ "ವಯಸ್ಸಾಯಿತು. ದೇಹಕ್ಕೆ ಸಣ್ಣಪುಟ್ಟ ತೊಂದರೆಗಳಿದ್ದೇ ಇರುತ್ತವೆ. ಇದೆಲ್ಲ ಸಹಜ" ಎಂದು ಮಾತು ಬದಲಾಯಿಸುತ್ತಿದ್ದಳು. ಜಡ್ಡು ಜಾಪತ್ರೆಯಾದಾಗ ಅದೇ ಹಳ್ಳಿಯಲ್ಲಿದ್ದ ಆಯುರ್ವೇದಿಕ್ ಪಂಡಿತರಿಂದ ಮದ್ದು ಕೊಡಿಸುತ್ತಿದ್ದರು ಅವನ ಮಾವ ಆದರೆ ದಿನೇದಿನೇ ಹದಗೆಟ್ಟ ಆರೋಗ್ಯದಿಂದ ಕೊನೆಗೊಂದು ದಿನ ತೀರಿಕೊಂಡಳೆಂದು ಅವನಿಗೆ ಸುದ್ದಿ ಬಂತು. ಓಡಿಬಂದಿದ್ದ. ಆದರೇನು ಎಲ್ಲವೂ ಮುಗಿದಿತ್ತು. ಆ ಮನೆಗಾಗಿ ದುಡಿದೂ ದುಡಿದೂ ಜೀವತೇಯ್ದು ಅವನಮ್ಮ ತೀರಿಕೊಂಡಿದ್ದಳು. ಅವನ ಅಂತರಂಗ ಹೇಳುತ್ತಿತ್ತು ಅವಳ ಸಾವಿಗೆ ಸಿದ್ದೇಗೌಡರ ನಿರ್ಲಕ್ಷ್ಯವೇ ಕಾರಣ ಎಂದು. ಅವರಿಗೆ ಮನೆ ಕೆಲಸದ ಆಳು ಬೇಕಾಗಿತ್ತು ಅವಳಿಂದ ದುಡಿಸಿಕೊಂಡರು. ಅಂತ್ಯಕ್ರಿಯೆಗಳ ನಂತರ ಪ್ರಕಾಶ, ಸುಮಾ ಹಿಂತಿರುಗಿ ಹೊರಟಿದ್ದರು.


* * *

"ಶ್ರೀ ಶ್ರೀ ನಾನು ಮಾತನಾಡುತ್ತಿದ್ದೇನೆ. ನೀವು ಯಾವ ಲೋಕದಲ್ಲಿದ್ದೀರಿ. ಉತ್ತರವೇ ಕೊಡುತ್ತಿಲ್ಲ" ಎಂದು ಹೆಂಡತಿ ಭುಜ ಅಲುಗಿಸಿ ಕರೆದಾಗ ವಾಸ್ತವಕ್ಕೆ ಹಿಂದಿರುಗಿದ್ದ ಪ್ರಕಾಶ. ದೀರ್ಘವಾದೊಂದು ನಿಟ್ಟುಸಿರು ಬಿಟ್ಟು "ಹೌದು ಸುಮಾ ನಾನು ಕಳೆದುಹೋಗಿದ್ದೆ. ಹಿಂದಿನ ನೆನಪುಗಳಲ್ಲಿ. ಈಗ ಸ್ಪಷ್ಟವಾಯಿತು. ಮಾವನ ಮಕ್ಕಳು ಪರದೇಶದಲ್ಲಿದ್ದಾರೆ. ಮನೆಯ ಅಳಿಯ ಮೈಗಳ್ಳನಾಗಿದ್ದಾನೆ. ಅವರಿಗೆ ಹೇಳಿದಂತೆ ಕೇಳಿಕೊಂಡು ದುಡಿಯುತ್ತಾ, ಅವರಿಗೆ ಅಡಿಯಾಳಾಗಿರುವ ಪ್ರಾಮಾಣಿಕ ಮನುಷ್ಯ ಬೇಕಾಗಿದೆ. ಈಗಿನ ಕಾಲದಲ್ಲಿ ಇಂತಹ ನಂಬಿಕೆಯುಳ್ಳ ಆಳುಗಳು ಎಲ್ಲಿ ಸಿಗುತ್ತಾರೆ. ಅದಕ್ಕೇ ಮಾವನ ಈ ಹೊಸಜಾಲ. ನಮ್ಮನ್ನು ಇಲ್ಲಿಯೇ ತಮ್ಮ ಹಂಗಿನಲ್ಲಿ ಇರಿಸಿಕೊಂಡರೆ ಅವರಿಗೆ ಕೊನೆಯವರೆಗೆ ನಮ್ಮ ಸೇವೆ ದೊರಕುವಂತಾಗುತ್ತದೆ. ಅವರನ್ನು ನಾನು ಈಗ ಎದುರು ಹಾಕಿಕೊಂಡರೆ ನಮ್ಮ ಬಗ್ಗೆ ಅಪಪ್ರಚಾರ ಮಾಡಬಹುದು. ಕತೆಗಳನ್ನು ಹುಟ್ಟು ಹಾಕಬಹುದು. ಆದರೆ ನನ್ನ ನಿರ್ಧಾರ ಅಚಲವಾಗಿದೆ. ನಮ್ಮ ಅಮ್ಮ ಅವರ ಉಪಕಾರದ ಋಣವನ್ನು ತನ್ನ ಜೀವತೇಯ್ದು ತೀರಿಸಿದ್ದಾಳೆ. ಇನ್ನು ಮುಂದೆ ಮತ್ತೆ ಇಲ್ಲಿಯೇ ಮುಂದುವರೆಯುವುದು ಬೇಡ. ನಾವು ಗಂಜಿ ಕುಡಿದು ಬದುಕಿದರೂ ಸರಿ ಅವರ ಹಂಗಿನರಮನೆ ನಮಗೆ ಬೇಡ. ನಮ್ಮ ಬದುಕು ನಮ್ಮಂತೆಯೇ ಇರಲಿ" ಎಂದು ಹೆಂಡತಿಗೆ ಹೇಳಿದ. ಸುಮಾಳಿಗೆ ತನ್ನತ್ತೆ ಮೂಗ ಬಸವನ್ನ ರೀತಿ ಸಿದ್ದೇಗೌಡರ ಮನೆಯಲ್ಲಿ ದುಡಿಯುತ್ತಿದ್ದ ಚಿತ್ರ ಕಣ್ಮುಂದೆ ಬಂತು. ಗಂಡನ ನಿರ್ಧಾರದಿಂದ ಮನಸ್ಸಿಗೆ ನೆಮ್ಮದಿಯಾಯಿತು. ಹಾಗೆಯೇ ತೃಪ್ತಿಯಿಂದ ಗಂಡನ ಹೆಗಲಿಗೊರಗಿ ಕಣ್ಮುಚ್ಚಿ ನಿದ್ರೆ ಮಾಡಲು ಪ್ರಯತ್ನಿಸಿದಳು.

ಪ್ರಕಾಶನಿಗೆ ಆಗ ತನ್ನ ತಾಯಿಯನ್ನು ಕರೆದುಕೊಂಡು ಹೋಗಿ ತನ್ನೊಡನೆ ಇರಿಸಿ ಕೊಳ್ಳಬೇಕೆಂಬ ಆಸೆಯಿತ್ತು. ಮಾವ ಸಿದ್ದೇಗೌಡರು ಅದಕ್ಕೊಪ್ಪಲೇ ಇಲ್ಲ. ಒತ್ತಾಯ ಮಾಡಿದಾಗಲೆಲ್ಲ "ನಿನ್ನ ಸಂಬಳದಲ್ಲಿ, ಆ ಬೆಂಕಿಪೊಟ್ಟಣ ದಂತ ಮನೆಯಲ್ಲಿ ಅದು ಸಾಧ್ಯವಾಗದು. ನಿನ್ನ ಸಂಬಳ ಹೆಚ್ಚಾಗಿ ದೊಡ್ಡ ಮನೆಗೆ ಬದಲಾಯಿಸಿದಾಗ ನೋಡೋಣ" ಎಂದು ಮಾತು ತಳ್ಳಿಹಾಕುತ್ತಿದ್ದರು. ತುಂಬ ಬಲವಂತ ಮಾಡಿದಾಗೊಮ್ಮೆ "ನೋಡಪ್ಪಾ ನನ್ನ ತಂಗಿ ನನಗೆ ಏನೂ ಭಾರವಲ್ಲ. ಅವಳನ್ನು ನಾನಿರುವವರೆಗೂ ಎಲ್ಲಿಗೂ ಕಳುಹಿಸುವುದಿಲ್ಲ. ಬೇಕಿದ್ದರೆ ಒಂದೆರಡು ದಿನ ಕರೆದು ಕೊಂಡು ಹೋಗಿ ತಂದುಬಿಡು" ಎಂದು ಆಖೈರಾಗಿ ಹೇಳಿಬಿಟ್ಟರು.

"ಅವರಿಬ್ಬರ ಮಾತಿಗೆ ಪ್ರತ್ಯುತ್ತರ ಕೊಡದೆ ಬರೀ ತಲೆಯಲ್ಲಾಡಿಸಿ ಹೆಂಡತಿ ಮಗ ಧೃವನೊಡನೆ ಬಸ್‌ಸ್ಟ್ಯಾಂಡಿನತ್ತ ನಡೆದ ಪ್ರಕಾಶ. ಕಳಲೆಯಿಂದ ಮೈಸೂರಿಗೆ ತಲುಪಿ ಅಲ್ಲಿಂದ ತುಮಕೂರಿಗೆ ಬಸ್ ಹತ್ತಿದರು. ಬಸ್ಸು ಮುಂದಕ್ಕೆ ಸಾಗುತ್ತಿದ್ದಂತೆ ಪ್ರಕಾಶನ ಮಡದಿ ಸುಮಾಳಿಗೆ ಮನಸ್ಸಿನಲ್ಲಿ ದೊಂಬರಾಟ ಪ್ರಾರಂಭವಾಯಿತು. ಅವಳೂ-ಅದೇ ಊರಿನಲ್ಲಿ ಬೆಳೆದವಳಾದ್ದರಿಂದ ಅವಳಿಗೆ ಚಿಕ್ಕಂದಿನಿಂದಲೂ ಪ್ರಕಾಶನ ತಾಯಿ ಸಿದ್ದೇಗೌಡರ ಮನೆಯಲ್ಲಿ ಅನುಭವಿಸಿದ ಬವಣೆಗಳ ವಿವರಗಳನ್ನು ತನ್ನ ತಂದೆ, ತಾಯಿಯ ಬಾಯಿಂದ ಅನೇಕ ಬಾರಿ ಕೇಳಿ ತಿಳಿದಿದ್ದಳು. ಸಿದ್ದೇಗೌಡರು ತಮ್ಮ ತಂಗಿಯ ಗಂಡನನ್ನು ಕಳೆದುಕೊಂಡ ನಂತರ ಪುಟ್ಟ ಮಗನೊಡನೆ ಅಲ್ಲಿಗೆ ಬಂದಾಗ ಅವಳಿಗೆ ಆಶ್ರಯ ನೀಡಿದ್ದು ನಿಜವಾದರೂ, ಅವಳು ಮತ್ತು ಅವಳ ಮಗನಿಗೆ ಸುಮ್ಮನೆ ಕೂಡಿಸಿ ಏನೂ ಊಟ ಹಾಕಿದ್ದಿಲ್ಲ. ಅವರಿಂದ ನಿರಂತರವಾಗಿ ಜೀತದಾಳಿಗಿಂತ ಹೆಚ್ಚಾಗಿ ದುಡಿಸಿಕೊಳ್ಳುತ್ತಿದ್ದರು. ಇದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು. ಪ್ರಕಾಶ ತನ್ನನ್ನು ಮದುವೆಯಾಗಲು ಇಷ್ಟಪಟ್ಟಾಗಲೂ ಅದಕ್ಕೆ ಗೌಡರ ಮನೆಯಿಂದ ಸಾಕಷ್ಟು ವಿರೋಧ ಎದುರಾಗಿತ್ತು.

ಅವನನ್ನು ಶಾಲೆಗೂ ಕಳುಹಿಸುತ್ತಿದ್ದರು. ಆದರೆ ಓದಿಕೊಳ್ಳಲು ಅವನಿಗೆ ಕೆಲಸಗಳ ಮಧ್ಯೆ ಪುರುಸೊತ್ತು ಸಿಗುತ್ತಿರಲಿಲ್ಲ. ಮಾವನ ಮಕ್ಕಳು ಓದಿನಲ್ಲಿ ಯಾವಾಗಲೂ ಹಿಂದೆ. ಹೇಗೊ ಪರೀಕ್ಷೆಗಳಲ್ಲಿ ಜೀವನಾಂಶದಷ್ಟು ಪಡೆದು ತೇರ್ಗಡೆ ಯಾಗುತ್ತಿದ್ದರು. ಅಂಥಹವರನ್ನು ಉದ್ದಕ್ಕೂ ಹಣ ಸುರಿದು ಖಾಸಗಿ ಕಾಲೇಜುಗಳಿಗೆ ಸೇರಿಸಿ ಹಾಗೂ-ಹೀಗೂ ಇಂಜಿನಿಯರಿಂಗ್ ಪಾಸಾಗುವಂತೆ ಮಾಡಿದರು. ಹಣವಂತ ಬೀಗರುಗಳನ್ನು ಹುಡುಕಿ ಅವರ ಮನೆಯ ಹೆಣ್ಣುಗಳನ್ನು ತಂದು ಮದುವೆ ಮಾಡಿಸಿದರು. ಸಾಲದ್ದಕ್ಕೆ ಅವರವರ ಮಾವಂದಿರ ಶಿಫಾರಸ್ಸು, ಹಣದ ಬಲದಿಂದ ವಿದೇಶಗಳಿಗೂ ಕಳಿಸುವ ವ್ಯವಸ್ಥೆಯಾಯಿತು. ಅಲ್ಲಿ ಹೇಗೋ ಅವರ ಜೀವನ ನಡೆಯುತ್ತಿತ್ತು. ಸಿದ್ದೇಗೌಡರ ಕರ್ತವ್ಯ ಮುಗಿದಿತ್ತು.



ವಾರಭವಿಷ್ಯ

5.5.2024 ರಿಂದ 11.5.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :- ರವಿ-ಮೇಷ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಮೀನ, ಬುಧ-ಮೀನ, ಗುರು-ವೃಷಭ, ಶುಕ್ರ-ಮೇಷ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆರಂಭಕ್ಕೆ ಮನೆಯಲ್ಲಿ ಅನುಕೂಲಕರ ವಾತಾವರಣ. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ತತ್ವಜ್ಞಾನ, ಧಾರ್ಮಿಕ ಕಾರ್ಯಗಳಲ್ಲಿ ಭಾಗಿ. ಪ್ರತಿಜ್ಞಾ ಪರಿಪಾಲನೆಯಿಂದ ನೆರೆಹೊರೆಯಲ್ಲಿ ಮೆಚ್ಚುಗೆಗೆ ಪಾತ್ರರಾಗುವಿರಿ. ಕೆಲವು ಪ್ರಸಂಗಗಳು ಅಪ್ರಯತ್ನವಾಗಿಯೇ ಈಡೇರುವುದು. ರಾಹು ಶುಭವಿಲ್ಲದ ಕಾರಣ ನಂಬಿಕೆಗೆ ಅರ್ಹರಲ್ಲದವರೊಡನೆ ಹಣಕಾಸು ವ್ಯವಹಾರ ಬೇಡಿ.
ಶ್ರೀ ಸುಬ್ರಹ್ಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಶ್ರೀ ಬೃಹಸ್ಪತಿ ನಿಮ್ಮ ರಾಶಿಗೆ ಬಂದಿರುವುದರಿಂದ ಇತರರ ಬಗ್ಗೆ ನಿಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಿ. ಕಚೇರಿ ಅಥವಾ ಕೆಲಸದ ಸ್ಥಳದಲ್ಲಿ ಹೆಚ್ಚುವರಿ ಕೆಲಸದ ಹೊರೆಯಿಂದಾಗಿ ನಿಮ್ಮ ಸಹೋದ್ಯೋಗಿಗಳ ಜೊತೆ ನಿಮ್ಮ ಸಂಬಂಧಗಳು ಕೆಡಬಹುದು. ಮನೆಯಲ್ಲಿಯೂ ಅಸಮಾಧಾನವನ್ನು ಎದುರಿಸಬೇಕಾದೀತು. ವಾರದ ಕಡೆಗೆ ಉತ್ಸಾಹಶೀಲರಾಗಿರುತ್ತೀರಿ. ಧನಲಾಭದ ನಿರೀಕ್ಷೆಯನ್ನು ಹೊಂದಿರಬಹುದು.
ಶ್ರೀ ದೇವೀ ಆರಾಧನೆ. ಶುಭ ಸಂಖ್ಯೆ-8.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರ ಪೂರ್ತಿ ಚಂದ್ರ ಸಂಚಾರ ಶುಭವಿದ್ದು, ನಿಮ್ಮ ಮನೋ ಇಚ್ಛಿತ ಕಾರ್ಯಗಳು ಹಿತೈಷಿಗಳ ನೆರವಿನಿಂದ ಕಾರ್ಯಗತಗೊಳ್ಳಲಿದೆ. ಇದಕ್ಕೆ ಸ್ತ್ರೀಯರೊಬ್ಬರ ಒತ್ತಾಸೆಯೂ ದೊರಕಲಿದೆ. ಹೋಟೆಲ್, ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಧನಾದಾಯವಾಗುವುದು. ಕೇತುಗ್ರಹದ ಪ್ರೇರಣೆಯಿಂದ ದುರಾಚಾರಕ್ಕೆ ಮನಸ್ಸಾಗುವುದು. ಅದಕ್ಕೆ ಅವಕಾಶ ಕೊಡದಿರಿ.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಬೃಹತ್ ಗ್ರಹ ಬೃಹಸ್ಪತಿ ಲಾಭ ಸ್ಥಾನಕ್ಕೆ ಬಂದು ಆಗಿದೆ. ನಿಮಗೆ ಅನುಕೂಲ ಪರಿಸ್ಥಿತಿಗಳು ಒದಗುವುದು. ಕುಟುಂಬ ವರ್ಗದಲ್ಲಿ ಸಂತೋಷ, ಶಾಂತಿ, ಸುಖಗಳನ್ನು ಕಾಣುವಿರಿ. ನಿಮ್ಮ ಆರೋಗ್ಯ ಪರಿಸ್ಥಿತಿಯೂ ಬಹುಮಟ್ಟಿಗೆ ಸುಧಾರಿಸುವುದು. ಹೊಸ ಮಿತ್ರರ ಪರಿಚಯವಾಗುತ್ತೆ. ನ್ಯಾಯಾಲಯದ ವಿಚಾರದಲ್ಲಿ ಹಿನ್ನಡೆ ಉಂಟಾಗಬಹುದು. ಸರ್ಕಾರಿ ಉದ್ಯೋಗಿಗಳು ಎಚ್ಚರಿಕೆಯಿಂದ ವರ್ತಿಸಬೇಕು.
ಶ್ರೀ ದುರ್ಗಾಸ್ತುತಿ ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವ್ಯಾಪಾರ ವ್ಯವಹಾರಗಳು ತೃಪ್ತಿಕರವಾಗಿ ನಡೆಯುತ್ತದೆ. ಆರ್ಥಿಕ ಮುಗ್ಗಟ್ಟು ಕಡಿಮೆ ಆಗಿ ಮಾನಸಿಕ ಶಾಂತಿ ದೊರೆಯುತ್ತದೆ. ಹೊಸ ವಸ್ತ್ರಾಭರಣಗಳನ್ನು ಕೊಳ್ಳುವಿರಿ. ಸರ್ಕಾರಿ ಉದ್ಯೋಗಿಗಳಿಗೆ ಮೇಲಧಿಕಾರಿಗಳಿಂದ ಕಿರುಕುಳ. ರಾಜಕಾರಣಿಗಳಿಗೆ ನೂತನ ಅಪವಾದಗಳು ಸುತ್ತಿಕೊಳ್ಳುವುದು. ಉಷ್ಣ ಸಂಬಂಧಿ ಕಾಯಿಲೆ ಕಾಡುವುದು. ಸಟ್ಟಾ, ಜೂಜುಗಳಿಗೆ ಕೈ ಹಾಕಬೇಡಿ.
ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-8

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)
ಭಾಗ್ಯ ಸ್ಥಾನಕ್ಕೆ ಗುರುದೇವ ಬಂದ ಪರಿಣಾಮ ನಿಮ್ಮ ತಾಪತ್ರಯಗಳೆಲ್ಲಾ ಕಾಲ ಕ್ರಮೇಣ ಹರಿದುವೆಂದೇ ಭಾವಿಸಿ. ಎಲ್ಲಾ ರೀತಿಯಲ್ಲೂ ಅನುಕೂಲಕರ ಸನ್ನಿವೇಶಗಳನ್ನು ಎದುರು ನೋಡುವಿರಿ. ರಾಜಕೀಯ ವ್ಯವಹಾರಗಳು ತೃಪ್ತಿಕರವಾಗಿ ಮುನ್ನಡೆಯುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವುದು. ಜನ್ಮಸ್ಥ ಕೇತು ಇರುವುದರಿಂದ ಅಲ್ಪ ಸ್ವಲ್ಪ ಶಾರೀರಿಕ ಕಷ್ಟ ಫಲವು ಇರುತ್ತದೆ.
ಶ್ರೀ ರಾಮನಾಮ ಜಪ. ಶುಭ ಸಂಖ್ಯೆ-3

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಕುಟುಂಬ ವರ್ಗದವರ ಸಹಕಾರದಿಂದ ವ್ಯಾಪಾರ ಉದ್ಯೋಗಗಳು ಲಾಭದಾಯಕವಾಗಿ ನಡೆಯುವುದು. ಪ್ರವಾಸೋದ್ಯಮ ಸಂಸ್ಥೆಗಳಿಗೆ ಹೇರಳ ಲಾಭ ದೊರೆಯಲಿದೆ. ನೀವು ಪ್ರಗತಿಪರ ಚಿಂತನೆಗಳಲ್ಲಿ ಕಾರ್ಯಮಗ್ನರಾಗುವಿರಿ. ಕೃಷಿಕರಿಗೆ ಶ್ರಮಕ್ಕೆ ಪ್ರತಿಫಲ ದೊರೆಯದೇ ಬೇಸರ. ಆರೋಗ್ಯದಲ್ಲಿ ಏರು-ಪೇರು ಉಂಟಾಗುವ ಸಂಭವ. ವಾರಾಂತ್ಯಕ್ಕೆ ಸಾಧು-ಸಜ್ಜನರ ಭೇಟಿಯಿಂದ ನೆಮ್ಮದಿ.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ನಾವು ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳಬೇಕು. ನಿಮ್ಮ ಆಸೆ, ಆಕಾಂಕ್ಷೆಗಳಿಗೆ ಇದೀಗ ಗುರುಬಲ ಬಂದಿದೆ. ವಿದ್ಯಾ ಪ್ರಸಂಗಗಳಲ್ಲಿ ಪ್ರಶಂಸೆ, ಪ್ರಶಸ್ತಿಗಳು ದೊರೆಯಲಿದೆ. ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರಗಳಿಂದ ಜೀವನದಲ್ಲಿ ಮೇಲು ಸ್ತರಕ್ಕೆ ಬರುವಿರಿ. ವಾರದ ಕಡೆಗೆ ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ನಿರೀಕ್ಷಿಸಿ.
ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರ ನಿಮ್ಮ ಮನೋವಿಕಾರಗಳನ್ನು ಹತೋಟಿಯಲ್ಲಿ ಇಡುವುದು ಒಳ್ಳೆಯದು. ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಅನ್ಯಥಾ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ. ಪ್ರಾರಬ್ಧ ಕರ್ಮವನ್ನು ಕಳೆಯಲು ಕರ್ತವ್ಯದಲ್ಲಿ ಭಗವಂತನನ್ನು ಕಾಣಿ. ವಾರ ಮಧ್ಯಾನಂತರ ರೆಡಿಮೇಡ್ ಗಾರ್ಮೆಂಟ್ ವ್ಯಾಪಾರಿಗಳಿಗೆ, ಕೇಟರಿಂಗ್ ಸಂಸ್ಥೆಗಳಿಗೆ ಉತ್ತಮ ಆದಾಯ ದೊರಕುವುದು.
ಶ್ರೀ ದತ್ತ ಗುರು ದರ್ಶನ. ಶುಭ ಸಂಖ್ಯೆ-2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ನೀವಂದುಕೊಂಡದ್ದೇ ಒಂದು, ಆಗುತ್ತಿರುವುದೇ ಮತ್ತೊಂದು. ನಿಮ್ಮವರೇ ದುಃಖಕ್ಕೆ ಕಾರಣವಾಗಬಹುದು. ಅಸೂಯಾಪರರು ನಿಮ್ಮನ್ನು ನಿಂದಿಸುವರು. ಪರೋಪಕಾರ ಬುದ್ಧಿಯಿಂದ ಜನಾದರಗಳಿಸುವಿರಿ. ನಿಮ್ಮ ದೊಡ್ಡ ಯೋಜನೆಗಳು ಪರಿಶ್ರಮದಿಂದ ಕಾರ್ಯಸಿದ್ಧಿಯಾಗುವುದು. ವಾಹನ ರಿಪೇರಿಗಾಗಿ ಹಣ ಖರ್ಚಾಗುವುದು. ವಾರಾಂತ್ಯಕ್ಕೆ ಶರೀರದಲ್ಲಿ ವಿಕಾರತೆಗಳು ಉಂಟಾದೀತು, ಸಲಹುವ ದೇವರನ್ನು ಮರೆಯದಿರಿ.
ಶ್ರೀ ಶನಿ ಮಹಾತ್ಮೆ ಕಥೆ ಓದಿ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಕಳೆದ ವಾರಕ್ಕಿಂತ ಈ ವಾರ ಉತ್ತಮವೆಂದು ಹೇಳಬಹುದು. ಆರ್ಥಿಕ ಮುಗ್ಗಟ್ಟು ಬಹುಮಟ್ಟಿಗೆ ಕಡಿಮೆ ಆಗಿ ಋಣಬಾಧೆ ಪರಿಹಾರವಾಗುವುದು. ಆಪ್ತೇಷ್ಟರಿಂದ ಸಕಾಲದಲ್ಲಿ ಸಹಾಯ ದೊರೆಯುವುದು. ರಾಜಕೀಯ ವ್ಯವಹಾರಗಳನ್ನು ಆದಷ್ಟು ಜಾಗ್ರತೆಯಿಂದ ಪೂರೈಸಿ ಅನ್ಯಥಾ ಲೋಕಾಪವಾದದ ಸುಳಿಯಲ್ಲಿ ಸಿಲುಕುವಿರಿ. ಲಾಟರಿ, ಬೆಟ್ಟಿಂಗ್‌ಗಳಿಗೆ ಕೈ ಹಾಕಿ ನಷ್ಟ ಅನುಭವಿಸುವಿರಿ.
ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-7

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಬರುವ ಚಂದ್ರ, ಹರ್ಷೋಲ್ಲಾಸ, ವ್ಯಾಪಾರ ವ್ಯವಹಾರಗಳಲ್ಲಿ ಧನಲಾಭಗಳನ್ನು ದಯಪಾಲಿಸುವನು. ಕುಟುಂಬ ವರ್ಗದವರಲ್ಲಿ ಆರೋಗ್ಯ ನೆಲೆಸುವುದು. ಅನಿರೀಕ್ಷಿತ ಪತ್ರಾಗಮನ ಹಾಗೂ ಪ್ರವಾಸಗಳನ್ನು ಕೈಗೊಳ್ಳುವಿರಿ. ಸರ್ಕಾರಿ ನೌಕರರು ಅಕ್ರಮ ಕೆಲಸಗಳನ್ನು ಮಾಡಿ ತೊಂದರೆಯನ್ನು ಆಹ್ವಾನಿಸಿಕೊಳ್ಳುವರು. ಉತ್ತಮರ ಸಹವಾಸ ಮಾಡಿ ಒಳಿತಾಗುವುದು.
ಶ್ರೀ ಶ್ರೀಧರಸ್ವಾಮಿ ಉಪಾಸನೆ. ಶುಭ ಸಂಖ್ಯೆ-4

ಮೈಸೂರು ಮಿತ್ರ

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ; ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ಸಾವು

ನಂಜನಗೂಡು, ಮೇ 4– ಪ್ರತ್ಯೇಕ ಪ್ರಕರಣಗಳಲ್ಲಿ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನಲ್ಲಿ ನಡೆದಿದೆ.

ರಾಜಮಣಿ ವರ್ಮ: ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಶುಕ್ರವಾರ ರಾತ್ರಿ ನಗರದ ಹೊಸ ರೈಲ್ವೆ ಮೇಲ್ಸೇತುವೆ ಬಳಿ ನಡೆದಿದೆ.

ಉತ್ತರಪ್ರದೇಶ ಮೂಲದ ರಾಜಮಣಿ ವರ್ಮ (30) ಸಾವನ್ನಪ್ಪಿದವರು. ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಹಿಂದೂಸ್ತಾನ್ ಫುಡ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಈತ ನಗರದ ಬಸವನಗುಡಿ ಬ್ಲಾಕ್‌ನಲ್ಲಿ ಸ್ನೇಹಿತರೊಂದಿಗೆ ವಾಸವಾಗಿದ್ದ ಎನ್ನಲಾಗಿದೆ. ಕಾರ್ಯ ನಿಮಿತ್ತ ಶುಕ್ರವಾರ ರಾತ್ರಿ 10.30ರ ವೇಳೆ ನಗರದ ಹೊಸ ರೈಲ್ವೆ ಮೇಲ್ಸೇತುವೆ ಬಳಿ ಬೈಕ್‌ನಲ್ಲಿ ತೆರಳಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಕಳೆದ 6 ತಿಂಗಳ ಹಿಂದೆ ಮದುವೆಯಾಗಿದ್ದ ರಾಜಮಣಿ ವರ್ಮ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರಿಂದಾಗಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು, ನಾಗನಾಯಕ, ಕೇಶವ್, ಅನಂತು ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.


ರಂಗಸ್ವಾಮಿ

ರಂಗಸ್ವಾಮಿ: ಮತ್ತೊಂದು ಇದೇ ರೀತಿಯ ಪ್ರಕರಣ ಹುಲ್ಲಹಳ್ಳಿಯ ರಾಂಪುರ ಸೇತುವೆ ಬಳಿ ಶುಕ್ರವಾರ ರಾತ್ರಿ ನಡೆದಿದೆ.

ತಾಲೂಕಿನ ಕೆಂಬಾಲು ಗ್ರಾಮದ ನಿವಾಸಿ ರಂಗಸ್ವಾಮಿ(37) ಸಾವನ್ನಪ್ಪಿದವರು. ಈತ ಶುಕ್ರವಾರ ರಾತ್ರಿ ಗೃಹೋಪಯೋಗಿ ಸಾಮಾಗ್ರಿಗಳನ್ನು ಖರೀದಿಸಲು ಹುಲ್ಲಹಳ್ಳಿಗೆ ಆಗಮಿಸಿದ್ದ ಈತ ವಾಪಸ್ ಸ್ವಗ್ರಾಮ ಕೆಂಬಾಲು ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ರಾಂಪುರ ಸೇತುವೆ ಬಳಿ ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಹುಲ್ಲಹಳ್ಳಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಹುಲ್ಲಹಳ್ಳಿ ಪೊಲೀಸ್ ಠಾಣೆ ಎಸ್‌ಐ ಚಂದ್ರಶೇಖರ್ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧೆ

ಗ್ರಾಪಂ ಸದಸ್ಯೆ, ತಹಸೀಲ್ದಾರ್ ಸೇರಿ ನಾಲ್ವರ ವಿರುದ್ಧ ಕೇಸ್



ಬೆಟ್ಟದಪುರ, ಮೇ 4– ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಸದಸ್ಯೆ ಹಾಗೂ ಆಕೆಗೆ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ್ದ ಹಿಂದಿನ ತಹಸೀಲ್ದಾರ್ ಸೇರಿದಂತೆ ನಾಲ್ವರ ವಿರುದ್ಧ ಮೈಸೂರಿನ ಡಿಸಿಆರ್‌ಇ ಸಬ್ ಇನ್ಸ್‌ಪೆಕ್ಟರ್ ಆರ್.ಕಿರಣ್ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರೇಖಾ ಅಲಿಯಾಸ್ ರುಕಿಯಾ ಬಾನು ಅಲಿಯಾಸ್ ರುಕ್ಸಾರ್ ಅವರು ಹುಟ್ಟಿನಿಂದಲೂ ಮುಸ್ಲಿಂ ಜನಾಂಗಕ್ಕೆ ಸೇರಿದವರಾಗಿದ್ದು, ವಿವಾಹದ ನಂತರ ಪರಿಶಿಷ್ಟ ಜಾತಿಯ ಮೀಸಲಾತಿಗಳನ್ನು ಪಡೆಯುವ ಉದ್ದೇಶದಿಂದ ತಹಸೀಲ್ದಾರ್ ಅವರಿಂದ ಪರಿಶಿಷ್ಟ ಜಾತಿಯ ಭೋವಿ ಜನಾಂಗಕ್ಕೆ ಸೇರಿದ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಅದರ ಆಧಾರದ ಮೇಲೆ ಬೆಟ್ಟದಪುರ ಗ್ರಾಪಂ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದರು.

ಈ ಹಿನ್ನಲೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಚುನಾವಣಾ ಆಯೋಗ ಹಾಗೂ ಸರ್ಕಾರಕ್ಕೆ ವಂಚಿಸಿದ್ದ ಬೆಟ್ಟದಪುರದ ಬಸವೇಶ್ವರ ಕಾಲೋನಿಯ ರೇಖಾ ಅಲಿಯಾಸ್ ರುಕಿಯಾ ಬಾನು ಅಲಿಯಾಸ್ ರುಕ್ಸಾರ್, ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ್ದ ಪಿರಿಯಾಪಟ್ಟಣದ ಹಿಂದಿನ ತಹಸೀಲ್ದಾರ್ ಶ್ವೇತ ರವಿಂದ್ರ ಸುಳ್ಳು ಜಾತಿ ಪ್ರಮಾಣ ಪತ್ರಕ್ಕೆ ವರದಿ ನೀಡಿದ ಅಂದಿನ ರಾಜಸ್ವ ನಿರೀಕ್ಷಕ ದಿ.ಹೆಚ್.ಆರ್.ಗಿರೀಶ್, ಗ್ರಾಮ ಲೆಕ್ಕಾಧಿಕಾರಿ ಧನಂಜಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರು ಪ್ರಕರಣ ದಾಖಲಿಸಿದ್ದಾರೆ.

ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಮೂವರು ಅರ್ಹತೆ


ಅನ್ವೇಷಣಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ಸಂಸ್ಥೆ ಆಡಳಿತ ಮಂಡಳಿ ಸನ್ಮಾನಿಸಿತು.

ಹಿರೀಕ್ಯಾತನಹಳ್ಳಿ, ಮೇ 4– ಜೆಇಇ (ಮೇನ್ಸ್) ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ ಮೂಲಕ ಮುಂದಿನ ಜೆಇಇ (ಅಡ್ವಾನ್ಸ್) ಪರೀಕ್ಷೆಗೆ ಹುಣಸೂರು ತಾಲೂಕಿನ ಬಿಳಿಗೆರೆ ಗ್ರಾಮದ ಅನ್ವೇಷಣಾ ಪದವಿಪೂರ್ವ ಕಾಲೇಜಿನ ಮೂವರು ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದು, ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಕಾರ್ಯದರ್ಶಿ ಹೆಚ್.ಸಿ.ಪ್ರಶಾಂತ್ ಸಂತಸ ವ್ಯಕ್ತಪಡಿಸಿದರು.

ಇತ್ತೀಚೆಗೆ ಪ್ರಕಟಗೊಂಡ ಜೆಇಇ ಮೇನ್ಸ್ ಪರೀಕ್ಷೆ ಫಲಿತಾಂಶದಲ್ಲಿ ಉತ್ತಮ ಅಂಕ ಗಳಿಸುವ ಮೂಲಕ ಮುಂದಿನ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಗಳಿಸಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳು ಇಂತಹ ಸಾಧನೆ ಮಾಡಿ ಕಾಲೇಜಿಗೆ ಹೆಮ್ಮೆ ತಂದಿದ್ದಾರೆ. ಮುಂದಿನ ಪರೀಕ್ಷೆಯಲ್ಲಿ ಸಾಧನೆ ಮಾಡಿ ತಂದೆ ತಾಯಿಗೆ ಕೀರ್ತಿ ತರಲಿ. ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಅಮೂಲ್ಯ ಕೆ.ಎಲ್, ವರುಣ್ ಕೆ.ಆರ್, ಮನೋಹರ ಅವರಿಗೆ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲೂ ಉತ್ತಮ ಫಲಿತಾಂಶ ದೊರೆಯಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಉಪಪ್ರಾಂಶುಪಾಲೆ ಆಶಾ ನಂದೀಶ್, ಉಪನ್ಯಾಸಕರಾದ ವಾಸೀಂ ಪಾಷ, ರೂಹಿ ಅಫ್ಸಾನ, ರಶ್ಮಿ, ಪುನೀತ್ ಕುಮಾರ್, ವೆಂಕಟೇಶ್, ಆಶಾರಾಣಿ, ಖತೇಜ ಮತ್ತಿತರರಿದ್ದರು.

ಕಾರ್ಮಿಕ ದಿನಾಚರಣೆ: ಸಿಐಟಿಯು ಜಾಥಾ



ತಿ.ನರಸೀಪುರ, ಮೇ 4– ಕಾರ್ಮಿಕ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಸಿಐಟಿಯು ವತಿಯಿಂದ ಜಾಥಾ ನಡೆಸಲಾಯಿತು.

ಸಿಐಟಿಯು ಸಂಘಟನೆ ಸದಸ್ಯರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಕಾರ್ಮಿಕರ ಹಕ್ಕುಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಬಳಿಕ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಬಳಿ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಾಜಿ ರಾವ್ ಕಾರ್ಮಿಕ ಚಳುವಳಿಯ ಇತಿಹಾಸ ಹಾಗೂ ಹೋರಾಟದ ಕುರಿತು ಮಾತನಾಡಿದರು.

ತಾಲೂಕು ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್ ಅವರು ಸಂಘಟನೆ ವಿಸ್ತರಣೆಗೆ ಕರೆ ನೀಡಿದರು. ಈ ವೇಳೆ ಸಿಐಟಿಯು ತಾಲೂಕು ಉಸ್ತುವಾರಿ ಶಶಿಕುಮಾರ್ ಅವರು ಕಾರ್ಮಿಕರ ಹಕ್ಕುಗಳ ಬಗ್ಗೆ ಮನವರಿಕೆ ಮಾಡಿದರು. ಸಭೆಯ ಅಧ್ಯಕ್ಷತೆ ವಹಿಸಿ ತಾಲೂಕು ಉಪಾಧ್ಯಕ್ಷ ಮಾದೇಶ್ ಕಾರ್ಮಿಕರ ಚಳುವಳಿ ಪ್ರಾಮುಖ್ಯತೆ ವಿವರಿಸಿದರು. ಪದಾಧಿಕಾರಿಗಳಾದ ಕೃಷ್ಣ ಮತ್ತು ಗೋವಿಂದ, ಹಲವು ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು



ಹೆಚ್.ಡಿ.ಕೋಟೆ, ಮೇ 4– ಮನೆ ಬಾಗಿಲು ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಸಾವಿರಾರು ರೂ. ಸೇರಿದಂತೆ ಹಲವು ದಾಖಲೆಗಳನ್ನು ದೋಚಿರುವ ಘಟನೆ ಬುಧವಾರ ರಾತ್ರಿ ಪಟ್ಟಣದ ಮುಸ್ಲಿಂ ಬ್ಲಾಕ್‌ನಲ್ಲಿ ನಡೆದಿದ್ದು, ಕಳ್ಳತನ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಪಟ್ಟಣದ ಮುಸ್ಲಿಂ ಬ್ಲಾಕ್ ನಿವಾಸಿ, ನ್ಯಾಯ ಬೆಲೆ ಅಂಗಡಿ ಮಾಲೀಕ ಮುಷರತ್ ಪಾಷ ಎಂಬುವರ ಮನೆಯಲ್ಲೇ ಕಳ್ಳತನವಾಗಿರುವುದು. ಈತ ಬುಧವಾರ ಮಧ್ಯಾಹ್ನ ಕುಟುಂಬ ಸಮೇತರಾಗಿ ಹೈದರಾಬಾದ್‌ಗೆ ಪ್ರವಾಸಕ್ಕಾಗಿ ತೆರಳಿದ್ದರು. ಈ ವೇಳೆ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡ ದುಷ್ಕರ್ಮಿಗಳು ರಾತ್ರಿ ಮನೆ ಬಾಗಿಲು ಮುರಿದು ಒಳನುಗ್ಗಿ ಬೀರುವಿನಲ್ಲಿದ್ದ ಲಕ್ಷಾಂತರ ರೂ. ಬೆಲೆ ಬಾಳುವ 100 ಗ್ರಾಂ ಚಿನ್ನಾಭರಣ ಹಾಗೂ 30 ಸಾವಿರ ರೂ. ಮತ್ತು ಹಲವು ದಾಖಲಾತಿಗಳು ಇದ್ದ ಸೂಟ್‌ಕೇಸ್ ಅನ್ನು ದೋಚಿ ಪರಾರಿಯಾಗಿದ್ದು, ಆಧಾರ್ ಕಾರ್ಡ್, ವೋಟರ್ ಐಡಿ ಸೇರಿದಂತೆ ಕೆಲ ದಾಖಲಾತಿಗಳನ್ನು ಪಟ್ಟಣದ ಸಿದ್ದಾಪ್ಪಾಜಿ ರಸ್ತೆಯ ಅರಳಿ ಮರದ ಬಳಿ ಬಿಸಾಡಿ ಹೋಗಿದ್ದಾರೆ. ಇದನ್ನು ಗಮನಿಸಿದ ಸಾರ್ವಜನಿಕರು ತಕ್ಷಣ ಮುಷರತ್ ಪಾಷ ಅವರಿಗೆ ಕರೆ ಮಾಡಿ ನಿಮ್ಮ ದಾಖಲಾತಿಗಳು ಇಲ್ಲಿ ಬಿದ್ದಿವೆ ಎಂದು ತಿಳಿಸಿದ್ದಾರೆ. ಈ ವೇಳೆ ಮುಷರತ್ ಪಾಷ ಅವರ ಸಹೋದರ ಟಿಎಪಿಸಿಎಂಎಸ್ ಉಪಾಧ್ಯಕ್ಷ ನೂರ್ ಅಹಮದ್ ಮನೆಗೆ ತೆರಳಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದ್ದು, ತಕ್ಷಣ ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಅಲ್ಲದೇ ಹೈದರಾಬಾದ್ ಪ್ರವಾಸದಲ್ಲಿದ್ದ ಮುಷರತ್ ಪಾಷ ಅವರನ್ನು ನೂರ್ ಅಹಮ್ಮದ್ ವಾಪಸ್ ಕರೆಸಿದ್ದಾರೆ.

ಶುಕ್ರವಾರ ಬೆಳಗ್ಗೆ ವಿಷಯ ತಿಳಿದು ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಎಸ್‌ಐ ಪ್ರಕಾಶ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಬಿರುಗಾಳಿ ಮಳೆಗೆ ನೆಲಕಚ್ಚಿದ ಬಾಳೆ



ನಂಜನಗೂಡು, ಮೇ 4– ಶುಕ್ರವಾರ ಸಂಜೆ ಸುರಿದ ಭಾರೀ ಮಳೆಗೆ ಲಕ್ಷಾಂತರ ರೂ. ಮೌಲ್ಯದ ಕಟಾವಿಗೆ ಬಂದಿದ್ದ ಬಾಳೆ ಫಸಲು ನಾಶವಾಗಿರುವ ಘಟನೆ ತಾಲೂಕಿನ ತುಮ್ಮ ನೇರಳೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ನಾಗರಾಜು ಅವರಿಗೆ ಸೇರಿದ ಬಾಳೆ ಬೆಳೆ ನಾಶವಾಗಿರುವುದು. ನಾಗರಾಜು ಅವರು 8 ಎಕರೆ ಪ್ರದೇಶದಲ್ಲಿ ಬಾಳೆ ಬೆಳೆದಿದ್ದರು. ಆದರೆ ಶುಕ್ರವಾರ ಸುರಿದ ಭಾರೀ ಮಳೆಗೆ ಕಟಾವಿಗೆ ಬಂದಿದ್ದ ಬಾಳೆ ಫಸಲು ಸಂಪೂರ್ಣ ನಾಶವಾಗಿದೆ.

ರೈತರಾದ ನಾಗರಾಜು ಮಾತನಾಡಿ, ಲಕ್ಷಾಂತರ ಸಾಲ ಮಾಡಿ ಬಾಳೆ ಬೆಳೆದಿದ್ದು, ಸಾಕಷ್ಟು ಆದಾಯದ ನಿರೀಕ್ಷೆಯಲ್ಲಿದ್ದೆ. ಆದರೆ ಬಿರುಗಾಳಿ ಮಳೆಗೆ ಫಸಲು ಸಂಪೂರ್ಣ ನಾಶವಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ಅಂಗನವಾಡಿ ಕೇಂದ್ರ ಅಸಮರ್ಪಕ ನಿರ್ವಹಣೆ ಹಿನ್ನೆಲೆ

ಬೀಗ ಜಡಿದು ಹರಳಹಳ್ಳಿ ಗ್ರಾಮಸ್ಥರ ಆಕ್ರೋಶ



ಹುಣಸೂರು, ಮೇ 4– ತಾಲೂಕಿನ ಕಿರಂಗೂರು ಗ್ರಾಪಂ ವ್ಯಾಪ್ತಿಯ ಹರಳಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದ ಅಸಮರ್ಪಕ ನಿರ್ವಹಣೆಯಿಂದ ಬೇಸತ್ತ ಗ್ರಾಮಸ್ಥರು, ಪಿಡಿಓ ಸಮ್ಮುಖದಲ್ಲಿ ಅಂಗನವಾಡಿಗೆ ಬೀಗ ಜಡಿದು ಆಕ್ರೋಶ ವ್ಯಕ್ತಪಡಿಸಿದರು.

ಅಂಗನವಾಡಿಗೆ ಬೀಗ ಜಡಿದಿದ್ದ ಹಿನ್ನೆಲೆಯಲ್ಲಿ ಗುರುವಾರ ಎಸಿಡಿಪಿಓ ವೀಣಾ ಹಾಗೂ ಮೇಲ್ವಿಚಾರಕಿ ಸುಮಂಗಲಿ ಭೇಟಿ ನೀಡಿ ಗ್ರಾಮಸ್ಥರ ಸಭೆ ನಡೆಸಿದರು.

ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷ ಅಣ್ಣಯ್ಯ, ಸದಸ್ಯ ಹರೀಶ್‌ಗೌಡ ಸೇರಿದಂತೆ ಮುಖಂಡರಾದ ಮಹದೇವು, ಗೌರಮ್ಮ, ಈರೇಗೌಡ, ಮಹದೇವಿ ಮತ್ತಿತರರು ಅಂಗನವಾಡಿ ಕಾರ್ಯಕರ್ತೆ ಸುಜಾತಾಬಾಯಿ ಅವರು ಕೇಂದ್ರವನ್ನು ಸೂಕ್ತ ನಿರ್ವಹಣೆ ಮಾಡುತ್ತಿಲ್ಲ. ಆದಿವಾಸಿ ಮಕ್ಕಳನ್ನು ಕೀಳಾಗಿ ಕಾಣುತ್ತಾರೆ. ದೂರ ಕೂರಿಸುತ್ತಾರೆ. ಸರಿಯಾಗಿ ಪಡಿತರ ವಿತರಿಸುವುದಿಲ್ಲ. ಹೀಗಾಗಿ ಗ್ರಾಪಂಗೆ ಹಾಗೂ ಸಿಡಿಪಿಓಗೆ ದೂರು ನೀಡಿದ್ದೆವು. ಪಿಡಿಓ ಭವ್ಯ ಸಹ ಅನೇಕ ಬಾರಿ ತಿಳುವಳಿಕೆ ನೀಡಿದ್ದರು. ಗ್ರಾಮಸ್ಥರು ಎಷ್ಟೇ ಎಚ್ಚರಿಸಿದ್ದರೂ ಪ್ರಯೋಜನವಾಗದೆ ಗ್ರಾಮಸ್ಥರು ಸೇರಿ ಬೀಗ ಹಾಕಿದ್ದೇವೆಂದು ಹೇಳಿ, ಈ ಕೇಂದ್ರಕ್ಕೆ ಬದಲಿ ಶಿಕ್ಷಕಿ ನೇಮಿಸುವಂತೆ ಪಟ್ಟು ಹಿಡಿದರು. ಅಂಗನವಾಡಿ ಶಿಕ್ಷಕಿ ಸುಜಾತಾಬಾಯಿ ಕೇಂದ್ರದ ಸಹಾಯಕಿ ಅನಾರೋಗ್ಯದಿಂದ ಬರುತ್ತಿಲ್ಲ. ಒಬ್ಬರಿಂದ ನಿರ್ವಹಣೆ ಸಾಧ್ಯವಿಲ್ಲ ನನ್ನಿಂದ ತಪ್ಪಾಗಿದ್ದು, ಮುಂದೆ ಸರಿಪಡಿಸಿಕೊಂಡು ಹೋಗುವೆನೆಂಬ ಭರವಸೆ ಮೇರೆಗೆ ಗ್ರಾಮಸ್ಥರು ಒಪ್ಪಿ ಇವರನ್ನೇ ಮುಂದುವರೆಸುವುದು. ಮುಂದೆ ಇದೇ ರೀತಿ ನಡೆದುಕೊಂಡಲ್ಲಿ ಇವರ ವಿರುದ್ಧ ಕ್ರಮವಹಿಸಬೇಕೆಂಬ ಗ್ರಾಮಸ್ಥರ ಬೇಡಿಕೆ ಮೇರೆಗೆ ಅಂಗನವಾಡಿ ತೆರೆಯಲು ಅವಕಾಶ ಮಾಡಿಕೊಟ್ಟರು.

ಗಾವಡಗೆರೆಯಲ್ಲಿ ಭಾರೀ ಗಾಳಿ–ಮಳೆ: ಲಕ್ಷಾಂತರ ರೂ. ನಷ್ಟ

ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು, ಹಾರಿಹೋದ ಮನೆ ಮೇಲ್ಛಾವಣಿ





ಹಿರೀಕ್ಯಾತನಹಳ್ಳಿ, ಮೇ 4– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯಾದ್ಯಂತ ಶುಕ್ರವಾರ ಸಂಜೆ ಸುರಿದ ಭಾರೀ ಗಾಳಿ ಮಳೆಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಗಾಳಿಯ ರಭಸಕ್ಕೆ ಮನೆಗಳ ಮೇಲ್ಛಾವಣಿ ಹಾರಿ ಹೋಗಿದ್ದರೇ, ಹಲವೆಡೆ ಮರಗಳು ಹಾಗೂ 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ರಸ್ತೆಗೆ ಮರಗಳು ಉರುಳಿದ ಪರಿಣಾಮ ವಾಹನ ಸವಾರರು ತೊಂದರೆ ಅನುಭವಿಸುವಂತಾಯಿತು. ಅಲ್ಲದೇ ಮರಗಳು ವಿದ್ಯುತ್ ತಂತಿ ಮೇಲೆ ಬಿದ್ದಿದ್ದರಿಂದ ಹೋಬಳಿಯ ಹಲವು ಗ್ರಾಮಗಳಲ್ಲಿ ಸಾರ್ವಜನಿಕರು ರಾತ್ರಿ ಇಡೀ ಕತ್ತಲೆಯಲ್ಲೇ ಕಾಲ ಕಳೆಯುವಂತಾಯಿತು.

ಇನ್ನು, ಮರೂರು ಗ್ರಾಮದ ವೆಂಕಟೇಶ್ ಎಂಬುವರಿಗೆ ಸೇರಿದ 1 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ಬಾಳೆ ಬೆಳೆ ಸಂಪೂರ್ಣ ನಾಶವಾಗಿದೆ. ರಾಮೇನಹಳ್ಳಿ ಗ್ರಾಮದ ಅಶೋಕ ಎಂಬುವರಿಗೆ ಸೇರಿದ ದನದ ಕೊಟ್ಟಿಗೆ ಮೇಲೆ ವಿದ್ಯುತ್ ಕಂಬ ಬಿದ್ದು ಕೊಟ್ಟಿಗೆ ಸಂಪೂರ್ಣ ಹಾಳಾಗಿದ್ದು ದನಕರುಗಳು ಪ್ರಾಣಾಪಾಯದಿಂದ ಪಾರಾಗಿವೆ.

ಹಿರೀಕ್ಯಾತನಹಳ್ಳಿ ಗ್ರಾಮದ ಭೀಮಯ್ಯ ಅವರ ಮಗ ಸವಲಯ್ಯ ಎಂಬುವರ ಮನೆಯ 10ಕ್ಕೂ ಹೆಚ್ಚು ಶೀಟ್‌ಗಳು ಗಾಳಿಗೆ ಹಾರಿ ಹೋಗಿದ್ದು, ಮನೆಯಲ್ಲಿದ್ದ ದವಸ ಧಾನ್ಯಗಳು ಸೇರಿದಂತೆ ಗೃಹೋಪಯೋಗಿ ವಸ್ತುಗಳು ಮಳೆಗೆ ಆಹುತಿಯಾಗಿದೆ. ಇನ್ನು, ಇದೇ ಗ್ರಾಮದ ದಿನೇಶ್ ಎಂಬುವರ ಮನೆ ಮೇಲ್ಛಾವಣಿ ಕೂಡ ಹಾರಿ ಹೋಗಿವೆ. ಶಿರೇನಹಳ್ಳಿ ಗ್ರಾಮದ ಲೋಕೇಶ್ ಎಂಬುವರ ಮನೆ ಪಡಸಾಲೆಗೆ ಅಳವಡಿಸಿದ್ದ ಸೀಟುಗಳು ಕೂಡ ಹಾರಿಹೋಗಿವೆ. ಕೆರಗಾರ ಕೊಪ್ಪಲು ಗ್ರಾಮದ ಶಿವೇಗೌಡ ಎಂಬುವರ ಮನೆ ಅರ್ಧ ಭಾಗ ಬಿದ್ದುಹೋಗಿದೆ.

ಭಾರೀ ಮಳೆ: ಮೇದನಿಯಲ್ಲಿ ಅಪಾರ ನಷ್ಟ



ತಿ.ನರಸೀಪುರ, ಮೇ 4– ತಾಲೂಕಿನಲ್ಲಿ ಶುಕ್ರವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ತಾಲೂಕಿನ ಮೇದನಿ ಗ್ರಾಮದಲ್ಲಿ ಅಪಾರ ನಷ್ಟ ಸಂಭವಿಸಿದೆ.

ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಜನರು ಖುಷಿಪಟ್ಟರೆ, ಬಿರುಗಾಳಿಗೆ ಸಿಲುಕಿ ಬಾಳೆ, ತೆಂಗಿನ ಮರ, ವಿದ್ಯುತ್ ಕಂಬಗಳು ಧರೆಗುರುಳಿವೆ. ಮನೆಗಳ ಹೆಂಚು, ಕಲ್ನಾರ್ ಸೀಟ್‌ಗಳು ಗಾಳಿಗೆ ತೂರಿ ಹೋಗಿ ರೈತಾಪಿ ವರ್ಗ ಕಂಗಾಲಾಗಿದ್ದಾರೆ.

ನೂರಾರು ಎಕರೆ ಬಾಳೆ ನೆಲಕಚ್ಚಿದೆ. ಗೊನೆ ಕಟ್ಟುವ ಹಂತದಲ್ಲಿದ್ದ ಬಾಳೆ ನೆಲಕ್ಕುರುಳಿರುವುದರಿಂದ ಲಕ್ಷಾಂತರ ರೂ. ನಷ್ಟವಾಗಿದೆ. ತೆಂಗು, ಅಡಿಕೆ ಸೇರಿದಂತೆ ಹಲವು ಬೆಳೆ ನಾಶವಾಗಿದ್ದು, ಅಧಿಕಾರಿಗಳು ರೈತರ ನೆರವಿಗೆ ಬರಬೇಕಿದೆ ಇಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ

ಬಿರುಗಾಳಿ ಸಹಿತ ಸುರಿದ ಧಾರಕಾರ ಆಲಿಕಲ್ಲು ಮಳೆಗೆ 30ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಕೆಲ ಮನೆಗಳು ಕುಸಿದರೆ, ಇನ್ನೂ ಕೆಲ ಮನೆಗಳು ಹಾಗೂ ಗ್ರಾಮದೇವತೆ ದೇವಸ್ಥಾನದ ಮೇಲ್ಛಾವಣಿ ಹಾರಿ ಹೋಗಿದೆ. ಹೀಗಾಗಿನ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳುಸ್ಥಳ ಪರಿಶೀಲಿಸಿ ಹಾನಿಗೊಳಗಾದ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ವೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ,
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಸಬರಿ (ತೆ): ಮ.1.50ಕ್ಕೆ, ಮಲಯಾಳಿ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷಂಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೌಟುಂಬಿಕ ಕಲಹ: ನದಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ



ನಂಜನಗೂಡು, ಮೇ 4– ಕೌಟುಂಬಿಕ ಕಲಹದಿಂದ ಬೇಸತ್ತ ವ್ಯಕ್ತಿಯೊಬ್ಬರು ಕಪಿಲಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹಂಡುವಿನಹಳ್ಳಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ನಿವಾಸಿ ಹೆಚ್.ಎಂ.ನಾಗರಾಜು(55) ಸಾವನ್ನಪ್ಪಿದವರು. ಈತನಿಗೆ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮನನೊಂದಿದ್ದ ನಾಗರಾಜು ಶುಕ್ರವಾರ ನಾಪತ್ತೆಯಾಗಿದ್ದ ಎನ್ನಲಾಗಿದೆ. ಶನಿವಾರ ಬೆಳಗ್ಗೆ ನಗರದ ಅಯ್ಯಪ್ಪಸ್ವಾಮಿ ದೇವಾಲಯದ ಬಳಿಯ ಕಪಿಲಾನದಿಯ ಸ್ನಾನಘಟ್ಟದಲ್ಲಿ ಈತನ ಶವ ಪತ್ತೆಯಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹರಿಶ್ಚಂದ್ರ ನಿಧನ



ಹುಣಸೂರು, ಮೇ 4– ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಅವರ ಸಹೋದರ, ತಾಲೂಕಿನ ಪಾಲ ಹೊಸೂರು ಗ್ರಾಮದ ನಿವಾಸಿ ಹರಿಶ್ಚಂದ್ರ (58) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೆ.ಚಿನ್ನಸ್ವಾಮಿ



ಬನ್ನೂರು, ಮೇ 4– ಪಟ್ಟಣದ ಸಮೀಪದ ಹನುಮನಾಳು ಗ್ರಾಮದ ನಿವಾಸಿ, ನಿವೃತ್ತ ತೋಟಗಾರಿಕೆ ಇಲಾಖೆ ಅಧಿಕಾರಿ ಜೆ.ಚಿನ್ನಸ್ವಾಮಿ(76) ಶನಿವಾರ ನಿಧನರಾದರು. ಮೃತರು ಪತ್ನಿ ಪುಟ್ಟಗೌರಮ್ಮ, ಪುತ್ರ ರಾಘವೇಂದ್ರ, ಪುತ್ರಿ ಹೇಮಲತಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಭಾನುವಾರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1ನೇ ವರ್ಷದ ಪುಣ್ಯಸ್ಮರಣೆ



ಶ್ರೀ ರಂಗೇಗೌಡ ಉ॥ ಚಿಕ್ಕಣ್ಣ ರವರು

ನೀವು ನಮ್ಮನ್ನು ಅಗಲಿ ಇಂದಿಗೆ 1 ವರ್ಷ ಕಳೆಯಿತು,
ಆ ಭಗವಂತನು ನಿಮ್ಮ ಆತ್ಮಕ್ಕೆ ಸದಾ ಶಾಂತಿಯನ್ನು ಕರುಣಿಸಲೆಂದು

ದುಃಖತಪ್ತರು: ಧರ್ಮಪತ್ನಿ ಶ್ರೀಮತಿ ಹೆಚ್.ಸುಶೀಲಮ್ಮ
ಮಕ್ಕಳಾದ ಜ್ಯೋತಿ ಸಂಪತ್, ರೇಖಾ, ಸತೀಶ್
ಚಂದ್ರೇಗೌಡ ಲಕ್ಷ್ಮೀದೇವಿ, ಈರಣ್ಣ ಪ್ರಭಾವತಿ
ಶ್ರೀಮತಿ ರಜನಿ ಅಣ್ಣಯ್ಯ, ಮೊಮ್ಮಕ್ಕಳು ಹಾಗೂ ಆರ್.ರಂಗಯ್ಯನವರ
ಕುಟುಂಬವರ್ಗದವರು ಮತ್ತು ಯರಗನಹಳ್ಳಿ ಗ್ರಾಮಸ್ಥರು

ATTENTION !!!

The general public is hereby notified that my client Suma Mahesh wife of Mahesh has instituted a suit in O.S.No. 178 of 2024 in the court of the Hon'ble Court of the II Addl. Senior Civil Judge and CJM, Mysuru, against (1) R.Girish Adiga (2) Uma Sridhar @ P.R.Uma, daughter of late P.Ramamurthy Adiga, (3) Hema Sudhir @ Hema.S.Rao, daughter of late P.Ramamurthy Adiga, (4) Vasanthi Adiga wife of late P.Ramamurthy Adiga, and (5) V.Nagaraj, son of Venkateshwara Bairy, for partition and separate possession of her 1/5th share in the schedule properties and also for a declaration that the Joint Venture Development agreement executed in favour of V.Nagaraj dated 22/10/2009 registered as doc.no.MYN-1-09664-2008-09 in book no.1 and stored in CD No.MYND 184 in the office of the Sub-Registrar, Mysuru north, Mysuru, is null void and not binding on her. My client made a motion for grant of temporary injunction restraining the aforesaid persons from selling or creating third party interest the schedule properties. The Hon'ble Court was pleased to pass an order directing the parties to maintain STATUS QUO. Hence the general public are hereby notified and cautioned that any attempt or expression of interest to purchase the schedule property or deal with the same would be illegal and prohibited by law.

"A" Schedule Properties

Item No.1: All piece and parcels of agricultural land bearing survey No. 99/1 (Old No.99) measuring to an extent of 26 gunta and situated at Madagalli village of Yelwala Hobli of Mysuru Taluk and Mysuru District and bounded on East by Land belonging to Sri. Shambulinge Gowda, West by Land belonging to Sri. Ramamurthy Adiga, North by Land belonging to Sri. Ramamurthy Adiga, South by Land belonging to Sri. S Bore gowda and his heirs.

Item no.2: All piece and parcels of agricultural land bearing survey No.102/1 (Old. No. 102) measuring to an extent of 1 Acre 21 gunta, and situated at Madagalli village of Yelwala Hobli of Mysuru Taluk and Mysuru District and bounded on East by Land belonging to Sri. Chikkarache Gowda and Sri. Boregowda, West by Land belonging to Sri. Chikkarache Gowda, North by Land bearing survey No. 103, South by Land belonging to Sri. Chikkarache Gowda.

Item no.3: All piece and parcels of agricultural land bearing survey No. 103/1 (Old No. 103) measuring to an extent of 4 Acre 18 gunta, and situated at Madagalli village of Yelwala Hobli of Mysuru Taluk and Mysuru District and bounded on East by Land bearing survey No. 104, West by Land belonging to Paape Gowda, North by Road, South by Land bearing survey No. 102.

Item no.4: All piece and parcels of agricultural land bearing survey No. 104/2, (Old No.104) measuring to an extent of 4 Acre 18 gunta, and situated at Madagalli village of Yelwala Hobli of Mysuru Taluk and Mysuru District and bounded on East by Government Cannal, West by Land bearing survey No. 103, North by Road, South by Land belonging to Sri. Boregowda.

In all measuring 9 acres 34 guntas comprising of developed sites

"B" Schedule Properties

Number of Sites: 86, Total Extent: 17600.07 Sq. Mtr.

Identified as owner's share:-

Site No. 3 Site No. 4 Site No. 5 Site No. 10 Site No. 11
Site No. 13 Site No. 18 Site No. 19 Site No. 20 Site No. 22
Site No. 23 Site No. 24 Site No. 25 Site No. 26 Site No. 27
Site No. 28 Site No. 34 Site No. 35 Site No. 36 Site No. 37
Site No. 38 Site No. 39 Site No. 40 Site No. 45 Site No. 46
Site No . 47 Site No. 48 Site No. 58 Site No.59 Site No. 60
Site No.61 Site No. 62 Site No. 63 Site No. 64 Site No. 65
Site No. 66 Site No. 69 Site No. 73 Site No. 74 Site No. 78
Site No.79 Site No. 80 Site No. 84 Site No. 85 Site No. 86

Identified as Developer's share:

Site No. 2 Site No. 6 Site No. 7 Site No. 8
Site No. 9 Site No. 12 Site No. 14 Site No. 15 Site No. 16
Site No. 17 Site No. 21 Site No. 29 Site No. 30 Site No. 31.
Site No. 32 Site No.33 Site No. 41 Site No. 42 Site No. 43
Site No. 44 Site No. 49 Site No. 50 Site No. 51 Site No. 52
Site No. 53 Site No. 54 Site No. 55 Site No. 56 Site No. 57
Site No. 68 Site No. 67 Site No. 70 Site No. 71 Site No. 72
Site No. 75 Site No. 76 Site No. 77 Site No. 81 Site No. 82
Site No. 83

Sd/- **A.S.NATARAJ,** B.Sc., LL.M.,
Advocate, Enl No. 120/1974,No.116. 1st Floor, Banumaiah Chowk, Mysuru Mobile No.98451 10636
Email: asnataraj53@gmail.com

Place: Mysuru
Dated: 04.05.2024